ಕನ್ನಡ

# ಸುಗಮ ಭಾರತಿ

ಒಂಬತ್ತನೆಯ ಇಯತ್ತೆ



# ಭಾರತದ ಸಂವಿಧಾನ

### ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ - 2116/(ಪ್ರ.ಕ. 43/16) ಎಸ್‌ಡಿ-4 ದಿನಾಂಕ 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿ. 3.3.2017ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ನಿರ್ಧಾರಿತಗೊಳಿಸಲು ಮಾನ್ಯತೆ ಕೊಡಲಾಗಿದೆ.

# ಕನ್ನಡ

# ಸುಗಮ ಭಾರತಿ

## ಒಂಬತ್ತನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನಮಂಡಳ, ಪುಣೆ - 411004.

ನಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

**ಪ್ರಥಮಾವೃತ್ತಿ : 2017**
**ಪ್ರಥಮ ಪುನರ್ಮುದ್ರಣ: 2022**

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ – 4
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.


| | |
|---|---|
| **ಕನ್ನಡ ಭಾಷಾ ಸಮಿತಿ :** | ಡಾ. ಕೆ. ಕೆ. ಪತ್ತಾರ, ಅಧ್ಯಕ್ಷ<br>ಶ್ರೀ. ಶಿವಬಾಳ ಕೆ. ಗೋಲಿ, ಸದಸ್ಯ<br>ಶ್ರೀ. ಬಿ. ಎಸ್. ಕಾಪಸೆ, ಸದಸ್ಯ<br>ಶ್ರೀ. ಹಣಮಂತ ಎಮ್. ಕುಂಭಾರ, ಸದಸ್ಯ<br>ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆ<br>ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ – ಸಚಿವ |
| **ಅಭ್ಯಾಸಗಟ ಸದಸ್ಯರು :** | ಶ್ರೀ. ಶ್ರೀಶೈಲ ಜಿ. ಅವಟಿ<br>ಶ್ರೀ. ಜಿ. ಡಿ. ಮೋರೆ<br>ಶ್ರೀ. ಟಿ. ವ್ಹಿ. ಸದಾನಂದ |
| **ಸಂಯೋಜನ ಪ್ರಮುಖರು :** | ಡಾ. ಸದಾನಂದ ಎಂ ಬಿಳ್ಳೂರ, ವಿಶೇಷಾಧಿಕಾರಿಗಳು, ಕನ್ನಡ ಪಾಠ್ಯಪುಸ್ತಕ ಮಂಡಳ, 'ಬಾಲಭಾರತಿ', ಪುಣೆ – 4<br>ಶ್ರೀ. ಆರ್. ಎಮ್. ಗಣಾಚಾರಿ, ವಿಷಯ ಸಹಾಯಕ ಕನ್ನಡ |
| **ಮುಖಪುಟ :** | ಶ್ರೀ. ರಾಜೇಂದ್ರ ಗಿರಧಾರಿ. |
| **ನಿರ್ಮಿತಿ :** | ಶ್ರೀ. ಸಚ್ಚಿತಾನಂದ ಆಫಳೆ. ಮುಖ್ಯ ನಿರ್ಮಿತಿ ಅಧಿಕಾರಿ<br>ಶ್ರೀ. ರಾಜೇಂದ್ರ ಚಿಂದರಕರ, ನಿರ್ಮಿತಿ ಅಧಿಕಾರಿ |
| **ಅಕ್ಷರ ಜೋಡಣೆ :** | ಕೇಸನ್ ಲ್ಯಾಂಗ್ವೇಜ್ ಬ್ಯೂರೋ |
| **ಕಾಗದ :** | 70 ಜಿ. ಎಸ್. ಎಮ್. ಕ್ರೀಮ್‌ವೋವ್ಹ್ |
| **ಮುದ್ರಣಾದೇಶ :** | |
| **ಮುದ್ರಕ :** | |
| **ಪ್ರಕಾಶಕ :** | ಶ್ರೀ. ವಿವೇಕ ಗೋಸಾವಿ, ನಿಯಂತ್ರಕ,<br>ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ – 25. |

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

ಪ್ರೀಯ ವಿದ್ಯಾರ್ಥಿ ಗೆಳೆಯರೆ,

ನಿಮ್ಮೆಲ್ಲರಿಗೂ ಒಂಬತ್ತನೆಯ ತರಗತಿಯಲ್ಲಿ ಸ್ವಾಗತವಿದೆ. ಈ ಹಿಂದಿನ ತರಗತಿಯಲ್ಲಿ 'ಸುಗಮ ಭಾರತಿ' ಕನ್ನಡ ಪಠ್ಯಪುಸ್ತಕವನ್ನು ನೀವು ಅಭ್ಯಸಿಸಿದ್ದೀರಿ. ಒಂಬತ್ತನೆಯ ಈ ಪಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿಡಲು ನಮಗೆ ಅತೀ ಆನಂದವಾಗುತ್ತದೆ.

ಗೆಳೆಯರೇ, ಕನ್ನಡವು ನಮ್ಮ ಮಾತೃಭಾಷೆಯಾಗಿದೆ. ಈ ಭಾಷೆಯ ಜ್ಞಾನ ನಮಗಾಗಬೇಕು. ಈ ಭಾಷೆಯಿಂದ ಸ್ಪಷ್ಟವಾಗಿ ನಮ್ಮ ಭಾವನೆ, ಕಲ್ಪನೆ, ಇಚ್ಛೆ ವ್ಯಕ್ತಗೊಳಿಸಲು ಬರಬೇಕು. ಈ ಭಾಷೆ ಬರೆಯಲು-ಓದಲು ಬರಬೇಕೆಂದು ಈ ಪಠ್ಯಪುಸ್ತಕದಲ್ಲಿ ವೈವಿಧ್ಯಪೂರ್ಣವಾದ ಅಧ್ಯಯನ ಅನುಭವ ಕೊಡಲಾಗಿದೆ. ಸುಂದರವಾದ ಕವಿತೆಗಳು, ಕಥೆ, ಸಂಭಾಷಣೆ ಕೇಳಿ ಮತ್ತು ಹೇಳಿ ನಿಮಗೆ ಕನ್ನಡ ಭಾಷೆಯ ರುಚಿ ನಿರ್ಮಾಣ ಮಾಡುವ ಪ್ರಯತ್ನ ಮಾಡಲಾಗಿದೆ.

ನಿಮ್ಮ ಭಾಷಾ ಕೌಶಲ್ಯಗಳು ಹೆಚ್ಚೆಚ್ಚು ವಿಕಸಿತವಾಗಲು ನಾವೀನ್ಯಪೂರ್ಣ ಸ್ವಾಧ್ಯಾಯ, ಕೃತಿ, ಉಪಕ್ರಮ, ಭಾಷೆಯ ಆಟಗಳನ್ನು ಈ ಪಠ್ಯಪುಸ್ತಕದಲ್ಲಿ ಸಮಾವೇಶಗೊಳಿಸಲಾಗಿದೆ. ಈ ಉಪಕ್ರಮ ಮತ್ತು ಕೃತಿಗಳು ನಿಮ್ಮ ಜ್ಞಾನ ನಿರ್ಮಿತಿಗೆ ಅವಕಾಶವನ್ನುಂಟು ಮಾಡುವವು. ಶಾಲೆಯ ಜ್ಞಾನವು ದೈನಂದಿನ ಜೀವನಕ್ಕೆ ಹೊಂದಿಕೊಳ್ಳುವದಾಗಿದೆ. ಭಾಷಾ ಕೌಶಲ್ಯದೊಂದಿಗೆ ನಿಮ್ಮ ಜೀವನ ಕೌಶಲ್ಯವನ್ನು ವಿಕಸಿತಗೊಳಿಸುವದಿದೆ. ಈ ಪುಸ್ತಕದಲ್ಲಿಯ ಸ್ವಾಧ್ಯಾಯ ಬಿಡಿಸುವಾಗ ನಿಮ್ಮ ನಿರೀಕ್ಷಣ ಕ್ಷಮತೆ, ನಿರ್ಣಯ ಕ್ಷಮತೆ, ಚಿಕಿತ್ಸಕ ವಿಚಾರ ಪ್ರಕ್ರಿಯೆ ಮುಂತಾದವುಗಳಿಗೆ ಪ್ರೇರಣೆ ದೊರಕುವದು, ಕೃತಿಶೀಲತೆಗೆ ಅವಕಾಶ ದೊರಕುವದು.

ಕನ್ನಡ ಭಾಷೆ ಕಲಿಯುವ ಪ್ರಕ್ರಿಯೆಯು ಆನಂದದಾಯಕ ಮತ್ತು ನಿಮಗೆ ಸ್ವಯಂ ಅಧ್ಯಯನಕ್ಕೆ ಚಾಲನೆ ದೊರಕಬೇಕು ಎಂಬ ದೃಷ್ಟಿಕೋನವನ್ನು ಇಟ್ಟುಕೊಂಡು ಈ ಪುಸ್ತಕವನ್ನು ನಿರ್ಮಿಸಲಾಗಿದೆ. ಕನ್ನಡ 'ಸುಗಮ ಭಾರತಿ' ಎಂಬ ಒಂಬತ್ತನೆಯ ತರಗತಿಯ ಈ ಪುಸ್ತಕವು ನಿಮ್ಮೆಲ್ಲರಿಗೂ ನಿಶ್ಚಿತವಾಗಿ ಹಿಡಿಸಬಹುದು ಎಂಬ ಅಪೇಕ್ಷೆ ಇದೆ.

(ಡಾ. ಸುನಿಲ ಮಗರ)
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ
ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

ಪುಣೆ
ದಿನಾಂಕ: 28 ಎಪ್ರಿಲ್ 2017, ಅಕ್ಷಯತೃತೀಯಾ
8, ವೈಶಾಖ, ಶಕೆ 1939

## ಕನ್ನಡ ಸುಗಮ ಭಾರತಿ : ಒಂಬತ್ತನೆಯ ಇಯತ್ತೆ

| ಕ್ಷೇತ್ರಗಳು | ಕ್ಷಮತೆಗಳು |
|---|---|
| ಶ್ರವಣ | 1. ಏಕಾಗ್ರತೆಯಿಂದ ಕೇಳುವುದು. ಮಕ್ಕಳು ಬೇರೆ ಬೇರೆ ವಿಷಯಗಳಲ್ಲಿಯ ಭಾಷಣ, ವರ್ಣನೆ, ತಮಗೆ ಇಷ್ಟವಾದ ಹಾಡು, ಕಥೆಗಳನ್ನು ಲಕ್ಷ್ಯಪೂರ್ವಕವಾಗಿ ಕೇಳುವುದು.<br>2. ಆಲಿಸಿದ ವಿಷಯದ ಕುರಿತಾಗಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು.<br>3. ಶಾಲೆಯ ವಿಶಿಷ್ಟ ಪ್ರಸಂಗಗಳಲ್ಲಿ ನೀಡಿದ ಸೂಚನೆ, ಆಜ್ಞೆ, ವಿನಂತಿ ಮತ್ತು ಕೇಳಿದ ಪ್ರಶ್ನೆಗಳಿಗೆ ಸ್ಪಂದಿಸುವುದು.<br>4. ಮೌಖಿಕ ಸೂಚನೆ, ಆಜ್ಞೆ, ವಿನಂತಿ, ಪ್ರಶ್ನೆ ಇತ್ಯಾದಿಗಳ ಅರ್ಥ ತಿಳಿದುಕೊಂಡು ಕೇಳುವುದು.<br>5. ದೃಕ್-ಶ್ರಾವ್ಯ ಮಾಧ್ಯಮಗಳ ಮೂಲಕ ವಾರ್ತೆಗಳನ್ನು, ಶೈಕ್ಷಣಿಕ ಕಾರ್ಯಕ್ರಮಗಳನ್ನು ಕೇಳುವುದು. |
| ಭಾಷಣ/ ಸಂಭಾಷಣ | 1. ಶಾಲೆ ಹಾಗೂ ಶಾಲಾಬಾಹ್ಯ ಪರಿಸರದಲ್ಲಿ ಕೇಳಿದ ಹಾಡು ಮತ್ತು ಕಥೆಯ ಪ್ರಕಾರಗಳನ್ನು ಲಯ, ಸ್ವರ ತಾಳದೊಂದಿಗೆ ಹಾಡಲು ಪ್ರಯತ್ನಿಸುವುದು.<br>2. ತಮ್ಮ ಅನುಭವ, ಕಲ್ಪನೆ, ಭಾವನೆ ಮತ್ತು ವಿಚಾರಗಳನ್ನು ಸ್ಪಷ್ಟವಾಗಿ, ಆತ್ಮ ವಿಶ್ವಾಸದಿಂದ ವ್ಯಕ್ತಪಡಿಸುವುದು,<br>3. ಸಂವಾದ/ಚರ್ಚೆಗಳಲ್ಲಿ ಪಾಲ್ಗೊಂಡು ಸುಸಂಗತವಾಗಿ ಮಾತನಾಡುವುದು. ಕೇಳಿದ ಪ್ರಶ್ನೆಗಳಿಗೆ ಯೋಗ್ಯ ಉತ್ತರಗಳನ್ನು ಕೊಡುವುದು. ಆಶಯನುಸಾರವಾಗಿ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ವಿಚಾರಗಳನ್ನು ಮಂಡಿಸುವುದು. |
| ವಾಚನ | 1. ಮುದ್ರಿತ ಹಾಗೂ ಹಸ್ತಲಿಖಿತ ವಿವರಗಳನ್ನು ನಿರ್ದೋಷವಾಗಿ ಪ್ರಕಟವಾಚನ ಮಾಡುವುದು.<br>2. ಪಠ್ಯ ಹಾಗೂ ಪಠ್ಯೇತರ ಪುಸ್ತಕಗಳಲ್ಲಿಯ ಮುದ್ರಿತ ಹಾಗೂ ಹಸ್ತಲಿಖಿತ ವಿವರಗಳನ್ನು ತಿಳಿದುಕೊಂಡು ಪ್ರಕಟವಾಚನ ಮಾಡುವುದು.<br>3. ಆಯ್ದ ಲೇಖನ ಭಾಗಗಳ ಅರ್ಥ ತಿಳಿದುಕೊಂಡು ಪ್ರಕಟವಾಚನವನ್ನು ನಿರ್ದಿಷ್ಟ ವೇಳೆಯಲ್ಲಿ ಏಕಾಗ್ರತೆಯಿಂದ ಮಾಡುವುದು. ಕ್ರಮವಾಗಿ ವಾಚನದ ಗತಿಯನ್ನು ಹೆಚ್ಚಿಸಿಕೊಳ್ಳುವುದು.<br>4. ವಿಷಯಗಳನ್ನು ತಿಳಿದುಕೊಂಡು ಏಕಾಗ್ರತೆಯಿಂದ ಮೌನವಾಚನ ಮಾಡುವುದು. |
| ಲೇಖನ | 1. ಪಠ್ಯ ಹಾಗೂ ಪಠ್ಯೇತರ ಆಯ್ದ ವಿಶಿಷ್ಟ ಭಾಗದ ಅನುಲೇಖನ ಮಾಡುವುದು.<br>2. ಲೇಖನದ ನಿಯಮಗಳನ್ನು ತಿಳಿದುಕೊಂಡು ಶ್ರುತಲೇಖನ ಮಾಡುವುದು.<br>3. ಶ್ರುತಲೇಖನದಲ್ಲಿ ಕಂಡುಬರುವ ದೋಷಗಳನ್ನು ವರ್ಗಮಿತ್ರರ/ಶಿಕ್ಷಕರ ಸಹಾಯದಿಂದ ನಿವಾರಿಸಿಕೊಳ್ಳುವುದು.<br>4. ಆಲಿಸಿದ ಹಾಗೂ ಓದಿದ ಭಾಗದ ಮೇಲೆ ಕೇಳಿದ ಪ್ರಶ್ನೆಗಳಿಗೆ ಸ್ವತಃ ಉತ್ತರಗಳನ್ನು ಬರೆಯುವುದು.<br>5. ಎಂಟರಿಂದ ಹತ್ತು ಸಾಲುಗಳವರೆಗೆ ತಮ್ಮ ವಿಚಾರ, ಭಾವನೆ ಮತ್ತು ಕಲ್ಪನೆಗಳನ್ನು ಬರೆಯಲು ಬರುವುದು.<br>6. ಸುಂದರ ಹಾಗೂ ಶುದ್ಧ ನಿಬಂಧಾತ್ಮಕ ಲೇಖನ ಬರೆಯುವುದು. ಸ್ವಯಂಲೇಖನ ಮಾಡುವುದು. |

| | | |
|---|---|---|
| ಅಧ್ಯಯನ ಕೌಶಲಗಳು | 1. | ಕವಿತೆ, ಹಾಡು, ಕಥೆ ಹೇಳುವ ಸ್ಪರ್ಧೆಗಳಲ್ಲಿ ಮತ್ತು ಚರ್ಚಾಕೂಟಗಳಲ್ಲಿ ಪಾಲ್ಗೊಂಡು ತಮ್ಮ ವಿಚಾರಗಳನ್ನು ಪ್ರಭಾವಿಯಾಗಿ ಮಂಡಿಸುವುದು. |
| | 2. | ಹೊಸ ಶಬ್ದ, ವಾಕ್ಯರಚನೆ ಅಲ್ಲದೆ ಹೊಸ ವಿಷಯಗಳ ಕುರಿತು ಆಕಲನ ಮಾಡಿಕೊಳ್ಳುವುದು. |
| | 3. | ಚರ್ಚೆ/ಸಂವಾದಗಳಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದು. |
| | 4. | ಅಪೇಕ್ಷಿತ ಕೃತಿಗಳನ್ನು ನಿರ್ದಿಷ್ಟ ಸಮಯದಲ್ಲಿ ಮಾಡುವ ಕೌಶಲವನ್ನು ಬೆಳೆಸಿಕೊಳ್ಳುವುದು. |
| | 5. | ಸ್ಪಷ್ಟ ಉಚ್ಚಾರ ಹಾಗೂ ಯೋಗ್ಯ ಧ್ವನಿಯ ಏರಿಳಿತದೊಂದಿಗೆ ಪಠ್ಯೇತರ ಹಾಡು, ಕವಿತೆಗಳನ್ನು ಹಾಡುವದು, ಕಥೆಗಳನ್ನು ಹೇಳುವುದು. |
| | 6. | ಪಠ್ಯ ಹಾಗೂ ಪಠ್ಯೇತರ ಹಾಡು, ಕವಿತೆಗಳನ್ನು ರಾಗ, ತಾಳ ಮತ್ತು ಲಯದೊಂದಿಗೆ ಹಾಡುವದು. ಹಸ್ತಲಿಖಿತ ಹಾಗೂ ಮುದ್ರಿತ ವಿವರಗಳನ್ನು ಯೋಗ್ಯ ಉಚ್ಚಾರದೊಂದಿಗೆ ಓದುವುದು. |
| | 7. | ಪ್ರಕಟವಾಚನದ ಹಾಗೂ ಮೌನವಾಚನದ ಗತಿಯನ್ನು ಹೆಚ್ಚಿಸಿಕೊಳ್ಳುವುದು. ಶ್ರುತಲೇಖನದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವುದು. |
| | 8. | ನಮಗೆ ಬೇಕಾದಂಥ ಚಿತ್ರಗಳು, ವ್ಹಿಡಿಯೋ ಕ್ಲಿಪ್ಸ್, ಫಿಲ್ಮಗಳು ಇತ್ಯಾದಿ ಶೋಧಿಸಲು ಬರುವುದು. |
| | 9. | ಸಂಗಣಕದಲ್ಲಿಯ ಸಾಹಿತ್ಯವನ್ನು ಉಪಯೋಗಿಸುವಾಗ ಸಂಬಂಧಿಕರ ಹಕ್ಕುಗಳ ಉಲ್ಲಂಘನೆಯಾಗದಂತೆ ದಕ್ಷತೆ ವಹಿಸುವುದು. |
| | 10. | ಸಂಗಣಕದಲ್ಲಿಯ ಸಾಹಿತ್ಯವನ್ನು ಉಪಯೋಗಿಸುವಾಗ ಯೋಗ್ಯವಾದ ಶ್ರೇಯಸ್ಸು/ ಸಂದರ್ಭಗಳನ್ನು ನಮೂದಿಸುವಲ್ಲಿ ದಕ್ಷತೆ ವಹಿಸುವುದು. |
| | 11. | ಸಂಗಣಕದ ಮೇಲಿನ ಮಾಹಿತಿಯನ್ನು ಇದ್ದಕ್ಕಿದ್ದಂತೆಯೇ ಬಳಸದೆ ಯೋಗ್ಯ ರೀತಿಯಲ್ಲಿ ಸಂಕಲನ, ಸಂಪಾದನೆ ಹೇಗೆ ಮಾಡಬೇಕೆಂಬುದರ ಬಗ್ಗೆ ತಿಳಿದುಕೊಳ್ಳುವುದು. |

# ಪರಿವಿಡಿ

## ಪದ್ಯ ವಿಭಾಗ


| ಅ. ನಂ | ಪಾಠದ ಹೆಸರು | ಕವಿ/ಲೇಖಕರ ಹೆಸರು | ಪುಟ |
|---|---|---|---|
| 1. | ಅಣ್ಣ ತಮ್ಮಂದಿರು | ಜಾನಪದ | 1 |
| 2. | ಸಂಜೆಯ ರವಿ | ಕುವೆಂಪು | 3 |
| 3. | ಗಾಂಧೀಯವರ ಸ್ಮಾರಕ! | ದಿನಕರ ದೇಸಾಯಿ | 5 |
| 4. | ಸ್ವಂತ ಮನೆ | ಚೆನ್ನವೀರ ಕಣವಿ | 7 |
| 5. | ಕುರುಡನ ದೀವಿಗೆ | ಅಣ್ಣಾರಾಯ ಸಾಲಿಮನಿ | 10 |
| 6. | ಪೌಷ್ಠಿಕ ಆಹಾರ | ಡಿ. ಪದ್ಮಲತಾ | 12 |


## ಗದ್ಯ ವಿಭಾಗ


| | | | |
|---|---|---|---|
| 1. | ಕಾರ್ನಾಡ ಸದಾಶಿವರಾಯರು | ಸಾ. ಜೋಗ | 14 |
| 2. | ಮೂವರು ರೈತರು | ರಾಜೇಶ್ವರಿ ಜಯಕೃಷ್ಣ | 17 |
| 3. | ಚತುರ ನಿರಂಜನ | ಸುಧಾಮೂರ್ತಿ | 20 |
| 4. | ರಕ್ಷಾಬಂಧನ | ಎಚ್.ವ್ಹಿ. ನರಸಿಂಹಮೂರ್ತಿ | 23 |
| 5. | ತಿಲಕಾಷ್ಠ ಮಹಿಷ ಬಂಧನ | – | 26 |
| 6. | ಬಾಷ್ಪೀಭವನ | ಗಾಯತ್ರಿ ಮೂರ್ತಿ | 29 |
| 7. | ಹೂಮಾಲೆ | ಜೆ. ಮಲ್ಲಾರಿ ಭಟ್ಟ | 32 |
| 8. | ಅಪ್ಪನ ಐಶ್ವರ್ಯ | ಹೊಯ್ಸಳ | 35 |
| 9. | ಮೂಢನಂಬಿಕೆ | ಹ.ಮ. ಪೂಜಾರ | 38 |
| 10. | ನಂಟರು | ತೀ. ನಂ. ಶ್ರೀಕಂಠಯ್ಯ | 41 |
| 11. | ಜನಸೇವೆ | ಚಿ. ಶ್ರೀ. ಕುಲಕರ್ಣಿ | 45 |
| 12. | ಜೇನ್ನೊಣ | ಕೆ. ವಿಠ್ಠಲ ಶೆಣೈ | 48 |


## ವ್ಯಾಕರಣ ವಿಭಾಗ


| | | |
|---|---|---|
| • ನಾಮಪದಗಳು | | 51 |
| • ಸರ್ವನಾಮಗಳು | | 51 |
| • ವಿಶೇಷಣಗಳು | | 52 |
| • ಲಿಂಗಗಳು | | 52 |
| • ವಚನಗಳು | | 53 |
| • ವಿಭಕ್ತಿಗಳು | | 54 |
| • ಉಪಸರ್ಗಗಳು | | 55 |
| • ಕಾಲಗಳು | | 55 |
| • ಕರ್ತೃ, ಕರ್ಮ, ಕ್ರಿಯಾಪದಗಳು | | 56 |

1.

# ಅಣ್ಣ-ತಮ್ಮಂದಿರು

ಹೆಣ್ಣೀನ ಜನುಮಕ ಅಣ್ಣತಮ್ಮರು ಬೇಕ
ಬೆನ್ನ ತಟ್ಟುವರು ಸಭೆಯೊಳಗ । ಸಾವಿರ ।
ಹೊನ್ನ ತಟ್ಟುವರು ಉಡಿಯೊಳಗ ॥

ಅವರೀಗಿ ಅವರಣ್ಣ ಅವಲಕ್ಕಿ ಖಳುವ್ಯಾನ ।
ನಮ್ಮಣ್ಣನೇನು ಬಡವೇನ । ಖ್ಯಾದೀಗಿ ।
ಗರಿಯೊಳಗ ಘಳಗಿ । ಖಳಸ್ಯಾನ ।

ಅಕ್ಕತಂಗೆರು ಮೇಲ ಮುತ್ತು ಮಾಣಿಕ ಮೇಲ ।
ಉತ್ತರಿ ಸಾತಿ ಮಳಿ ಮೇಲ । ನನ ತಮ್ಮ ॥
ನೀ ಮೇಲ ನನ್ನ ಬಳಗಾಕ ॥

ಸೊಲ್ಲಾಪುರದಣ್ಣಗ ನಿಲ್ಲದಲೆ ಬರಹೇಳ ।
ಸೀರ್‍ಯೊಲ್ಲೆ ಅವನ ಕುಬಸೊಲ್ಲೆ । ಅಣ್ಣನ ।
ಮಾರಿ ನೋಡಂಥ ಮನವಾಗಿ ॥

- ಜಾನಪದ

ಕೃತಿ 1)

ಅ) **ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ**

1) ಹೆಣ್ಣಿನ ಜನುಮಕೆ ಯಾರು ಬೇಕು ?

2) ಅಣ್ಣನು ಖ್ಯಾದಿಗಿ ಗರಿಯೊಳಗೆ ಏನು ಕಳಿಸುವನು ?

3) ಮಳೆಗಳಲ್ಲಿ ಯಾವ ಮಳೆಗಳು ಶ್ರೇಷ್ಠವಾದವುಗಳು ?

4) ತಂಗಿಗೆ ಯಾರ ಮುಖ ನೋಡುವ ಮನಸಾಗಿದೆ ?

ಬ) **ಕೆಳಗಿನ ಶಬ್ದಗಳ ಗ್ರಾಂಥಿಕ ರೂಪಗಳನ್ನು ಬರೆಯಿರಿ**

| | | | |
|---|---|---|---|
| ಜನುಮ | - | ಖಳುವ್ಯಾನ | - |
| ಬಳಗಾಕ | - | ಸೀರ್‍ಯೊಲ್ಲೆ | - |
| ಮಾರಿ | - | ನೋಡಂಥ | - |
| ಬಡವೇನ | - | ಸಾತಿ | - |

**ಕೃತಿ 2) ಕೆಳಗಿನ ಶಬ್ದಜಾಲವನ್ನು ಪೂರ್ಣಗೊಳಿಸಿರಿ.**

**ಕೆಳಗಿನ ಸಂಬಂಧ ಸೂಚಕ ಹೆಸರುಗಳನ್ನು ಬರೆಯಿರಿ.**

| ತಾಯಿಯ ತಮ್ಮ | ಮಗನ ಮಗಳು | ಮಗನ ಹೆಂಡತಿ | ಪತಿಯ ತಂದೆ |
|---|---|---|---|
| | | | |

**ಕೃತಿ 3) 'ಹೆಣ್ಣುಮಗಳನ್ನು' ನಾವು ಯಾವ ಯಾವ ರೂಪದಲ್ಲಿ ಕಾಣುತ್ತೇವೆ.**

**ಉದಾ :** ತಾಯಿ

**ಹೆಣ್ಣು ಮಗಳು** → ( ) → ( ) → ( ) → ( ) → ( )

**ಕೃತಿ 4) ಕೆಳಗಿನ ಶಬ್ದಗಳಿಗೆ ಜೋಡು ಶಬ್ದಗಳನ್ನು ಕವಿತೆಯಿಂದ ಗುರುತಿಸಿ ಬರೆಯಿರಿ.**

1) ಅಣ ______ 2) ಅಕ್ಕ ______ 3) ಮುತ್ತು ______

**ಕೃತಿ 5) ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ ಹುಡುಕಿ ಬರೆಯಿರಿ**

1) ಉತ್ತರಿ, ಸಾತಿ, ಮಳೆ
2) ಸೀರೆ, ಕುಬ್ಬಸ, ಸೊಲ್ಲಾಪುರ
3) ಅಣ್ಣ, ಬಡವ, ತಮ್ಮ
4) ಮುತ್ತು, ಮಾಣಿಕ, ಘಳಿಗೆ
5) ತಂಗಿ, ಖ್ಯಾದೀಗಿ, ಅಕ್ಕ

**ಕೃತಿ 6) ಈ ಪದ್ಯದಲ್ಲಿ ಬಂದಿರುವ 'ಘಳಿಗೆ' – ಈ ಶಬ್ದದ ಅರ್ಥ ಕೆಳಗಿನವುಗಳಲ್ಲಿ ಯಾವುದು ?**

1) ಮಡಿಕೆ
2) ಸೀರೆ
3) ವೇಳೆ

# 2. ಸಂಜೆಯ ರವಿ

ಸಂಜೆಯ ರಂಜಿಪ ಸೂರ್ಯನ ತರುವೆನು
ಕೈ ಬಿಡು ಹೋಗುವೆ ನಾನಮ್ಮ !
ಚಿನ್ನದ ಚೆಂಡನು ಕೈವಶ ಮಾಡುವೆ
ಅಂಜದ ಅನುಮತಿಯೀಯಮ್ಮ !		॥ 1 ॥

ಬುತ್ತಿಯ ಕೊಡು, ಮೇಣೊಂದೇಣಿಯ ಕೊಡು,
ಬಂಧಿಸಲೀಯೌ ಪಾಶಗಳ !
ಸೇವಕರೇತಕೆ, ಓರ್ವನೆ ಹೋಗುವೆ ;
ತೃಣಕಾರ್ಯವ ನಾ ಸಾಧಿಸೆನೆ ?		॥ 2 ॥

ಹೊಲಗಳ ದಾಟುವೆ, ನದಿಗಳನೀಜುವೆ,
ಗಿರಿಗಳನೇರುತ ಹೋಗುವೆನು !
ದಾರಿಯ ಬಂಧಿಪ ಮೃಗಗಳ ಸದೆಯುತ
ಅಸ್ತಮ ಗಿರಿಯನು ಸೇರುವೆನು !		॥ 3 ॥

ಏಣಿಯ ಮೇಲೇರುತ ನಾ ಸೂರ್ಯನ
ಕರಗಳ ಬಂಧಿಸುತೆಳೆತರುವೆ !
ನಮ್ಮನೆಯಲ್ಲಿಯೆ ಆಮೇಲಿರುವನು
ಎನ್ನೊಡನಾಡುತ ನಲಿಯುವನು		॥ 4 ॥

ತಾಯಿಯು ಮಗನಾ ಮುದ್ದಿನ ನುಡಿಗಳ
ಆಲಿಸಿ ಚುಂಬಿಸಿ ಉಸುರಿದಳು –
'ಕಂದಾ, ಎನ್ನಯ ಸೂರ್ಯನು ನೀನಿರೆ
ಜಗದಾ ಸೂರ್ಯನು ಎನಗೇಕೆ !'		॥ 5 ॥

– ಕುವೆಂಪು

## ಶಬ್ದಗಳ ಅರ್ಥ :

**ರಂಜಿಪ** – ಹೊಳೆಯುವ ; **ಅನುಮತಿ** – ಅಪ್ಪಣೆ ; **ತೃಣಕಾರ್ಯ** – ಚಿಕ್ಕಕೆಲಸ ; **ಸದೆಯುತ** – ಹೊಡೆಯುತ ; **ಅಸ್ತಮಗಿರಿ** – ಪಶ್ಚಿಮಬೆಟ್ಟ

**ಕೃತಿ 1) ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ಕವಿಯು ಸಂಜೆಯ ಸೂರ್ಯನನ್ನು ಯಾವುದಕ್ಕೆ ಹೋಲಿಸಿದ್ದಾನೆ ?

2) ಮಗು ತಾಯಿಗೆ ಏನನ್ನು ಕೇಳುತ್ತಾನೆ ?


3) ಮಗುವಿನ ಮುದ್ದು ನುಡಿಗಳನ್ನು ಕೇಳಿ ತಾಯಿ ಏನು ಮಾಡಿದಳು ?

4) ತಾಯಿಯ ದೃಷ್ಟಿಯಲ್ಲಿ ಸೂರ್ಯನು ಯಾರು ?


**ಕೃತಿ 2)**

**ಅ) ಕೆಳಗಿನ ಪದ ಜಾಲವನ್ನು ಪೂರ್ಣಗೊಳಿಸಿರಿ.**

**ಈ ಪದ್ಯದಲ್ಲಿ ಸೂರ್ಯನಿಗೆ ಬಂದಿರುವ ಎರಡು ಹೆಸರುಗಳು**



ಬ) **ಸೂರ್ಯನನ್ನು ಕರೆತರಲು ಮಗು ತಾಯಿಗೆ ಬೇಡುವ ವಸ್ತುಗಳು**



**ಕೃತಿ 3) ಹೊಂದಿಸಿ ಬರೆಯಿರಿ.**

| | | |
|---|---|---|
| 1) ಹೊಲಗಳ | ☐ | ಅ) ಏರುವೆ |
| 2) ನದಿಗಳ | ☐ | ಬ) ದಾಟುವೆ |
| 3) ಗಿರಿಗಳ | ☐ | ಕ) ಸದೆಯುವೆ |
| 4) ಮೃಗಗಳ | ☐ | ಡ) ಈಜುವೆ |

**ಉಪಕ್ರಮ :** ಸೂರ್ಯಾಸ್ತದ ಸೊಬಗನ್ನು ನಿಮ್ಮ ಮಾತುಗಳಲ್ಲಿ ಬಣ್ಣಿಸಿರಿ.

# 3. ಗಾಂಧಿಯವರ ಸ್ಮಾರಕ !

ನಿನ್ನ ಪ್ರತಿಮೆಯ ನಿಲಿಸಿ
ನಾವು ಮೆರೆವುದು ವ್ಯರ್ಥ.
ನಮ್ಮ ಹೃದಯದೊಳಿರಲಿ
ನಿನ್ನ ಮರಣದ ಅರ್ಥ.

ನಿನ್ನ ಭಸ್ಮಕೆ ಕಾಶಿ
ಗೋಕರ್ಣ ಬೇಕಿಲ್ಲ.
ನಿನ್ನ ಬೂದಿಯ ತ್ರಾಣ
ಪುಣ್ಯಕ್ಷೇತ್ರಕ್ಕಿಲ್ಲ

ನಿನ್ನ ಕರ್ಮದ ಕಲ್ಪ –
ವೃಕ್ಷ ಅಜರಾಮರವು.
ನಿನಗೇಕೆ ಪುಣ್ಯತಿಥಿ –
ಗಳ ಬಾಹ್ಯ ಜಂಜಡವು ?

ಹುಟ್ಟಿದವರಿಗೆ ಹಬ್ಬ,
ಸತ್ತವರಿಗೇ ತಿಥಿಯು.
ನಿನಗೆ ಎರಡೂ ಇಲ್ಲ,
ಯಾವುದೂ ಇತಿಮಿತಿಯು.

ನಿನಗೇಕೆ ಸ್ಮಾರಕವು ?
ಶಿಲ್ಪ ಕೃತಿ, ಹೂಮಾಲೆ ?
ಲೋಕವನೆ ಬೆಳಗುತಿದೆ
ನಿನ್ನ ಎಲುಬಿನ ಜ್ವಾಲೆ.

– ದಿನಕರದೇಸಾಯಿ

**ಶಬ್ದಗಳ ಅರ್ಥ :**

**ಪ್ರತಿಮೆ** – ಮೂರ್ತಿ ; **ಮರಣ** – ಸಾವು ; **ಭಸ್ಮ** – ಬೂದಿ
**ಅಜರಾಮರ** – ಚಿರಂತನ ; **ಜಂಜಡ** – ಗದ್ದಲ ; **ಜ್ವಾಲೆ** – ಉರಿ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದೆ ವಾಕ್ಯದಲ್ಲಿ ಉತ್ತರಿಸಿರಿ.**

I) ಯಾರ ಪ್ರತಿಮೆಯನ್ನು ನಿಲ್ಲಿಸಿ ವ್ಯರ್ಥವಾಗಿ ಕಾಲ ಕಳೆದರು ?

II) ಇಲ್ಲಿ ಬಂದಿರುವ ತೀರ್ಥಕ್ಷೇತ್ರಗಳು ಯಾವವು ?

III) ಯಾವ ವೃಕ್ಷ ಅಜರಾಮರ ?

**ಕೃತಿ 2) ಈ ಕೆಳಗಿನ ಶಬ್ದಗಳಿಗೆ ಪದ್ಯದಲ್ಲಿ ಬಂದಿರುವ ಅಂತ್ಯಪ್ರಾಸದ ಶಬ್ದಗಳನ್ನು ಜೋಡಿಸಿ ಬರೆಯಿರಿ.**

| |
|---|
| ವ್ಯರ್ಥ |
| ಬೇಕಿಲ್ಲ |
| ಹೂಮಾಲೆ |

**ಕೃತಿ 3) ಕೆಳಗಿನ ಜಾಲ ಪೂರ್ಣಗೊಳಿಸಿರಿ.**

**ಗಾಂಧೀಜಿಯವರ ಜೊತೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಯಾವುದಾದರೂ ಮೂವರು ರಾಷ್ಟ್ರನಾಯಕರ ಹೆಸರನ್ನು ಚೌಕಟ್ಟಿನಲ್ಲಿ ಬರೆಯಿರಿ.**

**ಕೃತಿ 4) ಕೆಳಗೆ ಕೊಟ್ಟಿರುವ 4 ಪರ್ಯಾಯಗಳಿಂದ ಸರಿಯಾದ ಪದವನ್ನು ಆಯ್ದು ಚೌಕಟ್ಟು ಪೂರ್ಣಗೊಳಿಸಿರಿ.**

1) ಕಾಶಿ ಪುಣ್ಯಕ್ಷೇತ್ರ ಇರುವ ರಾಜ್ಯ.

1) ಮಧ್ಯಪ್ರದೇಶ 2) ಆಂಧ್ರಪ್ರದೇಶ 3) ಅರುಣಾಚಲಪ್ರದೇಶ 4) ಉತ್ತರ ಪ್ರದೇಶ

2) ಗಾಂಧೀಜಿಯವರ ಜನ್ಮ ದಿನ.

1) ಜೂನ 30 2) ಅಕ್ಟೋಬರ 2 3) ಜನೆವರಿ 30 4) ಎಪ್ರಿಲ್ 2

**ಪ್ರಶ್ನೆIV) ಕೆಳಗಿನ ಶಬ್ದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

I) ಮರಣ

II) ಅಜರಾಮರ

**ಉಪಕ್ರಮ :** ನೀವು ಯಾವುದಾದರೂ ಪುಣ್ಯಕ್ಷೇತ್ರಕ್ಕೆ ಭೇಟಿ ಕೊಟ್ಟ ಅನುಭವವನ್ನು ಐದಾರು ವಾಕ್ಯಗಳಲ್ಲಿ ಬರೆಯಿರಿ.

CHIXZC

# 4. ಸ್ವಂತ ಮನೆ

ಸಿಮೆಂಟು ಬೇಡ, ಇಟ್ಟಿಗೆ ಬೇಡ;
ನಾವೇ ಮನೆಯನು ಕಟ್ಟುವೆವು;
ಝಣ ಝಣ ರೊಕ್ಕವು ಸಿಕ್ಕರು ಬೇಡ
ಮಣ್ಣೂ ಉಸುಕೂ ಒಟ್ಟುವೆವು.

ಕಟ್ಟಿಗೆ ಬೇಡ, ಕಬ್ಬಿಣ ಬೇಡ
ಆಳುಗಳೊಬ್ಬರು ಬೇಡಣ್ಣ;
ಕಣ್ಣು ಮುಚ್ಚಿ ಕಣ್ ತೆರೆದರೆ ಸಾಕು
ತಯಾರಾಗುವದು ನೋಡಣ್ಣ.

ಬಡಿಗರು ಕಮ್ಮಾರುಪ್ಪಾರೇತಕೆ ?
ಬಡಬಡ ನಾವೇ ಒಟ್ಟುವೆವು;
ಎಲ್ಲಿ ಹುಡುಕಿದರು ಸಿಗಲಾರದ ಮನೆ
ಒಂದೇ ಚಣದಲಿ ಕಟ್ಟುವೆವು.

ಕಪಾಟು, ಕಿಡಿಕಿಯು, ಕಿಂಡಿಗಳಿಲ್ಲ;
ಸುಣ್ಣ ಬಣ್ಣಗಳ ಬಳಿದಿಲ್ಲ;
ಕಳ್ಳರು ಗಿಳ್ಳರು ನುಗ್ಗಲು ಸಾಧ್ಯವೆ ?
ಯಾರೂ ಚಿಂತಿಸಬೇಕಿಲ್ಲ.

ಚಿಲಕವು, ಕೊಂಡಿಯು, ಕೀಲಿಗಳೇತಕೆ ?
ಅಗಳಿಯು ರಗಳೆಯ ಹಚ್ಚಿಲ್ಲ;
ಖರ್ಚಿನ ಮಾತೇ ಬಾರದು ಇಲ್ಲಿ
ನಗರಸಭೆಯು ಕರ ಹೇರಿಲ್ಲ.

ಸಾಲದ ಚಿಂತೆಯು, ಆಳಿನ ಗೋಳು–
ಒಂದೆ ? ಎರಡೆ ? ಎಲ್ಲಿ ಕೊನೆ ?
ಅಪ್ಪಟ ಮಳಲಲಿ ಕಟ್ಟಿದೆವಿದನು
ಗುಬ್ಬಿಯ ಗೂಡಿದು, ಸ್ವಂತ ಮನೆ.

– ಚೆನ್ನವೀರ ಕಣವಿ

## ಶಬ್ದಗಳ ಅರ್ಥ :

**ಬಡಿಗರು** = ಕಟ್ಟಿಗೆಯ ಕೆಲಸ ಮಾಡುವವರು

**ಅಗಳಿ** = ಬಾಗಿಲಿಗೆ ಅಡ್ಡವಾಗಿ ಸಿಕ್ಕಿಸುವ ಕಟ್ಟಿಗೆಯ ತುಂಡು

**ಕರ** = ತೆರಿಗೆ; **ಅಪ್ಪಟ** = ಚೊಕ್ಕ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದೆ ವಾಕ್ಯದಲ್ಲಿ ಉತ್ತರಿಸಿರಿ.**

1) ಮನೆಯನ್ನು ಕಟ್ಟಲು ಉಪಯೋಗಿಸುವ ಸಾಧನಗಳನ್ನು ಬರೆಯಿರಿ ?

2) ಬೆಳಕು ನೀಡಲು ಮನೆಗೆ ಅವಶ್ಯವಾಗಿ ಏನು ಬೇಕು ?

3) ಸ್ವಂತ ಮನೆ ಯಾವುದು ಎಂದು ಹೇಳುತ್ತಾರೆ ?

4) ಮನೆಯ ಕರವನ್ನು ಯಾರು ತೆಗೆದುಕೊಳ್ಳುವರು ?

**ಕೃತಿಗಳು**

**I) ಕೆಳಗಿನ ಜಾಲವನ್ನು ಪೂರ್ಣಗೊಳಿಸಿರಿ.**

ಮನೆಯನ್ನು ಕಟ್ಟಲು ಬೇಕಾಗುವ ಎರಡು ವಸ್ತುಗಳನ್ನು ಹೆಸರಿಸಿರಿ ''ಕ'' ಕಾರದಿಂದ ಪ್ರಾರಂಭವಾಗಿರಬೇಕು.

[ ] ⟷ [ ]

**II) ಯಾರು ಯಾವ ಕೆಲಸ ಮಾಡುವರು?**


| | |
|---|---|
| ಬಡಿಗರು | |
| ಕಮ್ಮಾರರು | |

**III) ಕಳ್ಳರಿಂದ ರಕ್ಷಿಸಲು ಬಾಗಿಲು ಭದ್ರ ಪಡಿಸುವ ಸಾಧನಗಳು.**

[ ] [ ] [ ]

**IV) ಕೆಳಗಿನ ಗೋಲಾಕಾರದಲ್ಲಿ ಬಂದಿರುವ ಶಬ್ದಗಳನ್ನು ಪದ್ಯದಲ್ಲಿ ಬಂದಂತೆ ಕ್ರಮಬದ್ಧವಾಗಿ ಮುಂದಿನ ಜಾಲಾಕೃತಿಯಲ್ಲಿ ಬರೆಯಿರಿ.**

ಚಿಲಕ, ಕಿಂಡಿ, ಕಿಡಕಿ,
ಕಪಾಟು, ಸುಣ್ಣ, ಕೊಂಡಿ, ಕಬ್ಬಿಣ,
ಸಿಮೆಂಟು, ಕಟ್ಟಿಗೆ, ಉಸುಕು,
ಇಟ್ಟಿಗೆ, ಕೀಲಿ, ಮಣ್ಣು,
ಬಣ್ಣ, ಅಗಳಿ



ಕೃತಿ V) ಕೆಳಗೆ ತೋರಿಸಿದ ಉದಾಹರಣೆಯಂತೆ ಉಳಿದವುಗಳನ್ನು ಪೂರ್ಣಗೊಳಿಸಿ ಚೌಕಟ್ಟಿನಲ್ಲಿ ತುಂಬಿರಿ.

| | |
|---|---|
| ಬಡಿಗರು | ಕಟ್ಟಿಗೆಯ ಕೆಲಸ ಮಾಡುವವರು |
| ಕಮ್ಮಾರ | |
| ಸಿಂಪಿಗ | |
| ನೇಕಾರ | |
| ಕುಂಬಾರ | |
| ಬುರುಡ | |

VI) I) ಅಂತ್ಯಪ್ರಾಸದ ಶಬ್ದಗಳನ್ನು ಜೋಡಿಸಿ ಬರೆಯಿರಿ.

| | | | |
|---|---|---|---|
| ಕಟ್ಟುವೆವು → | | ಬೇಡಣ್ಣ → | |
| ಹಚ್ಚೆಲ್ಲ → | | ಕೊನೆ → | |

VII) ಕೆಳಗಿನ ಶಬ್ದಗಳಿಗೆ ತತ್ಸಮ – ತದ್ಭವ ಬರೆಯಿರಿ.

| | | | |
|---|---|---|---|
| ಇಟ್ಟಿಗೆ | | ಋಣ | |
| ಚಣ | | ರಗಳೆ | |

ಉಪಕ್ರಮ : ಬೇರೆ ಬೇರೆ ಗುಬ್ಬಿಯ ಗೂಡುಗಳ ಚಿತ್ರಪಟ ಬರೆದು ವರ್ಗದಲ್ಲಿ ತೂಗು ಹಾಕಿರಿ.

# 5. ಕುರುಡನ ದೀವಿಗೆ

ಕುರುಡನೊಮ್ಮೆ ಗುಡಿಗೆ ತಾನು
ಮಲಗ ಹೊರಟನು
ಕತ್ತಲಾಗಲವನು ಕೈಗೆ
ದೀಪ ಹಿಡಿದನು.

ಅಷ್ಟರೊಳಗೆ ಎದುರಿಗೊಬ್ಬ
ವ್ಯಕ್ತಿ ಬಂದನು –
'ಕುರುಡ, ನಿನಗೆ ದೀಪವೇಕೆ ?'
ಎಂದು ಹಳಿದನು.

ಕುರುಡ ಸಭ್ಯನಾಗಿ ನುಡಿದ
ಅವನ ಮಾತಿಗೆ :
'ನನ್ನ ಕಣ್ಣಿಗಲ್ಲ ಸ್ವಾಮಿ
ನಿಮ್ಮ ಕಣ್ಣಿಗೆ. !'

'ಕತ್ತಲೊಳಗೆ ನೀವು ಬಂದು
ನನಗೆ ಹಾಯ್ದರೆ
ದಾರಿ ತಪ್ಪಿ ಬೀಳಲಾಗ
ನನಗೆ ತೊಂದರೆ !

ನನ್ನ ಕಂಡು ನೀವು ಬದಿಗೆ
ಸಾಗಿ ಹೋಗಲು
ತಂದೆನಯ್ಯ, ದೀಪ ನಾನು
ಗುಡಿಗೆ ಹೋಗಲು.'

– ಅಣ್ಣಾರಾಯ ಸಾಲಿಮನಿ

**ಶಬ್ದಗಳ ಅರ್ಥ :**

**ದೀವಿಗೆ** – ದೀಪ ; **ಹಳಿದನು** – ನಿಂದಿಸಿದನು ; **ಸಭ್ಯನಾಗಿ** – ಶಿಷ್ಟನಾಗಿ, ವಿನಯನಾಗಿ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ಕುರುಡನು ಎಲ್ಲಿಗೆ ಹೊರಟಿದ್ದನು ?

______________________

2) ಎದುರಿಗೆ ಬಂದ ವ್ಯಕ್ತಿ ಏನೆಂದು ಕೇಳಿದನು ?

______________________


3) ಯಾರಿಗೆ ತೊಂದರೆಯಾಗುತ್ತದೆ

______________________

4) ಕುರುಡನು ದೀಪವನ್ನು ಏಕೆ ತಂದಿದ್ದನು

______________________

**ಕೃತಿ 2)** **ಕೆಳಗಿನ ಜಾಲವನ್ನು ಪೂರ್ತಿ ಮಾಡಿರಿ.**





**ಕೃತಿ 3)** **ವಿಕಲಚೇತನರು ಬಳಸುವ ಸಲಕರಣೆಗಳು.**

ಶ್ರವಣಯಂತ್ರ – 

ಬಡಿಗೆ – 

**ಕೃತಿ 4)** **ಕಣ್ಣಿಲ್ಲದ ವ್ಯಕ್ತಿ ದೈನಂದಿನ ಜೀವನದಲ್ಲಿ ಅನುಭವಿಸುವ ತೊಂದರೆಗಳನ್ನು ಮತ್ತು ನೀವು ಮಾಡುವ ಸಹಾಯವನ್ನು ಕುರಿತು ಬರೆಯಿರಿ.**

**ಕೃತಿ 5)** **ಪದ್ಯದಲ್ಲಿ ಬರುವ ಸರ್ವನಾಮಗಳ ಪಟ್ಟಿ ಮಾಡಿರಿ–**



6.

# ಪೌಷ್ಟಿಕ ಆಹಾರ

ಹಾಲು ಬೆಣ್ಣೆ ನಮಗಿರಬೇಕು
ಸೊಪ್ಪಿನ ಪಲ್ಯ ತಿನ್ನಲು ಬೇಕು
ಮೀನು ಮೊಟ್ಟೆ ಬಹಳಿರಬೇಕು
ವಿಟಮಿನ್ 'ಎ' ದೇಹಕೆ ಬೇಕು ॥ 1 ॥

ಹೆಸರು ಕಡಲೆ ನಮಗಿರಬೇಕು
ರಾಗಿ ಹಿಟ್ಟು ತಿನ್ನಲು ಬೇಕು
ಬಟಾಣಿ ಬಾದಾಮಿ ಬಹಳಿರಬೇಕು
ವಿಟಮಿನ್ 'ಬಿ' ದೇಹಕೆ ಬೇಕು ॥ 2 ॥

ಮೊಳೆತಕಾಳು ನಮಗಿರಬೇಕು
ತಾಜಾ ಕ್ಯಾರೆಟ್ ತಿನ್ನಲು ಬೇಕು
ಕಿತ್ತಳೆ ಹಣ್ಣು ಬಹಳಿರಬೇಕು
ವಿಟಮಿನ್ 'ಸಿ' ದೇಹಕೆ ಬೇಕು ॥ 3 ॥

ಬೆಣ್ಣೆ ತುಪ್ಪ ನಮಗಿರಬೇಕು
ಮೀನಿನ ಎಣ್ಣೆ ಬೇಕೇ ಬೇಕು
ಬಿಸಿಲಿನ ಶಾಖ ಚರ್ಮಕೆ ಬೇಕು
ವಿಟಮಿನ್ 'ಡಿ' ದೇಹಕೆ ಬೇಕು ॥ 4 ॥

ಸಕ್ಕರೆ ಬೆಲ್ಲ ಸವಿಯಲು ಬೇಕು
ಹಾಲು ಮೊಸರು ಕುಡಿಯಲು ಬೇಕು
ಹಳದಿ ಹಣ್ಣು ತಿನ್ನಲು ಬೇಕು
ಬೆಳೆಯಲಿದೆಲ್ಲ ಬೇಕೇ ಬೇಕು ॥ 5 ॥

– ಡಿ. ಪದ್ಮಲತಾ

## ಶಬ್ದಗಳ ಅರ್ಥ :

**ಸೊಪ್ಪು** - ತರಕಾರಿ ; **ವಿಟಮಿನ್** - ಜೀವನಸತ್ವ ; **ದೇಹ** - ಶರೀರ ; **ಮೊಳೆತ** - ಚಿಗಿತ

**ಕೃತಿ 1) ಕೆಳಗೆ ಸೂಚಿಸಿದ ಅಕ್ಷರಗಳ ವಿಟಮಿನ್‌ಗಳು ಯಾವ ಯಾವ ಆಹಾರ ಪದಾರ್ಥದಿಂದ ದೊರಕುತ್ತವೆ ?**


1) ವಿಟಮಿನ್ – 'ಎ'

2) ವಿಟಮಿನ್ – 'ಬಿ'

3) ವಿಟಮಿನ್ – 'ಸಿ'

4) ವಿಟಮಿನ್ – 'ಡಿ'

**ಕೃತಿ 2) ಈ ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ 3) ಕೆಳಗಿನ ಶಬ್ದಗಳ ಮುಂದೆ ಬಂದಿರುವ ಶಬ್ದಗಳನ್ನು ಕವಿತೆಯಿಂದ ಆಯ್ದುಬರೆಯಿರಿ.**

ಸಕ್ಕರೆ ______________ ; ಬಟಾಣಿ ______________ ; ಬೆಣ್ಣೆ______________ ;
ಮೀನು ______________ ; ಹಾಲು ______________

**ಕೃತಿ 4) ಗುಂಪಿಗೆ ಸೇರದ ಪದ ಗುರುತಿಸಿ ಬರೆಯಿರಿ.**

1) ಸಕ್ಕರೆ, ಸೊಪ್ಪು, ಬೆಲ್ಲ

2) ಕಡಲೆ, ರಾಗಿ, ವಿಟಮಿನ್

3) ಮೀನು, ಹಾಲು, ಬೆಣ್ಣೆ.

CNBL5A

# 1. ಕಾರ್ನಾಡ ಸದಾಶಿವರಾಯರು

ಸಾ. ಜೋಗ

ಭಾರತಮಾತೆಯ ಉದರದಲ್ಲಿ ಅನೇಕ ಬಗೆಯ ಪುತ್ರರು ಜನಿಸಿ ಮಾತೆಯ ಸೇವೆಯನ್ನು ಮನಮುಟ್ಟಿ ಮಾಡಿದ್ದಾರೆ. ಅವರ ಕಾರ್ಯದ ರೀತಿ ಬೇರೆಯಾಗಿದ್ದರೂ ಸ್ವಾತಂತ್ರ್ಯ ಸಂಪಾದನೆಯಲ್ಲಿ ಅವು ಒಂದಿಲ್ಲೊಂದು ರೀತಿ ಕ್ರಾಂತಿಯನ್ನುಂಟು ಮಾಡಿವೆ.

ಸದಾಶಿವರಾಯರು ಮಂಗಳೂರಿನ ಸಾರಸ್ವತ ಸಮಾಜದ ಕರ್ನಾಡ ಮನೆತನದಲ್ಲಿ ಕ್ರಿ. ಶ. 1881ರಲ್ಲಿ ಜನಿಸಿದರು. ಇವರು ಸಿರಿವಂತರ ಪುತ್ರರು. ಆದುದರಿಂದ ಚಿಕ್ಕಂದಿನಲ್ಲಿ ಅಭ್ಯಾಸವನ್ನು ಸರಿಯಾಗಿ ಹೊಂದಿದರು. ಪದವೀಧರರಾದರು. ಸಿರಿವಂತಿಕೆಯನ್ನು ಅನುಭವಿಸುತ್ತ ಜೀವನ ಸಾಗಿಸಿದ್ದರು.

ಕಾಲಾಂತರದಲ್ಲಿಯೇ ಇವರ ಲಕ್ಷ್ಯ ದೇಶದ ಸ್ವಾತಂತ್ರ್ಯ ಸಮರದತ್ತ ಹರಿಯಿತು. ಸರಿ ಕೂಡಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ತಮ್ಮ ಭವ್ಯ ಸದನವನ್ನೇ ಕಾಂಗ್ರೆಸ್ಸಿನ ಕಾರ್ಯದ ಉಪಯೋಗಕ್ಕಾಗಿ ಧಾರೆ ಎರೆದರು. ಅವರ ಅದ್ಭುತ ಪ್ರಭಾವದಿಂದ ಮಂಗಳೂರಿನ ಅನೇಕ ಯುವಕರು ಕಾಂಗ್ರೆಸ್ಸಿನಲ್ಲಿ ಸೇರಿಕೊಂಡರು.

ದಿನ ದಿನಕ್ಕೆ ಸದಾಶಿವರಾಯರ ಸಮಾಜ ಸುಧಾರಣಾ ಕರ್ತವ್ಯ ನಿಷ್ಠೆ ಕಾರ್ಯಕ್ಷಮತೆಗಳಿಗೆ ಜನ ತಲೆದೂಗಿತು, ಇವರೇ ಕರ್ನಾಟಕ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಕಾರ್ಯ ಮಾಡಿದರು. ಅಖಿಲ ಭಾರತ ಕಾಂಗ್ರೆಸ್ಸಿನ ಸದಸ್ಯರಾಗಿ ಕಾರ್ಯಮಾಡಿದರು.

ಸದಾಶಿವರಾಯರು ಮಹಾತ್ಮಾ ಗಾಂಧಿಯವರ ಪರಮಶಿಷ್ಯರಾಗಿದ್ದರು. ಅವರ ಸಾಬರಮತಿ ಆಶ್ರಮದಲ್ಲಿ ಕೆಲದಿವಸ ತಂಗಿ ಸ್ಫೂರ್ತಿ ಪಡೆದಿದ್ದರು. ಅವರ ಉಪ್ಪಿನ ಸತ್ಯಾಗ್ರಹದ ಮುಖ್ಯ ನೇತಾರರಾಗಿ ಕಾರ್ಯ ನಿರ್ವಹಿಸಿದರು. ಅದಕ್ಕಾಗಿ ಅವರಿಗೆ ಸೆರೆಮನೆವಾಸವಾಯಿತು. ಇದರಂತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಕಾರ್ಯ ಪ್ರವೃತ್ತರಾದಾಗ ಅನೇಕ ಸಲ ಕಾರಾಗೃಹವಾಸವನ್ನು ಅನುಭವಿಸಿದರು. ಇವರ ಮಾರ್ಗದರ್ಶನದಲ್ಲಿ ಮುನ್ನಡೆದ ಯುವಕರ ತಂಡದಿಂದ ಕರ್ನಾಟಕದಲ್ಲಿ ದೊಡ್ಡ ಬಿರುಗಾಳಿಯೇ ಎದ್ದಿತು.

ಇಂತಹ ಅಪ್ರತಿಮ ಮಹಾಪುರುಷನಿಗೆ ಜನ್ಮವಿತ್ತ ಮಾತಾ ಪಿತೃಗಳಾದ ರಾಧಾಬಾಯಿ ಹಾಗೂ ರಾಮಚಂದ್ರರಾಯರು ನಿಜಕ್ಕೂ ಭಾಗ್ಯಶಾಲಿಗಳು, ಪುಣ್ಯವಂತರು ಹೀಗೆಂದು ಮಹಾತ್ಮಾಜಿಯವರೇ ಅಂದದ್ದುಂಟು.

ಸದಾಶಿವರಾಯರು ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಶಿಕ್ಷಣ ಹೊಂದಿದರು. ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸೇರಿ ಬಿ.ಎ. ಪದವಿ ಪಡೆದರು. ಕಾಯ್ದೆ ಪದವೀಧರರಾಗುವದಕ್ಕಾಗಿ ಮುಂಬಯಿ ಕಾಲೇಜಿಗೆ ಸೇರಿದರು. ಅಲ್ಲಿದ್ದಾಗಲೇ ಕ್ರಾಂತಿಕಾರಿ ರಾಜಕಾರಣಿಗಳಾದ ಲಾಲಾ ಲಜಪತರಾಯ, ಲೋಕಮಾನ್ಯ ಟಿಳಕ ಮೊದಲಾದ ಧುರೀಣರ ನಿಕಟ ಸಂಪರ್ಕ ಬಂದಿತು. ಇವರಿಂದ ಇವರ ಲಕ್ಷ್ಯವೆಲ್ಲ ರಾಜಕಾರಣದತ್ತ ಕೇಂದ್ರೀಕೃತವಾಯಿತು.

ಲೋಕಮಾನ್ಯರಂತಹ ಮುಂದುವರಿದ ರಾಜಕಾರಣಿಗಳಿಂದ ಸ್ಫೂರ್ತಿ ಪಡೆದಿದ್ದ ಸದಾಶಿವರಾಯರಿಗೆ ರಾಜಕಾರಣದಿಂದ ದೂರುಳಿಯುವದಾಗಲಿಲ್ಲ ಅಷ್ಟರಲ್ಲಿಯೇ ಇವರ ಪ್ರಥಮ ಪತ್ನಿ ಸ್ವರ್ಗವಾಸಿಯಾದುದರಿಂದಲೂ ಇವರ ಜೀವನ ದಿಶೆಯೇ ಬದಲಿಸಿತು. ಕೂಡಲೇ ವಕೀಲಿ ವೃತ್ತಿಗೆ ಶರಣು ಹೊಡೆದು ಸಾರ್ವಜನಿಕ ಕಾರ್ಯದಲ್ಲಿ ನಿರತರಾದರು.

ಇವರ ಅನವರತ ಪ್ರಯತ್ನದಿಂದಾಗಿ ಬೆಸೆಂಟ ಬಾಲಿಕಾ ಪಾಠಶಾಲೆ ಮಹಿಳಾ ಸಭೆ, ಬ್ರಹ್ಮ ಸಮಾಜ, ಗಣಪತಿ ಹೈಸ್ಕೂಲ, ಡಿಪ್ರೆಸ್ಡ ಕ್ಲಾಸ ಟ್ಯೂಶನ್ ಮೊದಲಾದ ಸಂಸ್ಥೆಗಳು ಉತ್ತಮ ರೀತಿಯಲ್ಲಿ ಕಾರ್ಯಮಾಡತೊಡಗಿದವು. ಇವರ ತ್ಯಾಗವಂತೂ ಅಪ್ರತಿಮವಾದದ್ದು. ಅವರ ಉದಾರತನ ಸಮಗ್ರ

ದೇಶದಲ್ಲಿಯೇ ದ್ವಿಗುಣಿತ ಹೊಂದಿತು. ನೇತ್ರಾವತಿಗೆ ಮಹಾಪೂರ ಬಂದು ಹಾನಿಗೊಳಗಾದ ಜನರ ಮಧ್ಯ ನುಗ್ಗಿ ಅವರಿಗಾಗಿ ಹಗಲಿರುಳೂ ದುಡಿಯತೊಡಗಿದರು. ತಮ್ಮ ಸರ್ವಸ್ವವನ್ನು ಆ ನಿರಾಶ್ರಿತರಿಗೆ ಧಾರೆ ಎರೆದರು. ಅದರಂತೆ ತಮ್ಮ ಆಸ್ತಿ ಪಾಸ್ತಿ ಮನೆ ಮಠಗಳನ್ನೆಲ್ಲ ದೇಶ ಸೇವಾ ಕಾರ್ಯದಲ್ಲಿ ಅರ್ಪಿಸಿದರು. ಇದರಿಂದಾಗಿ ಇವರ ಕೀರ್ತಿ ಸುತ್ತಲೂ ಪಸರಿಸಿತಲ್ಲದೆ ಈ ನೂತನ ಕ್ರಾಂತಿಕಾರಿ ವಿಚಾರದಿಂದ ಜನತೆ ರಾಯರ ಬಗೆಗೆ ಅಪಾರ ಗೌರವ ತಳೆಯಿತು.

ಇವರ ಕಾರ್ಯದಲ್ಲಿ ಶ್ರೀ ಕುದುಮೂಲ ರಂಗರಾವ ಅವರು ಸಂಪೂರ್ಣ ಸಹಾಯಕರಾಗಿದ್ದರು. ಇವರ ವಿಚಾರ ಹಾಗೂ ಹರಿಜನರ ಸರ್ವತೋಮುಖದ ಏಳ್ಗೆಗಾಗಿ ಶ್ರಮಿಸುತ್ತ ಅವರ ಸರ್ವತೋಮುಖ ಅಭಿವೃದ್ಧಿ ಕೈಕೊಂಡದ್ದರಿಂದ ಅಲ್ಲಿ ದೊಡ್ಡ ಕ್ರಾಂತಿಯೇ ಎದ್ದಿತು. ಇವರ ಈ ಹೊಸ ವಿಚಾರ ಹಾಗೂ ದೊಡ್ಡ ತ್ಯಾಗ ಕಂಡ ಕೆಲವರು ಇವರನ್ನು ನಿಂದಿಸತೊಡಗಿದರು. ಆದರೆ ರಾಯರು ಮಾತ್ರ ಅದಾವುದನ್ನೂ ಲೆಕ್ಕಿಸದೆ ತಮ್ಮ ಕಾರ್ಯದಲ್ಲಿ ನಿರತರಾಗಿದ್ದರು.

ಇವರು ಮಹಾತ್ಮರ ಆದೇಶದಂತೆ ಸ್ವರಾಜ್ಯ ಸಾಧನೆಯ ಗುರಿ ಮುಟ್ಟಲು ಟೊಂಕಕಟ್ಟಿದರು. ಅದರ ಸಂದೇಶವನ್ನು ಜನತೆಗೆ ತಿಳಿಸುವದಕ್ಕಾಗಿ ಕಂಕಣ ಬದ್ಧರಾದರು. ದೇಶದ ಬಹುಭಾಗವನ್ನು ಸುತ್ತಿ ಮಹಾತ್ಮರ ಸಂದೇಶವನ್ನು ಬೀರಿದರು. ಜನತೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಮಹತ್ವ ತಿಳಿಹೇಳಿ ಅವರೆಲ್ಲರನ್ನೂ ಹುರಿಗೊಳಿಸಿದರು. ದೇಶದ ಹಿತಕ್ಕಾಗಿ ಭಾರತಾಂಬೆಯ ಉದ್ಧಾರಕ್ಕಾಗಿ ಯಾವುದೇ ಕಾರ್ಯವಿದ್ದರೂ ಅದನ್ನು ಮನಸಾ ಉತ್ಸಾಹದಿಂದ ಮಾಡುತ್ತಿದ್ದರು.

ಇಂತಹ ಮಹಾನುಭಾವರಿಗೆ ತೊಂದರೆಗಳೇನೂ ಕಡಿಮೆಯಾಗಿದ್ದಿಲ್ಲ. ಇವರ ತಂದೆ ತೀರಿಕೊಂಡರು. ಸಂಸಾರದ ಭಾರ ಇವರ ಮೇಲೆ ಬಿದ್ದಿತು. ಇವರು ದೊಡ್ಡ ಸಿರಿವಂತರು. ಆದರೆ ಅಪ್ರತಿಮ ತ್ಯಾಗದಿಂದ ಸ್ವತ್ತೆಲ್ಲ ಕರಗಿತು. ತಾವಿರುವ ಮನೆಯನ್ನೇ ತಮ್ಮ ಸಮಾಜ ಸೇವೆಗಾಗಿ ಕೇಂದ್ರ ಕಚೇರಿಯನ್ನಾಗಿ ಮಾಡಿಕೊಂಡರು. ಅದು ಈಗ ಖಾದಿ ಗ್ರಾಮೋದ್ಯೋಗದ ಕೇಂದ್ರವಾಗಿದೆ.

ಇಂತಹ ತ್ಯಾಗಿಗಳಿಗೆ ತೊಂದರೆ ಬೆನ್ನು ಹತ್ತಿಯೇ ಇದೆಯೆಂದರೂ ತಪ್ಪಿಲ್ಲ. ಇವರ ಆರ್ಥಿಕ ಸ್ಥಿತಿ ವಿಶೇಷ ಕಳೆಗುಂದುತ್ತಿದ್ದಾಗಲೇ ಇವರ ಮಗ, ಮಗಳು ಸ್ವರ್ಗವಾಸಿಗಳಾದರು. ಅದು ಕೂಡ ನೋವಿನ ಮೇಲೆ ಬರೆಕೊಟ್ಟಂತಾಯಿತು. ಇದೇ ರೀತಿ ತೊಂದರೆಯಿಂದಿರುತ್ತಿರುವಾಗಲೇ ಮದ್ರಾಸ ವಿಧಾನ ಸಭೆಗೆ ಸಲ್ಲಿಸಿದ ಇವರ ಚುನಾವಣೆಯ ಅರ್ಜಿಯು ''ಹಣವಿಲ್ಲದವರು'' ಎಂಬ ಕಾರಣದಿಂದ ತಿರಸ್ಕೃತವಾಯಿತು. ಆಗಂತೂ ಇವರ ಮನಸ್ಸಿಗೆ ವಿಶೇಷ ನೋವಾಯಿತು. ಕೂಡಲೇ ಮಂಗಳೂರು ಬಿಟ್ಟು ಬೆಂಗಳೂರಿನಲ್ಲಿ ಬಂದು ಇರತೊಡಗಿದರು. ಇಂತಹ ಆರ್ಥಿಕ ಸ್ಥಿತಿ ಇದ್ದಾಗಲೂ ಕೂಡ ಇವರ ದಾನ ಧರ್ಮಕ್ಕೆ ಆತಂಕವಾಗಿರಲಿಲ್ಲ. ಶಕ್ಯವಿದ್ದಷ್ಟರಲ್ಲಿ ಚಿಲ್ಲರೆ ಪುಡಿ ಕಾಸುಗಳನ್ನೇ ದಾನ ಮಾಡುತ್ತಿದ್ದರು.

ಈ ರೀತಿ ತೊಂದರೆಗೊಳಪಟ್ಟರೂ ದೇಶಸೇವಾಸಕ್ತರಾದ ಸದಾಶಿವರಾಯರು ವಿಷಮ ಜ್ವರದಿಂದ ಮುಂಬಯಿಯಲ್ಲಿ ಮಲಗಿದರು. ಅದೇ ಕಾಯಿಲೆಯಿಂದ ಕ್ರಿ. ಶ. 1937ರಲ್ಲಿ ಪರಂಧಾಮವನ್ನೈದಿದರು.

ಅವರಿಂದಿಲ್ಲವಾದರೂ ಅವರ ಅಪಾರವಾದ ತ್ಯಾಗ, ಮಾಡಿದ ಕಾರ್ಯ, ದೇಶಕ್ಕಾಗಿ ದುಡಿದ ರೀತಿ ಇವುಗಳೆಲ್ಲ ನಮ್ಮೆದುರಿನಲ್ಲಿದ್ದು ಕೊಂಡು ಭಾರತಾಂಬೆಯ ಸೇವೆಗೆ ಎಚ್ಚರಿಸುತ್ತಿವೆ.

### ಶಬ್ದಗಳ ಅರ್ಥ :

**ಉದರ** – ಹೊಟ್ಟೆ ; **ಸಾರಸ್ವತ** – ಸಾಹಿತ್ಯ; **ಕಾರಾಗೃಹ** – ಸೆರೆಮನೆ ; **ಆತಂಕ** – ಭಯ

**ಕೃತಿ 1) ಅ) ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ಸದಾಶಿವರಾಯರು ಎಲ್ಲಿ ಜನಿಸಿದರು ?

2) ಸದಾಶಿವರಾಯರು ಯಾರ ಶಿಷ್ಯರಾಗಿದ್ದರು ?

3) ಸದಾಶಿವರಾಯರು ಬಿ.ಎ. ಪದವಿಯನ್ನು ಎಲ್ಲಿ ಪಡೆದರು ?

4) ಸದಾಶಿವರಾಯರ ಯಾವ ಗುಣಗಳಿಗೆ ಜನ ತಲೆದೂಗಿತು ?

5) ಸದಾಶಿವರಾಯರ ಮನೆ ಈಗ ಯಾವ ಕೇಂದ್ರವಾಗಿದೆ ?

**ಬ) ಕೆಳಗಿನ ವಾಕ್ಯಗಳನ್ನು ಘಟನಾಕ್ರಮಗಳಿಗನುಸಾರವಾಗಿ ಬರೆಯಿರಿ.**

1) ವಿಷಮ ಜ್ವರದಿಂದ ಮುಂಬಯಿಯಲ್ಲಿ ಮಲಗಿದರು.

2) ಕಾಯ್ದೆ ಪದವೀಧರರಾಗಲು ಮುಂಬಯಿ ಕಾಲೇಜಿಗೆ ಸೇರಿದರು.

3) ಸ್ವರಾಜ್ಯ ಸಾಧನೆಯ ಗುರಿಮುಟ್ಟಲು ಟೊಂಕಕಟ್ಟಿದರ

4) ಉಪ್ಪಿನ ಸತ್ಯಾಗ್ರಹದಲ್ಲಿ ಕಾರ್ಯನಿರ್ವಹಣ

**ಕೃತಿ3) ಕೆಳಗಿನ ವಾಕ್ಯದಲ್ಲಿ ಗೆರೆಹೊಡೆದ ಶಬ್ದದ ಬದಲಾಗಿ ಕಂಸಿನಲ್ಲಿಯ ಯೋಗ್ಯ ಶಬ್ದವನ್ನು ಬಳಸಿ ವಾಕ್ಯ ಪುನಃ ಬರೆಯಿರಿ.**

(ಟೊಂಕವನ್ನೇ ಕಟ್ಟಿಕೊಳ್ಳು, ಓಡಿಹೋಗು, ಸಿದ್ಧನಾಗು)

ಸದಾಶಿವರಾಯರು ಸ್ವರಾಜ್ಯ ಸಾಧನೆಯ ಗುರಿಮುಟ್ಟಲು <u>ಟೊಂಕಕಟ್ಟಿದರು.</u>

**ಕೃತಿ4) ಕೆಳಗಿನ ಶಬ್ದಗಳನ್ನು ವರ್ಣಮಾಲೆಯ ಕ್ರಮದಲ್ಲಿ ಬರೆಯಿರಿ.**

ತ್ಯಾಗ, ಜನ, ಮನೆ, ದಾನ, ದೇಶ, ಆಸ್ತಿ, ಸಮಾಜ, ಹಾನಿ, ಮಂಗಳೂರು.

**ಕೃತಿ5) ಉದಾಹರಣೆಯಲ್ಲಿ ತೋರಿಸಿದಂತೆ ಶಬ್ದಗಳನ್ನು ರಚಿಸಿರಿ.**

**ಉದಾ -** ಬಾಲಕ ⟶ ಕಸಬು ⟶ ಬುಗರಿ ⟶ ರಿಕ್ಷಾ ⟶ ಕ್ಷಾಮ

ಬಳಪ, ಪಟ, ಟಗರು .........................................

**ಕೃತಿ6) ಕೆಳಗಿನ ವಾಕ್ಯಗಳ ಗೆರೆಹೊಡೆದ ಶಬ್ದಗಳ ಬದಲು ಕಂಸಿನಲ್ಲಿಯ ಶಬ್ದಗಳನ್ನು ಬಳಸಿ ವಾಕ್ಯಗಳನ್ನು ಪುನಃ ಬರೆಯಿರಿ.**

1) <u>ಶೇಖರನು</u> ಇಂಪಾಗಿ ಹಾಡುತ್ತಾನೆ (ಶ್ಯಾಮಲೆ)

2) <u>ಸುಶೀಲೆ</u> ಪುಸ್ತಕ ಓದುತ್ತಾಳೆ (ರಮೇಶ)

3) <u>ರಾಧೆಯು</u> ಸುಂದರವಾಗಿ ಕುಣಿಯುತ್ತಾಳೆ (ನವಿಲು)

**ಕೃತಿ7) ಕೆಳಗೆ ಕೊಟ್ಟ ಶಬ್ದಗಳನ್ನು ನಾಮಪದದಂತೆಯೂ ಕ್ರಿಯಾಪದದಂತೆಯೂ ಬಳಸಿ ವಾಕ್ಯಗಳನ್ನು ರಚಿಸಿರಿ.**

**ಉದಾ : ತೆರೆ** 1) ಸಾಗರದಲ್ಲಿ ತೆರೆಗಳು ತೇಲಿ ಬರುತ್ತವೆ. (ನಾಮಪದ)

2) ಕೋಟೆಯ ಬಾಗಿಲು ತೆರೆಯಿತು. (ಕ್ರಿಯಾಪದ)

1] ಏಳು 1) ______________________

2) ______________________

2] ಹತ್ತು 1) ______________________

2) ______________________

CNKH6X

# 2. ಮೂವರು ರೈತರು

ರಾಜೇಶ್ವರಿ ಜಯಕೃಷ್ಣ

ಒಂದು ಊರಿನಲ್ಲಿ ರಂಗಪ್ಪನೆಂಬ ಒಬ್ಬ ರೈತನಿದ್ದನು. ಅವನಿಗೆ ಮೂವರು ಮಕ್ಕಳಿದ್ದರು. ಅವನ ಮೊದಲೆರಡು ಮಕ್ಕಳು ಬಹಳ ಸೋಮಾರಿಗಳಾಗಿದ್ದರು. ಕೊನೆಯ ಮಗ ಕಷ್ಟಪಟ್ಟು ದುಡಿಯುತ್ತಿದ್ದನು.

ರಂಗಪ್ಪನಿಗೆ ಮೊದಲೆರಡು ಮಕ್ಕಳ ಬಗ್ಗೆ ಬಹಳ ಚಿಂತೆ ಇತ್ತು. ಅವರು ಜವಾಬ್ದಾರಿಯನ್ನು ಯಾವಾಗ ಕಲಿಯುವರೋ ಎಂದು ಆತ ಯೋಚಿಸುತ್ತಿದ್ದ. ಅದಕ್ಕಾಗಿ ಆತ ಉಪಾಯವೊಂದನ್ನು ರೂಪಿಸಿದ.

ಆತ ತನ್ನ ಮೂವರು ಮಕ್ಕಳನ್ನು ಹತ್ತಿರಕ್ಕೆ ಕರೆದು ಹೇಳಿದ, ''ನನ್ನ ಪ್ರೀತಿಯ ಮಕ್ಕಳೇ, ನನಗೆ ವಯಸ್ಸಾಗುತ್ತಿದೆ. ನನಗೆ ಇನ್ನು ಗದ್ದೆಯಲ್ಲಿ ದುಡಿಯಲು ಸಾಧ್ಯವಿಲ್ಲ. ನಾನು ನನ್ನ ಭೂಮಿಯನ್ನು ಮೂರು ಭಾಗ ಮಾಡುತ್ತೇನೆ. ನಿಮ್ಮ ನಿಮ್ಮ ಜಾಗದಲ್ಲಿ ಬೆಳೆ ಬೆಳೆಯಿರಿ. ಈ ವರ್ಷಕ್ಕೆ ಬೇಕಾದಷ್ಟು ಅಕ್ಕಿ ಮೂಟೆಗಳಿವೆ. ಮುಂದಿನ ವರ್ಷದ ಉಪಯೋಗಕ್ಕೆ ನೀವು ಧಾನ್ಯಗಳನ್ನು ಬೆಳೆಯಬೇಕು. ಅದಕ್ಕಾಗಿ ನೀವು ಇಂದೇ ಕೆಲಸ ಶುರು ಮಾಡಬೇಕು.''

ಮೊದಲೆರಡು ಮಕ್ಕಳಿಗೆ ಇದು ಇಷ್ಟವಿರಲಿಲ್ಲ. ಆದರೂ ಅವರು ತಂದೆಯ ಮಾತನ್ನು ಒಪ್ಪಲೇ ಬೇಕಾಯಿತು.

ಮರುದಿನ ರಂಗಪ್ಪನು ಮಕ್ಕಳೊಂದಿಗೆ ಗದ್ದೆಗೆ ಹೋದ. ಅದರಲ್ಲಿ ಭಾಗಗಳನ್ನು ಮಾಡಿದ.

''ನನಗೆ ಕೆರೆಯ ಪಕ್ಕದಲ್ಲಿರುವ ಗದ್ದೆ ಬೇಕು'' ಎಂದ ಹಿರಿಯ ಮಗ. ರಂಗಪ್ಪ ರೈತ ಒಪ್ಪಿದ. ಅದಕ್ಕೆ ತಾಗಿಕೊಂಡಿರುವ ಗದ್ದೆಯನ್ನು ಎರಡನೆಯವ ಪಡೆದುಕೊಂಡ. ಕೆರೆಯ ಸ್ವಲ್ಪ ದೂರದಲ್ಲಿರುವ ಗದ್ದೆ ಕೊನೆಯ ಮಗನ ಪಾಲಿಗಾಯ್ತು.

ಕೊನೆಯ ಮಗ ಸಂತೋಷದಿಂದ ಆ ದಿನವೇ ಕಷ್ಟಪಟ್ಟು ದುಡಿಯತೊಡಗಿದ. ತನ್ನ ಜಾಗದ ಗದ್ದೆಯಿಂದ ಹುಲ್ಲು, ಕಳೆಗಳನ್ನು ಕೀಳತೊಡಗಿದ. ಅವನು ಗದ್ದೆಯಲ್ಲಿನ ಕಳೆ ಕಿತ್ತಿದರೂ ಹಿರಿಯ ಮಗ ಮತ್ತು ಎರಡನೆಯ ಮಗ ಮರದ ಕೆಳಗೆ ಹಾಯಾಗಿ ಮಲಗಿದ್ದರು.

''ಅಣ್ಣಂದಿರೇ, ಏಳಿ. ನಿಮ್ಮ ಗದ್ದೆಯಲ್ಲಿನ ಕಳೆ ತೆಗೆಯಬೇಡವೇ ? ಬಿತ್ತನೆ ಮಾಡಲು ತಡವಾಗುತ್ತದೆ'' ಎಂದು ಹೇಳಿದ ಕೊನೆಯ ಮಗ.

''ಹೋಗೋ, ''ಹೋಗೋ, ನಾಳೆ ಮಾಡ್ಕೊಂಡ್ರಾಯ್ತು'' ಎಂದು ಅವರಿಬ್ಬರೂ ತಮ್ಮನನ್ನು ಗದರಿಸಿ ಕಳುಹಿಸಿದರು.

ಬಿತ್ತನೆ ಮಾಡಲು ತಡವಾಗುವುದೆಂದು ತಿಳಿದ ಕೊನೆಯ ಮಗ ಅಣ್ಣಂದಿರ ಪಾಲಿನ ಗದ್ದೆಯಲ್ಲಿನ ಕಳೆಯನ್ನು ತಾನೇ ತೆಗೆದ.

ಮರುದಿನದಿಂದಲೇ ಕೊನೆಯ ಮಗ ತನ್ನ ಪಾಲಿನ ಗದ್ದೆಯನ್ನು ಉಳತೊಡಗಿದ. ಬಳಿಕ ಬಿತ್ತನೆಯನ್ನೂ ಮಾಡಿದ. ಆದರೂ ಅವನ ಅಣ್ಣಂದಿರರು ಗೆಳೆಯರ ಜೊತೆ ಹರಟೆ ಹೊಡೆಯುತ್ತ ಆರಾಮವಾಗಿದ್ದರು. ಈಗಲೂ ಅಣ್ಣಂದಿರನ್ನು ಕೆಲಸ ಮಾಡಲು ಕರೆದ.

''ನಮ್ಮ ಕೆಲಸ ಮಾಡಲು ನಮಗೆ ಗೊತ್ತಿದೆ. ನೀನು ಉಪದೇಶ ಮಾಡಲು ಬರಬೇಡ. ಗದ್ದೆ ಕೆಲಸ ಮಾಡಲು ಅಂಥ ಅವಸರವೇನೂ ಇಲ್ಲ. ಹೋಗಾಚೆ ನೀನು'' ಎಂದು ಅವನನ್ನು ಅಣ್ಣಂದಿರು ಬೈದು ಕಳುಸಿದರು.

ಕೊನೆಯ ಮಗ ಕೊಂಚವೂ ವಿರಮಿಸದೆ ಅವರಿಬ್ಬರ ಗದ್ದೆಯನ್ನು ತಾನೆ ಉತ್ತಿ ಬಿತ್ತನೆಯನ್ನೂ ಮಾಡಿದ. ಯಾವ ಕೆಲಸಕ್ಕೆ ಕರೆದರೂ, ಮೊದಲೆರಡು ಮಕ್ಕಳು ಬಾರದೆ ಅಲ್ಲಿ-ಇಲ್ಲಿ ತಿರುಗಾಡುತ್ತಾ ತಿಂದುಂಡು ದಿನ ಕಳೆಯುತ್ತಿದ್ದರು. ಇದನ್ನು ಕಂಡು ರಂಗಪ್ಪ ರೈತನ ಚಿಂತೆ ಹೆಚ್ಚುತ್ತಿತ್ತು.

ಕೊನೆಯ ಮಗನೇ ಮೂರು ಗದ್ದೆಗಳ ಕೆಲಸ ಕಾರ್ಯವನ್ನು ಹಗಲಿರುಳೆನ್ನದೆ ಮಾಡತೊಡಗಿದ. ಎಲ್ಲಾ ಗದ್ದೆಯಲ್ಲಿಯೂ ಉತ್ತಮ ಫಸಲು ಬಂದಿತ್ತು.

ಈಗಲೂ ಕೊನೆಯ ಮಗ ಬೆಳೆಯ ಕಟಾವು ಮಾಡಿಸಲು, ಮನೆಗೆ ಸಾಗಿಸಲು ಅಣ್ಣಂದಿರನ್ನು ಕರೆದ. ಆದರೂ ಅವರು ಬರಲಿಲ್ಲ. ಕೊನೆಯ ಮಗನೇ ಮೂರು ಗದ್ದೆಗಳ ಬೆಳೆಯನ್ನು ಕೊಯ್ದ. ಮೂಟೆ ಕಟ್ಟಿ ಮನೆಗೆ ಸಾಗಿಸಿದ. ಭತ್ತವನ್ನು ಬೇರ್ಪಡಿಸಿದ. ಭತ್ತವನ್ನು ಮಿಲ್ಲಿಗೆ ಕೊಂಡೊಯ್ದ. ಬಳಿಕ ಅಲ್ಲಿಂದ ಅಕ್ಕಿಯ ಮೂಟೆಗಳನ್ನೆಲ್ಲ ಮನೆಗೆ ಸಾಗಿಸಿದ. ಈ ಯಾವ ಕೆಲಸಕ್ಕೂ ಅಣ್ಣಂದಿರು ಬರಲಿಲ್ಲ. ''ಎಲ್ಲಾ ತಮ್ಮ ಮಾಡುತ್ತಿದ್ದಾನಲ್ಲ ; ಮತ್ತೆ ನಾವೇಕೆ ಕೆಲಸ ಮಾಡಬೇಕು ?'' ಎಂದುಕೊಂಡು ಅವರು ಸುಮ್ಮನಿದ್ದರು.

''ಅಪ್ಪಾ, ಈ ವರ್ಷ ಚೆನ್ನಾಗಿ ಬೆಳೆ ಬಂದಿದೆ ನೋಡಿ; ಎಷ್ಟೊಂದು ಅಕ್ಕಿ ಮೂಟೆಗಳು !'' ಎಂದು ಕೊನೆಯ ಮಗ ಹರ್ಷದಿಂದ ನುಡಿದ.

''ಭೇಷ್ ಮಗನೇ, ನೀನು ನಿಜವಾಗಿಯು ಒಳ್ಳೆಯ ಕೆಲಸಗಾರ'' ಎಂದು ಬೆನ್ನು ತಟ್ಟಿದ ರಂಗಪ್ಪ.

ಈಗ ಮೊದಲೆರಡು ಮಕ್ಕಳೂ ತಂದೆಯ ಬಳಿಗೆ ಬಂದರು. ''ಅಪ್ಪಾ ಇದರಲ್ಲಿ ನಮ್ಮ ಪಾಲೆಷ್ಟು ? ಎಂದು ಕೇಳಿದರು.

''ಸ್ವಲ್ಪ ತಡೆಯಿರಿ'' ಎಂದು ಹೇಳಿದ ರಂಗಪ್ಪ.

''ನಿಮ್ಮ ಗದ್ದೆಯ ಕಳೆ ಕೀಳುವುದು, ಉಳುಮೆ, ಬಿತ್ತನೆ ಕೆಲಸ ಎಲ್ಲ ಯಾರು ಮಾಡಿದರು ? ನಿಮ್ಮ ಗದ್ದೆಗೆ ನೀರು ಯಾರು ಉಣಿಸಿದರು ? ಯಾರು ಗೊಬ್ಬರ ಹಾಕಿದರು ? ನಿಮ್ಮ ಗದ್ದೆಯ ಫಸಲನ್ನು ಯಾರು ಕೊಯ್ದರು ? ಯಾರು ಅದನ್ನು ಮನೆಯವರೆಗೆ ಹೊತ್ತು ತಂದರು ? ಹೇಳಿ ನೋಡೋಣ'' ಎಂದು ಕೇಳಿದ ರಂಗಪ್ಪ.

ಈಗ ಉತ್ತರ ಹೇಳಲು ಮೊದಲೆರಡು ಮಕ್ಕಳಿಗೆ ನಾಚಿಕೆಯಾಯಿತು.

''ಎಲ್ಲಾ ತಮ್ಮನೇ ಮಾಡಿದ'' ಎಂದರು ಮೆಲ್ಲಗೆ.

''ಹಾಗಿದ್ದ ಮೇಲೆ ಎಲ್ಲಾ ಪಾಲು ಅವನಿಗೇ ಸೇರಬೇಕಲ್ಲವೇ'' ಎಂದ ರಂಗಪ್ಪ.

ಮೊದಲೆರಡು ಮಕ್ಕಳ ಬಾಯಿಯಿಂದ ಒಂದೂ ಮಾತು ಹೊರಡಲಿಲ್ಲ.

''ನೀವೇನು ಮಾಡಿದಿರಿ ? ನಿಮಗೂ ನಿಮ್ಮ ಪಾಲಿನ ಗದ್ದೆ ಕೊಟ್ಟಿದ್ದೆನಲ್ಲವೇ ?'' ಎಂದ ರಂಗಪ್ಪ ಸಿಟ್ಟಿನಿಂದ.

''ತಮ್ಮ ಎಷ್ಟೆಲ್ಲಾ ಕೆಲಸ ಮಾಡಿದ, ನಾವು ಮಾತ್ರ ಸುಮ್ಮನಿದ್ದೆವು. ಛೇ ! ನಾವೂ ಕೆಲಸ ಮಾಡಿದ್ದರೆ ನಮಗೂ ಪಾಲು ಸಿಗುತ್ತಿತ್ತು'' ಎಂದು ಮೊದಲನೆಯ ಎರಡೂ ಮಕ್ಕಳು ಅಂದುಕೊಂಡರು.

''ನಿಮಗೇನೂ ಕೊಡುವುದಿಲ್ಲ. ಎಲ್ಲವನ್ನೂ ಕಷ್ಟಪಟ್ಟು ಕೆಲಸ ಮಾಡುವ ನಿಮ್ಮ ತಮ್ಮನಿಗೇ ಕೊಟ್ಟುಬಿಡುತ್ತೇನೆ'' ಎಂದ ರಂಗಪ್ಪ.

''ಅಪ್ಪಾ ಅವರನ್ನು ಕ್ಷಮಿಸಿಬಿಡಿ. ಬಹುಶಃ ಅವರಿಗೀಗ ತಮ್ಮ ತಪ್ಪಿನ ಅರಿವಾಗಿದೆ'' ಎಂದ ಕೊನೆಯ ಮಗ.

''ಅಪ್ಪಾ, ದಯವಿಟ್ಟು ನಮ್ಮನ್ನು ಕ್ಷಮಿಸಿ. ಇಷ್ಟು ಸಮಯ ಸೋಮಾರಿಗಳಾಗಿ ಏನೂ ಕೆಲಸ ಮಾಡದೆ ದಿನ ಕಳೆದೆವು. ಇನ್ನು ಮುಂದೆ ಹಾಗೆ ಮಾಡುವುದಿಲ್ಲ'' ಎಂದು ಮಕ್ಕಳಿಬ್ಬರೂ ತಂದೆಯ ಕಾಲಿಗೆ ಬಿದ್ದರು.

ರಂಗಪ್ಪನು ಅವರಿಗೆ ಇನ್ನೊಂದು ಅವಕಾಶ ನೀಡಲು ನಿರ್ಧರಿಸಿದ. ಈ ಬಾರಿ ಮೊದಲೆರಡು ಮಕ್ಕಳು ಸೋಮಾರಿಗಳಾಗದೆ ಹೊಲದಲ್ಲಿ ಚೆನ್ನಾಗಿ ದುಡಿದರು; ಒಳ್ಳೆಯ ಬೆಳೆ ಬೆಳೆದರು. ಕೊನೆಗೂ ತನ್ನ ಎಲ್ಲಾ ಮಕ್ಕಳು ಒಳ್ಳೆಯ ಕೆಲಸಗಾರರಾದುದನ್ನು ಕಂಡು ರಂಗಪ್ಪ ರೈತನಿಗೂ ತುಂಬ ಸಂತೋಷವಾಯಿತು.

ಕೊನೆಗೂ ತನ್ನ ಮಕ್ಕಳೆಲ್ಲರಿಗೂ, ''ಕಷ್ಟಪಟ್ಟು ದುಡಿದರೆ ಒಳ್ಳೆಯ ಫಲ ಸಿಗುತ್ತದೆ ಎಂಬುದು ಅರ್ಥವಾಯಿತಲ್ಲ'' ಎಂದುಕೊಂಡು ರಂಗಪ್ಪ ನೆಮ್ಮದಿಯ ನಿಟ್ಟುಸಿರು ಬಿಟ್ಟನು.

## ಶಬ್ದಗಳ ಅರ್ಥ :

**ಸೋಮಾರಿ** – ಕೆಲಸ ಮಾಡದವ ; **ಕಳೆ** – ಪೈರಿನ ನಡುವೆ ಬೆಳೆಯುವ ಹುಲ್ಲು ; **ಕೀಳು** – ಕಿತ್ತು ; **ಗದರಿಸು** – ಬೆದರಿಸು ; **ಕಟಾವು** – ಕೊಯ್ಲು

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ರಂಗಪ್ಪನಿಗೆ ಎಷ್ಟು ಜನ ಮಕ್ಕಳಿದ್ದರು ?
2) ರಂಗಪ್ಪನು ಯಾವ ಉಪಾಯ ಮಾಡಿದನು ?
3) ಕೊನೆಯ ಮಗನ ಪಾಲಿಗೆ ಯಾವ ಗದ್ದೆ ಬಂದಿತು ?
4) ದುಡಿಮೆಯ ಫಲ ಯಾರಿಗೆ ಸೇರಬೇಕು ?
5) ರಂಗಪ್ಪನು ಹಿರಿಯ ಮಕ್ಕಳನ್ನು ಏಕೆ ಕ್ಷಮಿಸಿದನು ?

**ಕೃತಿ 2) ಗುಂಪಿಗೆ ಸೇರದ ಪದ ಗುರುತಿಸಿರಿ.**

1) ಭತ್ತ, ಜೋಳ, ಗೋಧಿ, ಕಡಲೆ [ ]
2) ಹುರುಳಿ, ಮೂಕಣಿ, ಹೆಸರು, ಶೇಂಗಾ [ ]
3) ಜೋಳ, ಗೋಧಿ, ಸಜ್ಜೆ, ತೊಗರಿ [ ]
4) ರೆಂಟೆ, ಕುಂಟೆ, ಕೂರಿಗೆ, ಗಾಡಿ [ ]

**ಕೃತಿ 3) ಕೆಳಗಿನ ವಾಕ್ಯದಲ್ಲಿ ಗೆರೆ ಹೊಡೆದ ಪದಗಳ ವಿಭಕ್ತಿ ಗುರುತಿಸಿರಿ.**

<u>**ಅಜ್ಜಿಯು**</u> ತನ್ನ <u>**ಮಗಳನ್ನು**</u> ಕಾಣಲು <u>**ಸಕಲೇಶಪುರದಿಂದ ಕೆಂಭಾವಿಗೆ**</u> ಬಂದಳು.

**ಕೃತಿ 4) i) ''ಅಪ್ಪಾ , ಇನ್ನು ಮುಂದೆ ಸೋಮಾರಿಗಳಾಗುವುದಿಲ್ಲ.'' ಎಂದು ತಂದೆಯಕಾಲಿಗೆ ಬಿದ್ದರು – ಏಕೆಂದರೆ**

1) ತಂದೆಯನ್ನು ಸಮಾಧಾನ ಪಡಿಸಲು.
2) ಆಸ್ತಿಯನ್ನು ಪಡೆದುಕೊಳ್ಳಲು.
3) ಅವರಿಗೆ ತಪ್ಪಿನ ಅರಿವಾಯಿತು.
4) ತಮ್ಮನಿಗೆ ಅಪಮಾನ ಮಾಡಲು.

**ii) ಮೂರು ಗದ್ದೆಗಳಲ್ಲಿಯ ಕೆಲಸವನ್ನು ಮಾಡಿದವ**

1) ತಂದೆ
2) ಹಿರಿಯ ಮಗ
3) ಕಿರಿಯ ಮಗ
4) ಎರಡನೆಯ ಮಗ

**ಕೃತಿ 5) ವಿವಿಧ ಪ್ರಕಾರದ ಮಣ್ಣುಗಳನ್ನು ಸಂಗ್ರಹಿಸಿರಿ. ಅವುಗಳ ಗುಣಲಕ್ಷಣಗಳನ್ನ ನಿಮ್ಮ ಮಾತಿನಲ್ಲಿ ಬರೆಯಿರಿ.**

CNUD8K

# 3. ಚತುರ ನಿರಂಜನ

ಸುಧಾಮೂರ್ತಿ

ನಿರಂಜನ ಸಿರಿವಂತನಲ್ಲ , ಬಹಳ ವಿದ್ಯಾವಂತನೂ ಅಲ್ಲ, ಆದರೆ ತುಂಬಾ ಜಾಣ. ಒಂದು ದಿನ ಆತ ಬೇರೆ ಊರಿಗೆ ಹೋಗುವಾಗ ದಾರಿಯಲ್ಲಿ ಸಿದ್ದಪ್ಪ ಸಿಕ್ಕ. ಆತನ ಮುಖ ಕಂದಿತ್ತು. ಕೈಯಲ್ಲಿ ಕುದುರೆ ಬಾಲ ಮಾತ್ರವಿದ್ದಿತ್ತು.

''ಯಾಕೋ ಸಿದ್ದಪ್ಪ ?'' ಎಂದ ನಿರಂಜನ.

''ನನ್ನ ಕುದುರೆ ಅಪಘಾತದಲ್ಲಿ ಸತ್ತು ಹೋಯಿತು. ಅದರ ಶವವನ್ನು ನರಿ ಎಳೆದುಕೊಂಡು ಹೋಗಿದೆ. ಅದರ ಬಾಲ ಮಾತ್ರ ಉಳಿದಿದೆ'' ಎಂದು ದುಃಖಿಸಿದ ಸಿದ್ದಪ್ಪ.

ಸಿದ್ದಪ್ಪ ಬಡವ ಇನ್ನೊಂದು ಕುದುರೆ ತರುವುದು ಕಷ್ಟವೇ.

ಅದಕ್ಕೆ ನಿರಂಜನ, ಸಿದ್ದಪ್ಪ ನೀನು ಬಾಲ ಮಾತ್ರ ಕೊಡು. ನಾನು ನಿನಗೆ ಒಳ್ಳೆಯ ಕುದುರೆಯೊಂದನ್ನು ತಂದು ಕೊಡುತ್ತೇನೆ.'' ಎಂದ.

''ಬಾಲದಿಂದ ಕುದುರೆ ಬರುತ್ತದಾ ?'' ಎಂದ ಸಿದ್ದಪ್ಪ.

''ಅದರ ಯೋಚನೆ ನಿನಗೇಕೆ ? ಕುದುರೆಯನ್ನು ತಂದುಕೊಟ್ಟರೆ ಆಯಿತಲ್ಲ'' ಎಂದು ನಿರಂಜನ ಬಾಲ ಹಿಡಿದುಕೊಂಡು ಮುಂದೆ ಹೊರಟ.

ಸ್ವಲ್ಪ ದೂರದಲ್ಲಿ ಒಂದು ಮೊಲದ ಬಿಲ ಕಂಡುಬಂತು. ನಿರಂಜನ ಆ ಬಿಲದಲ್ಲಿ ಬಾಲತೂರಿಸಿ ದಾರಿಹೋಕರಿಗಾಗಿ ಕಾಯುತ್ತಾ ಕುಳಿತ.

ಅದೇ ಸಮಯಕ್ಕೆ ಆ ದಾರಿಯಲ್ಲಿ ಒಬ್ಬ ದುರಾಸೆ ಸಿರಿವಂತ ಕುದುರೆ ಮೇಲೆ ಬಂದ. ಕುದುರೆಯ ಖರಪುಟದ ಸದ್ದು ಕೇಳಿದ ತಕ್ಷಣ ನಿರಂಜನ ಕುದುರೆ ಬಾಲ ಗಟ್ಟಿಯಾಗಿ ಹಿಡಿದುಕೊಂಡ ಕುಳಿತ.

''ನೀನು ಯಾರು ? ಇದೇನು ಕುದುರೆ ಬಾಲ ಹಿಡಿದುಕೊಂಡು ಕುಳಿತ್ತಿದ್ದೀಯೆ ? ಎಂದ ಆ ಕುದುರೆ ಸವಾರ.

''ನಾನು ಕುದುರೆ ಮೇಯಿಸಲು ಬಂದಿದ್ದೆ. ಆ ಬಿಲದ ಕೆಳಗೆ ನಿಧಿ ಇದೆಯಂತೆ. ನನ್ನ ಕುದುರೆ ವಿಶೇಷ ಶಕ್ತಿಯುಳ್ಳದ್ದು. ಎಲ್ಲಿಯೇ ನಿಧಿ ಇದ್ದರೂ ಅದಕ್ಕೆ ಕಂಡುಹಿಡಿಯುವ ಜ್ಞಾನ ಅದಕ್ಕಿದೆ. ಅದು ಈ ಬಿಲದ ಒಳಗೆ ಹೋಗುತ್ತಿತ್ತು. ನಾನೂ ಅದರ ಜೊತೆಗೆ ಹೋಗಬೇಕೆಂದು ಪ್ರಯತ್ನಪಟ್ಟೆ, ಅಷ್ಟರಲ್ಲಿ ಅದು ಬಿಲದ ಒಳಗೆ ನುಸುಳಿತು. ಅದಕ್ಕೆ ನಾನು ಬಾಲ ಹಿಡಿದುಕೊಂಡಿದ್ದೇನೆ. ಇನ್ನೇನು ನಿಧಿ ಸಿಕ್ಕಿರಬಹುದು, ನಾನು ಒಳಗೆ ಹೋಗಿ ತರಬೇಕು ಎಂದ ನಿರಂಜನ.

ಕುದುರೆ ಸವಾರನ ಮನಸ್ಸಿನಲ್ಲಿ ಆಸೆ ಚಿಗುರೆಗೊಂಡಿತು. ಅದನ್ನು ಗಮನಿಸಿ ನಿರಂಜನ ನಿಧಿ ತುಂಬಾ ಇರಬಹುದು. ಅದನ್ನು ಹಾಕಿಕೊಳ್ಳಲು ನನ್ನ ಬಳಿ ಚೀಲವೂ ಇಲ್ಲ, ನಿಮ್ಮ ಕುದುರೆಯ ಮೇಲಿರುವ ಚೀಲವನ್ನು ಕೊಟ್ಟರೆ ನಾನು ಹಣವನ್ನು ಕೊಡುತ್ತೇನೆ ಎಂದ.

ಅದಕ್ಕೆ ಆ ಕುದುರೆ ಸವಾರ ''ಈ ಚೀಲದಲ್ಲಿ ತೂತಿದೆ, ನೀನು ನನ್ನ ಕುದುರೆಯೇರಿ ಊರಿಗೆ ಹೋಗಿ ಎರಡು ಗಟ್ಟಿಯಾದ ಚೀಲ ತೆಗೆದುಕೊಂಡು ಬಾ. ಅಷ್ಟರವರೆಗೆ ನಾನು ಕುದುರೆಯ ಬಾಲ ಹಿಡಿದಿರುತ್ತೇನೆ'' ಎಂದ.

ಕುದುರೆ ಸವಾರನ ಕುದುರೆ ಗಟ್ಟಿಮುಟ್ಟಾಗಿತ್ತು.

ಅದಕ್ಕೆ ನಿರಂಜನ, ''ನಾನು ಊರೊಳಗೆ ಹೋಗಿ ಬರಲು ಇನೊಂದರ್ಧ ಗಂಟೆಯಾಬಹುದೇನೋ, ಅಲ್ಲಿಯವರೆಗೂ ನೀವು ಗಟ್ಟಿಯಾಗಿ ಈ ಬಾಲ ಹಿಡಿದಿರಿ'' ಎಂದು ಕುದುರೆಯನ್ನು ಏರಿ ಕ್ಷಣದಲ್ಲಿ ಮಾಯವಾದ.

‘‘ಅಯ್ಯೋ ಪೆದ್ದ. ನನ್ನ ಮಾತು ನಂಬಿ ಚೀಲ ತರಲು ಊರಿಗೆ ಹೋಗಿದ್ದಾನೆ. ಊರಿಗೆ ಹೋಗಿ ಬರಲು ಎರಡು ಗಂಟೆಯೇ ಬೇಕು, ಅಷ್ಟರಲ್ಲಿ ನಾನು ನಿಧಿಯನ್ನು ಹೊತ್ತುಕೊಂಡು ಈ ಕುದುರೆ ಏರಿ ಹೋಗಿರುತ್ತೇನೆ’’ ಎಂದುಕೊಂಡ ಕುದುರೆ ಸವಾರ.

ಅರ್ಧ ಗಂಟೆಯಾದರೂ ಕುದುರೆಯೂ ಬರಲಿಲ್ಲ ನಿರಂಜನನೂ ಬರಲಿಲ್ಲ. ಕುದುರೆ ಸವಾರ ಸ್ವಲ್ಪ ಗಟ್ಟಿಯಾಗಿಯೇ ಕುದುರೆಯ ಬಾಲವನ್ನು ಎಳೆದ. ಅವನು ಎಳೆದ ರಭಸಕ್ಕೆ ಹಿಂತಿರುಗಿ ಬಿದ್ದ. ಬಾಲ ಅವನ ಕೈಯಲ್ಲಿ ಬಂದಿತು. ಬಿಲದಲ್ಲಿ ಕುದುರೆ ಬಿಡಿ, ಮೊಲ ಸಹಿತ ಇರಲಿಲ್ಲ. ಅವನು ಕಕ್ಕಾಬಿಕ್ಕಿಯಾದ.

ಇತ್ತ ನಿರಂಜನನು ಕುದುರೆಯನ್ನು ಸಿದ್ದಪ್ಪನಿಗೆ ಕೊಟ್ಟು ಕಳುಹಿಸಿದನು. ಸ್ವಲ್ಪ ಸಮಯದ ನಂತರ ಕುದುರೆ ಸವಾರನು ಅಲ್ಲಿಗೆ ಬಂದನು. ಕೂಡಲೇ ನಿರಂಜನನು ‘‘ಏ ಕುದುರೆ ಸವಾರಾ ನೀನು ನಿಧಿಯನ್ನು ಎಲ್ಲಿ ಇಟ್ಟು ಬಂದಿ? ಸತ್ಯ ಹೇಳದಿದ್ದರೆ ರಾಜನಿಗೆ ದೂರು ಕೊಡುತ್ತೇನೆ’’ ಎಂದು ಗುಡುಗಿದನು. ಹೆದರಿದ ಕುದುರೆ ಸವಾರ ಕುದುರೆ ಹೋದರೆ ಹೋಗಲಿ ಉಳಿದರೆ ಸಾಕೆಂದು ಕಾಲಿಗೆ ಬುದ್ಧಿ ಹೇಳಿದನು.

## ಶಬ್ದಗಳ ಅರ್ಥ :

**ಶವ** – ಹೆಣ; **ನಿಧಿ** – ಸಂಪತ್ತು; **ನುಸುಳು** – ನುಗ್ಗು; **ಪೆದ್ದ** – ಮೂರ್ಖ; **ನಂಬು** – ವಿಶ್ವಾಸವಿಡು; **ರಭಸ** – ವೇಗ; **ಕಕ್ಕಾಬಿಕ್ಕಿ** – ದಿಗ್ಭ್ರಮೆ, ಏನೂ ತೋಚದಂತಾಗು.

**ಕೃತಿ: 1) ಕೆಳಗಿನವುಗಳನ್ನು ಸರಿಹೊಂದಿಸಿ ಬರೆಯಿರಿ**

| ‘ಅ’ ಗುಂಪು | | ‘ಬ’ ಗುಂಪು |
|---|---|---|
| (1) ನಿರಂಜನ | | (ಅ) ದುರಾಸೆ ಸಿರಿವಂತ |
| (2) ಸಿದ್ದಪ್ಪ | | (ಆ) ತುಂಬಾ ಜಾಣ |
| (3) ಕುದುರೆ ಸವಾರ | | (ಇ) ಒಬ್ಬ ಬಡವ |

**ಕೃತಿ: 2) ಕೆಳಗಿನ ಮಾತುಗಳನ್ನು ಯಾರು ಹೇಳಿದರು ?**

1) ‘‘ಯಾಕೋ ಸಿದ್ದಪ್ಪ?’’

2) ‘‘ಬಾಲದಿಂದ ಕುದುರೆ ಬರುತ್ತದಾ?’’

3) ‘‘ನೀನು ಯಾರು? ಇದೇನು ಕುದುರೆ ಬಾಲ ಹಿಡಿದುಕೊಂಡು ಕುಳಿತಿದ್ದೀಯೇ?’’

4) ‘‘ಏ ಕುದುರೆ ಸವಾರಾ, ನೀನು ನಿಧಿಯನ್ನು ಎಲ್ಲಿ ಇಟ್ಟು ಬಂದಿ?’’

**ಕೃತಿ: 3) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**



**ಕೃತಿ: 4) ಕುದುರೆಯ ಉಪಯೋಗ ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಕೃತಿ: 5) ಕೆಳಗಿನ ಶಬ್ದಗಳಿಗೆ ಉಪಸರ್ಗಯುಕ್ತ ಪದಗಳನ್ನು ಬರೆಯಿರಿ.**

ಉದಾ.ಚಿತ್ರ – ವಿಚಿತ್ರ


ಆಶೆ – 

ಯತ್ನ – 

ಯೋಗ – 

ಖ್ಯಾತ – 

**ಕೃತಿ: 6) ಕೆಳಗಿನ ಶಬ್ದಗಳ ಕೊನೆಯ ಅಕ್ಷರದಿಂದ ಉಂಟಾಗುವ ಪ್ರತಿ ಅಕ್ಷರಕ್ಕೆ ಮೂರು ಶಬ್ದಗಳನ್ನು ತಯಾರಿಸಿರಿ.**



# 4. ರಕ್ಷಾಬಂಧನ

ಎಚ್.ವ್ಹಿ. ನರಸಿಂಹಮೂರ್ತಿ

ಶ್ರಾವಣ ಶುದ್ಧ ಹುಣ್ಣಿಮೆಯಂದು ಆಚರಿಸುವ 'ರಕ್ಷಾಬಂಧನ' ರಾಖೀಹಬ್ಬವೆಂದೇ ಪ್ರಸಿದ್ಧಿ ಪಡೆದಿದೆ. ಸಮಾಜದ ಸ್ತ್ರೀ-ಪುರುಷರಲ್ಲಿ ಪರಸ್ಪರ ಸೋದರತೆಯ ಪವಿತ್ರ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಹಬ್ಬ ಇದು. 'ಸಮಾಜದಲ್ಲಿರುವ ಸ್ತ್ರೀಯರೆಲ್ಲ ತನ್ನ ಅಕ್ಕ-ತಂಗಿಯರು, ಆಪತ್ಕಾಲದಲ್ಲಿ ಅವರ ಮಾನ-ಪ್ರಾಣಗಳನ್ನು ರಕ್ಷಿಸುವುದು ನನ್ನ ಆದ್ಯ ಕರ್ತವ್ಯ. ಈ ಕರ್ತವ್ಯ ನಿರ್ವಹಣೆಯಲ್ಲಿ ಸಂದರ್ಭ ಬಂದರೆ ಪ್ರಾಣ ಕೊಡಲೂ ನಾನು ಸಿದ್ಧ, ಎಂಬ ಪ್ರತಿಜ್ಞೆಯ ಸಂಕೇತ, ಪವಿತ್ರ ರಕ್ಷಾಬಂಧನ.

ರಕ್ಷಾಬಂಧನ ನಮ್ಮ ಜೀವನಯಜ್ಞದ ಕಂಕಣಬಂಧನದ ಹಬ್ಬವೂ ಹೌದು. ರಥೋತ್ಸವ, ಯಜ್ಞ, ಮದುವೆ, ಮುಂಜಿ - ಮೊದಲಾದ ಉತ್ಸವಗಳು ನಿರ್ವಿಘ್ನವಾಗಿ ನಡೆಯಲೆಂದು ಶ್ರೀದೇವರನ್ನು ಪ್ರಾರ್ಥಿಸಿ, ದೀಕ್ಷೆ ತೊಟ್ಟು ಕಂಕಣಕಟ್ಟುವ ಆಚರಣೆ ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ನಮ್ಮ ಜೀವನವೂ ಒಂದು ಯಜ್ಞವಷ್ಟೇ. ವರ್ಷದಲ್ಲಿ ಒಂದು ದಿನ ಪವಿತ್ರವಾದ ರಕ್ಷೆಯನ್ನು ಕಂಕಣದಂತೆ ಧರಿಸಿ, ಆ ವರ್ಷವೆಲ್ಲ ನಮ್ಮ ಕಾರ್ಯಗಳು ಆತಂಕವಿಲ್ಲದೆ ನಡೆಯಲಿ; ಜೀವನ ಯಜ್ಞಕ್ಕೆ ದುಷ್ಟಶಕ್ತಿಗಳು ಆತಂಕವೊಡ್ಡದಿರಲಿ - ಎಂದು ಭಗವಂತನನ್ನು ಪ್ರಾರ್ಥಿಸುವ ಪವಿತ್ರ ಆಚರಣೆ ಈ ರಕ್ಷಾಬಂಧನ.

ರಕ್ಷಾಬಂಧನ ಒಂದು ಶಾಸ್ತ್ರೀಯ ಪ್ರಕ್ರಿಯೆ. ಶ್ರಾವಣ ಶುದ್ಧ ಹುಣ್ಣಿಮೆಯ ದಿನ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು, ಮಂಗಳಸ್ನಾನ-ನಿತ್ಯಕರ್ಮಾದಿಗಳನ್ನು ಪೂರೈಸಿ, ಕಲಶಸ್ಥಾಪನೆ ಮಾಡಬೇಕು. ಹಳದಿ ಬಟ್ಟೆಯಲ್ಲಿ ಸ್ವಲ್ಪ ಕುಂಕುಮ-ಅಕ್ಷತೆಯನ್ನು ಕಟ್ಟಿ ಕಲಶದ ಉತ್ತರ ದಿಕ್ಕಿನಲ್ಲಿ ಇಟ್ಟು, ಅದಕ್ಕೆ ವಾಸುಕೀ ಮೊದಲಾದ ಅಭಿಮಾನಿ ದೇವತೆಗಳನ್ನು ಆವಾಹಿಸಬೇಕು. ಅನಂತರ ಧ್ಯಾನಾವಾಹನಾದಿ ಷೋಡಶೋಪಚಾರ ಮಾಡಿ ಆ ರಕ್ಷೆಯನ್ನು ಯಜಮಾನನು ಮಂತ್ರಪೂರ್ವಕವಾಗಿ ತನ್ನ ಬಲ ಮುಂಗೈಗೆ ಕಟ್ಟಿಕೊಳ್ಳುವುದಲ್ಲದೆ, ಮನೆಮಂದಿಗೆ ಮತ್ತು ತನ್ನ ಆಪ್ತೇಷ್ಟರಿಗೂ ಕಟ್ಟಬೇಕು.

ರಕ್ಷಾಬಂಧನ ಕಾಲದಲ್ಲಿ ಬಳಸುವ ಶ್ಲೋಕ ತುಂಬ ಅರ್ಥಪೂರ್ಣವಾದುದು:

ಯೇನ ಬದ್ಧೋ ಬಲೀ ರಾಜಾ ದಾನವೇಂದ್ರೋ ಮಹಾಬಲಃ ।

ತೇನ ತ್ವಾಂ ಪ್ರತಿಬಧ್ನಾಮಿ ರಕ್ಷೇ ಮಾ ಚಲ ಮಾ ಚಲ ॥

ಅಂದರೆ 'ಬಲಶಾಲಿಯಾದ ರಕ್ಕಸರಾಜ ಬಲಿಯು ಯಾವುದರಿಂದ ಬಂಧಿತನಾದನೋ ಅದರಿಂದ ನಿನ್ನನ್ನು ಕಟ್ಟುತ್ತೇನೆ. ರಕ್ಷೆಯೆ! ನೀನು ಗಟ್ಟಿಯಾಗಿ ನಿಲ್ಲುತ ಜಾರದಿರು' ಎಂದರ್ಥ.

ಸಹೋದರಿಯರು ಅಣ್ಣತಮ್ಮಂದಿರಿಗೆ ರಾಖಿಯನ್ನು ಕಟ್ಟಿ ತಮ್ಮ ಬಾಂಧವ್ಯದ ಮಧುರ ಸ್ಮೃತಿಯನ್ನು ಉಂಟುಮಾಡುತ್ತಾರೆ. ಭಾರತೀಯ ಸಂಸ್ಕೃತಿಯು ತನ್ನ ಸ್ವಂತ ಪತ್ನಿಯ ಹೊರತಾಗಿ ಉಳಿದ ಎಲ್ಲ ಸ್ತ್ರೀಯರನ್ನೂ ಅವರವರ ವಯಸ್ಸಿಗೆ ಅನುಗುಣವಾಗಿ ತಾಯಿ ಅಥವಾ ಅಕ್ಕ, ತಂಗಿಯೆಂದು ಕಾಣಬೇಕೆಂದು ಬೋಧಿಸುತ್ತದೆ. ಬ್ರಹ್ಮಚಾರಿ, ಸನ್ಯಾಸಿ, ಯತಿಗಳಿಗಂತೂ ಎಲ್ಲ ಸ್ತ್ರೀಯರೂ ಜಗನ್ಮಾತೆಯ ರೂಪವೇ. ಆದ್ದರಿಂದ ಮಹಿಳೆಯರು ಪುರುಷರಿಗೆ ಕಳಿಸುವ ರಾಖಿಯು ''ಈ ಪವಿತ್ರ ಭಾವನೆ ನಿಮ್ಮಲ್ಲಿ ಮೂಡಲಿ'' ಎಂಬ ಸಂದೇಶವನ್ನು ನೀಡುತ್ತದೆ. ಪುರುಷರು ಇದನ್ನು ಸ್ವೀಕರಿಸಿ ''ನೀವು ನಮ್ಮ ಸೋದರಿಯರು. ನಿಮ್ಮ ಪ್ರಾಣ-ಮಾನಗಳನ್ನು ರಕ್ಷಿಸುವ ಭಾರವನ್ನು ನಾವು ಹೊರುವೆವು'' ಎಂಬ ಸಾಮಾಜಿಕ ಮಹತ್ವದ ಸಂದೇಶವನ್ನು ರಾಖಿಯ ಮೂಲಕ ಅವರಿಗೆ ಕಳಿಸಬೇಕು.

ರಕ್ಷಾಬಂಧನದ ಕುರಿತು ಅನೇಕ ಐತಿಹಾಸಿಕ ಘಟನೆಗಳನ್ನು ಹೇಳಲಾಗುತ್ತದೆ. ಕೆಲವು ರಾಜರು ಮೊದಲು ಶತ್ರುರಾಜರನ್ನು ಸದೆಬಡಿದು, ಅನಂತರ ಆ ಶತ್ರುರಾಜರ ಹೆಣ್ಣುಮಕ್ಕಳ ಕೈಯಿಂದ ರಾಖಿಯನ್ನು ಕಟ್ಟಿಸಿಕೊಂಡು,

ಹಿಂದಿನ ವೈರವನ್ನೇ ಮರೆತು ಅವರೊಂದಿಗೆ ಸಹಜ ಮಿತ್ರರಾಗುತ್ತಿದ್ದರಂತೆ. ರಾಖಿಯನ್ನು ಕಟ್ಟಿದ ಸಹೋದರಿಗಾಗಿ ಪ್ರಾಣವನ್ನೇ ಅರ್ಪಿಸಿದ ಅನೇಕ ಮುಸಲ್ಮಾನ ರಾಜರ ಕಥೆಗಳು ಪ್ರಚಲಿತದಲ್ಲಿವೆ.

''ಬಂಧನವು ನಮಗೆ ಬೇಡ; ನಾವು ಮುಕ್ತರಾಗೋಣ'' ಎಂಬ ಆಕಾಂಕ್ಷೆಯು ಸಹಜವೇ. ಆದರೆ ರಕ್ಷಾಬಂಧನವು ಇನ್ನೊಬ್ಬರು ನಮ್ಮ ಮೇಲೆ ಹೇರಿದ ಬಂಧನವಲ್ಲ; ದಾಸ್ಯದ ಸಂಕೋಲೆಯೂ ಅಲ್ಲ. ನಮ್ಮ ಧರ್ಮ, ನಮ್ಮ ಪವಿತ್ರ ಮಾತೃಭೂಮಿ ನಮಗೆ ನೀಡಿರುವ ಮಧುರ ಬಾಂಧವ್ಯದ ಸಂಕೇತ ಇದು. ನಮ್ಮ ಧರ್ಮಶಾಸ್ತ್ರಗಳಲ್ಲಿ ಇದರ ವಿಧಿವಿಧಾನವಿದೆ. ಪರಂಪರೆಯಿಂದ ಇದು ನಡೆದು ಬಂದಿದೆ. ಇದನ್ನು ಎಲ್ಲರೂ ಸಂತೋಷದಿಂದ ಸ್ವೀಕರಿಸೋಣ.

**ಶಬ್ದಗಳ ಅರ್ಥ :**

**ದಾಸ್ಯ** - ಪಾರತಂತ್ರ್ಯ ; **ಸ್ಮೃತಿ** - ನೆನಪು ; **ಆಪತ್ಕಾಲ** - ಕಷ್ಟಕಾಲ

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.**

1) 'ರಕ್ಷಾಬಂಧನ'ವು ಯಾವ ಮಾಸದಲ್ಲಿ ಬರುವುದು ?
2) ರಕ್ಷಾಬಂಧನವು ಏನನ್ನು ಬಲಪಡಿಸುತ್ತದೆ ?
3) ಯಾರು ಯಾರಿಗೆ ಸ್ತ್ರೀಯರು ಜಗನ್ಮಾತೆಯ ರೂಪವಾಗಿದ್ದಾರೆ ?
4) ಇಂದು ಮುಸಲ್ಮಾನ ರಾಜರ ಯಾವ ಕಥೆಗಳು ಪ್ರಚಲಿತದಲ್ಲಿವೆ ?

**ಕೃತಿ 2) ಹೊಂದಿಸಿ ಬರೆಯಿರಿ.**

| 'ಅ' | | 'ಬ' |
|---|---|---|
| ರಕ್ಷಾಬಂಧನ | ☐ | (ಅ) ಆರತಿ ಬೆಳಗುವುದು |
| ದಸರೆ | ☐ | (ಬ) ಬೇವು-ಬೆಲ್ಲ ಸವಿಯುವುದು |
| ಯುಗಾದಿ | ☐ | (ಇ) ರಾಖಿ ಕಟ್ಟುವುದು |
| ದೀಪಾವಳಿ | ☐ | (ಡ) ಎಳ್ಳು ಬೆಲ್ಲ ಕೊಡುವುದು |
| ಸಂಕ್ರಮಣ | ☐ | (ಇ) ಬನ್ನಿ-ಬಂಗಾರ ಕೊಡುವುದು |

**ಕೃತಿ 3) ಕೆಳಗಿನ ವಾಕ್ಯದಲ್ಲಿ ಕರ್ತೃ ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.**

ಬಸವನು ಸುಂದರವಾದ ಚಿತ್ರವನ್ನು ಬಿಡಿಸಿದನು

**ಕೃತಿ 4) ಕೆಳಗಿನ ಶಬ್ದಗಳಲ್ಲಿ ಗೆರೆಹೊಡೆದ ಶಬ್ದದ ವಿರುದ್ಧಾರ್ಥಕ-ಶಬ್ದಗಳನ್ನು ಬಳಸಿ, ಅರ್ಥಕೆಡದಂತೆ ವಾಕ್ಯಗಳನ್ನು ಪುನಃ ಬರೆಯಿರಿ.**

1) ಹರೀಶನು <u>ತಣ್ಣೀರಿನಿಂದ</u> ಸ್ನಾನ ಮಾಡುತ್ತಾನೆ.
2) ಬೆಟ್ಟದ ಬುಡದಲ್ಲಿ <u>ಪುಟ್ಟಕೆರೆ</u> ಇದೆ.
3) ಬಾಳೆಯ ಗಿಡಗಳು ಬಹಳ <u>ಎತ್ತರವಾಗಿರುವುದಿಲ್ಲ</u>.
4) ಗಿರಿಜೆಯು <u>ಜಾಣ</u> ಬಾಲಕಿಯಾಗಿದ್ದಾಳೆ.

**ಕೃತಿ 5) ಉದಾಹರಣೆಯಲ್ಲಿ ತೋರಿಸಿದಂತೆ ಕೆಳಗಿನ ಶಬ್ದ ಸಮೂಹಕ್ಕೆ ಒಂದೇ ಶಬ್ದ ಬರೆಯಿರಿ.**

(ಉದಾ - ಮೂರು ಕಣ್ಣು ಉಳ್ಳವನು - ಮುಕ್ಕಣ್ಣ)

1) ಸಾಲತಗೆದು ಕೊಂಡವನು = -----------.

2) ದಿನಾಲು ಬರುವ ಪತ್ರಿಕೆ = ------------ .

3) ಬಳೆ ಮಾರುವವ = ----------------.

4) ಯುದ್ಧ ಮಾಡುವವ = ------------- .

**ಕೃತಿ: 6) ಕೆಳಗಿನವುಗಳಲ್ಲಿ ಉಪಸರ್ಗಯುಕ್ತ ಪದಗಳನ್ನು ಆಯ್ದು ಬರೆಯಿರಿ.**

ಸುಗಂಧ, ಬುದ್ಧಿವಂತ, ಅಪಮಾನ, ಮಾನವಂತ, ಸುವಿಚಾರ, ಸುಜನ, ಅಪಸ್ವರ, ಗುಣವಂತ, ಅವಗುಣ

**ಕೃತಿ 7) ಉದಾಹರಣೆಯಲ್ಲಿ ತೋರಿಸಿದಂತೆ ಶಬ್ದಗಳನ್ನು ಬರೆಯಿರಿ.**

ಉದಾ - ಸಿರಿ - ಸಿರಿತನ

1) --------

2) --------

3) --------

**ಕೃತಿ 8) ಧ್ವನಿ-ದನಿ ಇಂತಹ ತತ್ಸಮ-ತದ್ಭವ ಪದಗಳ ಐದು ಜೋಡಿಗಳನ್ನು ಬರೆಯಿರಿ.**

1) -------- 2) -------- 3) -------- 4) -------- 5) --------

CPD58V

# 5. ತಿಲಕಾಷ್ಠ ಮಹಿಷ ಬಂಧನ

ಒಂದು ಸಲ ವಿದ್ಯಾಸಾಗರನೆಂಬ ಮಹಾನ್ ಪಂಡಿತ ಕೃಷ್ಣದೇವರಾಯನ ಆಸ್ಥಾನಕ್ಕೆ ಬಂದ. ಅವನ ಖ್ಯಾತಿ ಎಲ್ಲಕಡೆ ವ್ಯಾಪಿಸಿತ್ತು. ಸಂಸ್ಕೃತ ಕಾವ್ಯ, ಶಾಸ್ತ್ರ ಗ್ರಂಥಗಳಲ್ಲಿ ಅವನು ಮಹಾ ಮೇಧಾವಿಯಾಗಿದ್ದ. ವಿದ್ಯಾಪಕ್ಷಪಾತಿಯಾದ ಕೃಷ್ಣದೇವರಾಯ ಅವನನ್ನು ಸ್ವಾಗತಿಸಿ ಸತ್ಕರಿಸಿದ.

''ಮಹಾಪ್ರಭು, ನಾನು ನಿಮ್ಮ ಆಸ್ಥಾನದಲ್ಲಿ ಯಾರಾದರೂ ಒಬ್ಬರು ಪಂಡಿತರೊಡನೆ ವಾದ ಮಾಡಲು ಬಂದಿದ್ದೇನೆ'' ಎಂದ ವಿದ್ಯಾಸಾಗರ.

ಕೃಷ್ಣದೇವರಾಯ ಗಂಭೀರವಾಗಿ ಮುಖ ಮಾಡಿಕೊಂಡು ಅಷ್ಟ ದಿಗ್ಗಜಗಳೆಂದು ಖ್ಯಾತರಾದ, ಅಲ್ಲಸಾನಿ ಪೆದ್ದಣ್ಣ, ತಿಮ್ಮಣ್ಣ ಮುಂತಾದ ಎಂಟು ಜನ ಕವಿಗಳ ಕಡೆ ನೋಡಿದ. ಅವರಾರೂ ಅಂಥ ಆಸಕ್ತಿ ತೋರಿಸಲಿಲ್ಲ. ವಿದ್ಯಾಸಾಗರ ಪ್ರಚಂಡ ಬುದ್ಧಿವಂತನಾಗಿರುವುದನ್ನು ಕೇಳಿದ್ದರಿಂದ, ವಾದ ವಿದ್ಯೆಯಲ್ಲಿ ಪರಿಗಣಿತರಲ್ಲದ ಅವರು, ಸೋತು ಅವಮಾನ ಪಡುವುದು ಏಕೆಂದು ಸುಮ್ಮನಾದರು.

ಕೃಷ್ಣದೇವರಾಯ ಸಪ್ಪೆ ಮುಖ ಮಾಡಿಕೊಂಡ. ಆಗ ವಿದ್ಯಾಸಾಗರ ಹೇಳಿದ, ''ಇಂಥ ದೊಡ್ಡ ರಾಜನ ಆಸ್ಥಾನದಲ್ಲಿ ನನ್ನನ್ನು ಸೋಲಿಸುವ ಒಬ್ಬ ಪಂಡಿತನೂ ಇಲ್ಲವೆನ್ನುವುದು ಬೇಸರದ ಸಂಗತಿ. ಈ ವಿಷಯ ಮೊದಲೇ ತಿಳಿದಿದ್ದರೆ ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ.''

''ಸ್ವಲ್ಪ ತಡೆಯಿರಿ'' ತೆನಾಲಿ ರಾಮಕೃಷ್ಣ ಎದ್ದು ನಿಂತ. ''ಇಷ್ಟು ಬೇಗನೆ ನೀವು ತೀರ್ಮಾನ ಮಾಡಬೇಡಿ.''

ವಿದ್ಯಾಸಾಗರ ಅವನತ್ತ ನೋಡಿ ''ತಾವು ಯಾರು?'' ಎಂದನು.

''ನಾನು ಒಂದೆರಡು ಗ್ರಂಥಗಳನ್ನು ಬರೆದಿದ್ದೇನೆ. ನನ್ನನ್ನು ತೆನಾಲಿರಾಮಕೃಷ್ಣನೆನ್ನುತ್ತಾರೆ.''

ವಿದ್ಯಾಸಾಗರನ ಮುಖ ಅರಳಿತು. ''ಹೌದೇನು? ನಾನು ನಿಮ್ಮ ಬಗ್ಗೆ ಕೇಳಿದ್ದೇನೆ. ಆದರೆ ಬುದ್ಧಿಚಾತುರ್ಯಕ್ಕಿಂತ ಮುಖ್ಯವಾಗಿ ಆಳವಾದ ಅಧ್ಯಯನ ಮಾಡಿದವರು ಮಾತ್ರ ನನ್ನೊಂದಿಗೆ ವಾದ ಮಾಡಲು ಸಾಧ್ಯ'' ಎಂದ.

''ಅದು ನನಗೂ ತಿಳಿದಿದೆ. ನೀವು ಯಾವ ಗ್ರಂಥದ ಮೇಲೆ ವಾದ ಮಾಡುತ್ತೀರಿ?''

''ನಿಮಗೆ ಇಷ್ಟವಾದ ಯಾವುದೇ ಸಂಸ್ಕೃತ ಗ್ರಂಥವಾಗಬಹುದು.''

''ಹಾಗಾದರೆ, ನಾಳೆ ಸಂಜೆ ಇದೇ ಹೊತ್ತಿಗೆ ನಿಮ್ಮೊಂದಿಗೆ ವಾದ ಮಾಡಲು ಸಿದ್ಧನಾಗಿ ಬರುತ್ತೇನೆ.''

''ಆಗಬಹುದು.''

ಇವನೆಂಥ ವಾದ ಮಾಡುತ್ತಾನೆಂದು, ಎಲ್ಲರು ಅಚ್ಚರಿಪಡುತ್ತಿದ್ದರು. ಆದರೆ ರಾಮಕೃಷ್ಣನಿಗೆ ತಾನೇನು ಮಾಡುತ್ತಿದ್ದೇನೆಂಬುದು ಖಚಿತವಾಗಿ ತಿಳಿದಿತ್ತು.

ಮಾರನೆಯ ದಿನ ವಿದ್ಯಾಸಾಗರ ಹೆಮ್ಮೆಯಿಂದ ಆಸ್ಥಾನವನ್ನು ಪ್ರವೇಶಿಸಿ ತನ್ನ ಪೀಠದಲ್ಲಿ ಕುಳಿತ. ಎಲ್ಲರು ಕುತೂಹಲದಿಂದ ಕಾದಿದ್ದರು. ರಾಮಕೃಷ್ಣ ಸ್ವಲ್ಪ ಹೊತ್ತಿನ ನಂತರ ಬಟ್ಟೆಯಲ್ಲಿ ಸುತ್ತಿದ್ದ ಕಟ್ಟನ್ನು ಹೊರಿಸಿಕೊಂಡು ಸಭೆಗೆ ಬಂದ. ಆ ಕಟ್ಟಿನಲ್ಲಿ ಏನಿದೆಯೆಂದು ಯಾರಿಗೂ ಊಹೆ ಮಾಡಲಾಗಲಿಲ್ಲ.

ರಾಮಕೃಷ್ಣ ತನ್ನ ಪೀಠದಲ್ಲಿ ಕುಳಿತು ವಿದ್ಯಾಸಾಗರನಿಗೆ ಹೇಳಿದ ''ನಾನು ಸಿದ್ಧನಾಗಿದ್ದೇನೆ ಸ್ವಾಮಿ.''

''ನಾನೂ ಸಿದ್ಧ.''

''ನಾನು ವಾದಕ್ಕೆ ಯಾವುದೇ ಸಂಸ್ಕೃತ ಗ್ರಂಥವನ್ನು ಆರಿಸಿಕೊಳ್ಳಬಹುದೆಂದು ತಾವು ಹೇಳಿದ್ದೀರಿ.''

'' ಹೌದು, ಯಾವುದನ್ನು ಬೇಕಾದರೂ ಆರಿಸಿಕೊಳ್ಳಿ.''

ರಾಮಕೃಷ್ಣ ತನ್ನ ಎದುರಿಗಿದ್ದ ಕಟ್ಟನ್ನು ತೋರಿಸಿ, '' ನಾನು ಈಗ ಈ ತಿಲಕಾಷ್ಠ ಮಹಿಷ ಬಂಧನ'ದ ಮೇಲೆ ವಾದ ಮಾಡುತ್ತೇನೆ ಆರಂಭಿಸಲೇ?'' ಎಂದ.

''ತಿಲಕಾಷ್ಠ ಮಹಿಷ ಬಂಧನ!'' ವಿದ್ಯಾಸಾಗರ ಕಣ್ಣರಳಿಸಿದ. ''ಅದು...ಅದು...'' ಎಂದು ತೊದಲಿದ.

''ಏಕೆ? ನಿಮಗೆ ತಿಲಕಾಷ್ಠ ಮಹಿಷ ಬಂಧನ ತಿಳಿದಿಲ್ಲವೇ? ಇದು ನಮ್ಮೂರಿನಲ್ಲಿ ದನಕಾಯುವ ಹುಡುಗನಿಗೂ ಗೊತ್ತು.''

ವಿದ್ಯಾಸಾಗರ ತಲೆ ಕೆರೆದುಕೊಂಡ. ಮುಖ ಮಂಕಾಯಿತು. ಎಷ್ಟು ಯೋಚಿಸಿದರೂ ತಿಲಕಾಷ್ಠ ಮಹಿಷ ಬಂಧನ ಎಂಬ ಗ್ರಂಥ ಅವನ ನೆನಪಿಗೆ ಬರಲಿಲ್ಲ. ''ಇದೊಂದು ಹೇಗೆ ನನ್ನ ಕಣ್ಣು ತಪ್ಪಿಸಿಕೊಂಡಿತು?'' ಎಂದು ಅವನು ಪೇಚಾಡಿದ.

''ಮಹಾಪ್ರಭು, ಏಕೋ ನನ್ನ ದೇಹಾರೋಗ್ಯ ಸರಿಯಿಲ್ಲ, ವಾದವನ್ನು ನಾಳೆ ಆರಂಭಿಸಲು ಅಪ್ಪಣೆ ಕೊಡಿ'' ಎಂದು ವಿದ್ಯಾಸಾಗರ ಬೇಡಿದ.

''ಆಗಬಹುದು'' ರಾಜ ಅಪ್ಪಣೆ ಕೊಟ್ಟ, ರಾಮಕೃಷ್ಣ ಯಾರೊಂದಿಗೂ ಏನೂ ಮಾತಾಡದೆ ಮನೆಗೆ ಹೋಗಿಬಿಟ್ಟ.

ಮರುದಿನ ಅದೇ ಸಮಯಕ್ಕೆ, ಅದೇ ಕಟ್ಟನ್ನು ಹೊರಿಸಿಕೊಂಡು ರಾಮಕೃಷ್ಣ ಗಂಭೀರವಾಗಿ ಸಭೆಗೆ ಬಂದ. ಆದರೆ ಬಹಳ ಹೊತ್ತಾದರೂ ವಿದ್ಯಾಸಾಗರ ಬರಲಿಲ್ಲ. ಅವನನ್ನು ಕರೆತರಲು ಆಳುಗಳು ಹೋದರು. ಆದರೆ ವಿದ್ಯಾಸಾಗರ ರಾತ್ರೋರಾತ್ರಿ ಪಲಾಯನ ಮಾಡಿರುವ ವಿಷಯ ತಿಳಿಯಿತು.

ಇಡೀ ಸಭೆ ರಾಮಕೃಷ್ಣನಿಗೆ ಜಯಕಾರ ಮಾಡಿತು. ''ನಿನ್ನಿಂದ ನನ್ನ ಆಸ್ಥಾನದ ಮರ್ಯಾದೆ ಉಳಿಯಿತು'' ಎಂದು ಕೃಷ್ಣದೇವರಾಯ ಮೆಚ್ಚಿಕೆಯಿಂದ ನುಡಿದ. ''ಅಲ್ಲ, ನಾನೂ 'ತಿಲಕಾಷ್ಠ ಮಹಿಷ ಬಂಧನ' ಎಂಬ ಗ್ರಂಥವನ್ನು ಕೇಳಿಯೇ ಇಲ್ಲ. ಎಲ್ಲಿ ಅದನ್ನು ಕೊಡು ನೋಡೋಣ'' ಎಂದ.

ರಾಮಕೃಷ್ಣ ಕಟ್ಟನ್ನು ಬಿಚ್ಚಿದ. ಅದರಲ್ಲಿ ಒಂದಷ್ಟು ಕಟ್ಟಿಗೆಗಳನ್ನು ಒಂದು ಹಗ್ಗದಿಂದ ಕಟ್ಟಲಾಗಿತ್ತು. ರಾಜ ಆಶ್ಚರ್ಯದಿಂದ ''ಇದೇನಿದು?'' ಎಂದ.

ರಾಮಕೃಷ್ಣ ಹೇಳಿದ, ''ಇದು ಎಳ್ಳಿನ ಕಡ್ಡಿಗಳು, ಅಂದರೆ ತಿಲಕಾಷ್ಠ. ಇದು ಎಮ್ಮೆ ಕಟ್ಟುವ ಹಗ್ಗ, ಅಂದರೆ ಮಹಿಷ ಬಂಧನ. ಅದೇ ತಿಲಕಾಷ್ಠ ಮಹಿಷ ಬಂಧನ. ಇದಾವುದೋ ಮಹಾಗ್ರಂಥವಿರಬೇಕೆಂದು ಹೆದರಿ ಪಾಪ, ವಿದ್ಯಾಸಾಗರ ಓಡಿಹೋದ.''

ಎಲ್ಲರ ನಗು ಬಹಳ ಹೊತ್ತು ಸಭಾಸ್ಥಾನವನ್ನು ತುಂಬಿತ್ತು.

## ಶಬ್ದಗಳ ಅರ್ಥ

**ಖ್ಯಾತಿ** - ಪ್ರಸಿದ್ಧಿ; **ವ್ಯಾಪಿಸು** - ಹರಡು; **ಮೇಧಾವಿ** - ಪಂಡಿತ; **ಸತ್ಕರಿಸು** - ಗೌರವಿಸು; **ಪೀಠ** - ಆಸನ; **ಪಲಾಯನ** - ಓಡಿಹೋಗು; **ತಿಲ** - ಎಳ್ಳು; **ಕಾಷ್ಠ** - ಕಟ್ಟಿಗೆ; **ಮಹಿಷ** - ಎಮ್ಮೆ

**ಕೃತಿ: 1) ಪರ್ಯಾಯಗಳಿಂದ ಯೋಗ್ಯ ಉತ್ತರವನ್ನು ಆಯ್ದು ಕೆಳಗಿನ ವಾಕ್ಯಗಳನ್ನು ಪೂರ್ಣ ಮಾಡಿರಿ.**

**1) ಕೃಷ್ಣದೇವರಾಯನ ಆಸ್ಥಾನಕ್ಕೆ ಬಂದ ಮಹಾನ್ ಪಂಡಿತ -------------**

ಅ) ಮಹಾಕವಿ ಕಾಳಿದಾ

ಬ) ವಿದ್ಯಾಸಾಗರ

ಕ) ಬೀರಬಲ್ಲ

**2) ವಿದ್ಯಾಸಾಗರನು------------- ಗಳಲ್ಲಿ ಮಹಾಮೇಧಾವಿಯಾಗಿದ್ದ.**

ಅ) ಸಂಸ್ಕೃತ, ಕಾವ್ಯ ಶಾಸ್ತ್ರ ಗ್ರಂಥಗಳಲಿ

ಬ) ಹಿಂದಿ, ಇಂಗ್ಲಿಷ, ಗಣಿತ

ಕ) ಜ್ಯೋತಿಷ್ಯ, ಹಸ್ತ ಸಾಮುದ್ರಿಕ

**ಕೃತಿ: 2) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.**

1) ಕೃಷ್ಣದೇವರಾಯನು ಏಕೆ ಮುಖ ಸಪ್ಪೆ ಮಾಡಿಕೊಂಡನು?

2) ತೆನಾಲಿ ರಾಮಕೃಷ್ಣ ಯಾರು?

3) ತಿಲಕಾಷ್ಠ ಮಹಿಷ ಬಂಧನ ಎಂದರೇನು?

**ಕೃತಿ: 3) ಕೆಳಗಿನ ವಾಕ್ಯಗಳಲ್ಲಿಯ ನಾಮಪದಗಳನ್ನು ಗುರುತಿಸಿ ಬರೆಯಿರಿ.**

1) ಗಾಯತ್ರಿಯು ಕವನವನ್ನು ಬರೆಯುತ್ತಾಳೆ.

2) ಬೆಂಗಳೂರು ಸುಂದರವಾದ ನಗರವಾಗಿದೆ.

3) ರೈತರು ಹೊಲದಲ್ಲಿ ದುಡಿಯುತ್ತಾರೆ.

4) ಹಸು ಹಾಲು ಕೊಡುತ್ತದೆ.

**ಕೃತಿ: 4) ಕೆಳಗಿನ ವಾಕ್ಯದಲ್ಲಿಯ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.**

‘‘ರಾಜು ತನ್ನ ಗೆಳೆಯರೊಂದಿಗೆ ಕ್ರಿಕೆಟನ್ನು ಆಡಿದನು.’’

**ಕೃತಿ: 5) ಕೆಳಗಿನ ವಾಕ್ಯದಲ್ಲಿ ಸರ್ವನಾಮಗಳನ್ನು ಗುರುತಿಸಿ ಬರೆಯಿರಿ.**

ನಾನು ಒಂದೆರಡು ಗ್ರಂಥಗಳನ್ನು ಬರೆದಿದ್ದೇನೆ. ನನ್ನ ಹೆಸರು ತೆನ್ನಾಲಿ ರಾಮಕೃಷ್ಣ ಇದೆ. ಅವು ಬಹಳ ಪ್ರಸಿದ್ಧವಾಗಿವೆ.

**ಉಪಕ್ರಮ:-** ತೆನಾಲಿರಾಮಕೃಷ್ಣ ಹಾಗೂ ಅಕ್ಬರ ಬೀರಬಲ್ಲರ ಹಾಸ್ಯ ಕತೆಗಳನ್ನು ಓದಿ ತಿಳಿಯಿರಿ.

CPH1DI

# 6. ಬಾಷ್ಪೀಭವನ

ಗಾಯತ್ರಿ ಮೂರ್ತಿ

ಅಂದು ಭಾನುವಾರ ಬೆಳಿಗ್ಗೆ ತಿಂಡಿ ತಿಂದ ನಂತರ ವಿಕ್ಕಿ, ''ಅಮ್ಮ ನಾನು ಎಕ್ಸ್‌ಪೆರಿಮೆಂಟ್ ಮಾಡ್ತೀನಿ.'' ಎಂದು ಹೇಳಿದ.

''ಏನು ಮಾಡ್ತೀಯಾ?'' ಅಮ್ಮ ಕೇಳಿದಳು.

''ನೀನು ನಿನ್ನೆ ನನಗೊಂದು 'ಮಕ್ಕಳಿಗೆ ವಿಜ್ಞಾನ', ಅಂತ ಪುಸ್ತಕ ತಂದು ಕೊಟ್ಟೆಯಲ್ಲಾ, ಅದರಲ್ಲಿರೋ ಒಂದು ಎಕ್ಸ್‌ಪೆರಿಮೆಂಟ್ ಮಾಡ್ತೀನಿ.'' ಎಂದು ಹೇಳಿದ.

''ಸರಿ, ಅದೇನು ಮಾಡ್ತೀಯೋ ಮಾಡು ನಾನು ನೋಡ್ತೀನಿ.'' ಎಂದಳು ಅಮ್ಮ.

ವಿಕ್ಕಿ ಒಂದು ತಟ್ಟೆ, ಒಂದು ಪಾತ್ರೆ ಮತ್ತು ಒಂದು ಚಿಕ್ಕ ಲೋಟ ತೆಗೆದುಕೊಂಡ. ಮೂರರಲ್ಲಿ ಎರಡೆರಡು ಚಮಚ ನೀರು ಹಾಕಿ ಒಂದೆಡೆ ಇಟ್ಟ.

''ನೀನು ಏನು ಮಾಡ್ತಿದೀಯಾಂತ ನನಗೆ ಗೊತ್ತಾಯ್ತು.'' ಅಮ್ಮ ಹೇಳಿದಳು.

''ನೀರು ತಂತಾನೇ ನಿಧಾನವಾಗಿ ಆವಿ ಆಗತ್ತೇಂತ ತೋರಿಸಕ್ಕೆ ಈ ಎಕ್ಸ್‌ಪೆರಿಮೆಂಟ್ ಮಾಡಿ ಅಂತ ಬರೆದಿತ್ತು. ಅದಕ್ಕೇ ಮಾಡ್ತೀದೀನಿ.'' ಎಂದ ವಿಕ್ಕಿ.

''ನೀರು ತಂತಾನೇ ವಾತಾವರಣದ ಉಷ್ಣತೆಯಲ್ಲಿ ಆವಿಯಾಗೋದಕ್ಕೆ ಬಾಷ್ಪೀಭವನ ಅಥವಾ ಆವೀಕರಣ ಅಂತಾರೆ. ನೀರು ಒಂದೇ ಅಲ್ಲ. ಯಾವುದೇ ದ್ರವ ವಾತಾವರಣಕ್ಕೆ ತೆರೆದುಕೊಂಡಿದ್ದರೆ ತಾನಾಗೇ ನಿಧಾನವಾಗಿ ಆವಿ ಆಗುತ್ತೆ.'' ಎಂದು ಹೇಳಿದಳು ಅಮ್ಮ.

''ಅದೆಲ್ಲಾ ಗೊತ್ತಮ್ಮ. ಓದಿದೀನಿ, ಅದಕ್ಕೇ ಎಕ್ಸ್‌ಪೆರಿಮೆಂಟ್ ಮಾಡ್ತೀದೀನಿ.'' ಎಂದು ಹೇಳಿದ.

ಹತ್ತು ನಿಮಿಷಕ್ಕೆಲ್ಲಾ ಬಂದು ನೋಡಿ, ''ಅಯ್ಯೋ ಇನ್ನೂ ನೀರು ಹಾಗೇ ಇದೆ. ಆವಿಯಾಗಿ ಹೋಗೇ ಇಲ್ಲ.'' ಎಂದ ವಿಕ್ಕಿ.

''ಅಯ್ಯೋ ಹುಚ್ಚ. ನಿನ್ನ ಆತುರಕ್ಕೆ ಅದು ಇಷ್ಟು ಬೇಗ ಆವಿ ಆಗಿ ಹೋಗುತ್ತಾ ವಿಕ್ಕಿ ? ಹೋಗ್ಲಿ, ಬಿಸಿಲಲ್ಲಿಡು, ಬೇಗ ಆವಿ ಆಗತ್ತೆ'' ಎಂದಳು ಅಮ್ಮ.

''ಓ ಹೌದು! ಸೂರ್ಯನ ಶಾಖಕ್ಕೆ ಬೇಗ ಆವಿ ಆಗತ್ತೆ. ಮೊದಲು ನನಗೆ ಹೊಳೀಲೇ ಇಲ್ಲ.''

''ಸೂರ್ಯನ ಶಾಖದ ಜೊತೆಗೆ ಗಾಳಿ ಬೀಸೋ ಕಡೆ ಬಾಷ್ಪೀಕರಣ ಹೆಚ್ಚು ವೇಗವಾಗಿ ಆಗತ್ತೇ.''

''ಅದ್ಹೇಗಮ್ಮ?''

''ನೀರು ಆವಿ ಆಗಿ ಹೋದ ಹಾಗೆಲ್ಲಾ ಗಾಳಿ ಅದನ್ನು ಬೇರೆ ಕಡೆ ಒಯ್ಯುತ್ತೆ. ಅದಕ್ಕೆ ಬಾಷ್ಪೀಕರಣ ಬೇಗ ಆಗುತ್ತೆ.''

''ತಡಿ, ನೀನು ಹೇಳಿದ ಹಾಗೇ ಮಾಡ್ತೀನಿ.'' ಎಂದು ವಿಕ್ಕಿ ತಟ್ಟೆ, ಪಾತ್ರೆ, ಲೋಟ ಈ ಮೂರನ್ನು ಬಿಸಿಲಲ್ಲಿಟ್ಟ.

''ಈಗ ಸ್ವಲ್ಪ ಹೊತ್ತು ಹೊರಗೆ ಹೋಗಿ ಆಡ್ಕೊಂಡು ಬಾ. ಅಷ್ಟರಲ್ಲಿ ನೀರು ಆವಿ ಆಗಿರುತ್ತೆ.'' ಅಮ್ಮ ಹೇಳಿದಳು.

ಗೆಳೆಯರೊಂದಿಗೆ ಆಟದ ಗಮನದಲ್ಲಿ ವಿಕ್ಕಿಗೆ ಪ್ರಯೋಗದ ಬಗ್ಗೆ ಮರೆತು ಹೋಗಿತ್ತು. ಮನೆಗೆ ಬಂದ ಕೂಡಲೇ ನೆನಪಾಗಿ ಈಗ ಏನಾಗಿದೆ ಎಂದು ನೋಡಿದ.

ತಟ್ಟೆಯಲ್ಲಿದ್ದ ನೀರು ಪೂರ್ತಿ ಆವಿಯಾಗಿ ತಟ್ಟೆ ಒಣಗಿದಂತಿತ್ತು! ಪಾತ್ರೆಯಲ್ಲಿ ಸ್ವಲ್ಪ ನೀರು ಉಳಿದಿತ್ತು. ಲೋಟದಲ್ಲಿ ಇಟ್ಟಿದ್ದ ನೀರು ಪಾತ್ರೆಯಲ್ಲಿ ಇದ್ದುದಕ್ಕಿಂತ ಹೆಚ್ಚಾಗಿತ್ತು.

''ಪುಸ್ತಕದಲ್ಲಿ ಹೇಳಿದ ಹಾಗೆ ಆಗಿದೇಮ್ಮ.'' ವಿಕ್ಕಿ ಅಚ್ಚರಿಯಿಂದ ನುಡಿದ.

''ಅಲ್ಲಿ ಬರೆದಿರೋ ಹಾಗೆ ಆಗದಿದ್ರೆ ಅದು ವಿಜ್ಞಾನ ಅಂತ ಅನ್ನಿಸಿಕೊಳ್ಳೋದೇ ಇಲ್ಲ ಅಷ್ಟೇ.'' ಎಂದಳು ಅಮ್ಮ.

''ಹೌದಲ್ವಾ?'' ಎಂದ ವಿಕ್ಕಿ.

''ನೀನು ಮೊದಲು ಇಟ್ಟಿದ್ದ ಹಾಗೇ ನೆರಳಲ್ಲಿ ನೀರನ್ನು ಇಟ್ಟಿದ್ರೂ ಅದು ಆವಿ ಆಗಿ ಹೋಗ್ತಿತ್ತು. ಆದರೆ ನಿಧಾನ ಆಗ್ತಿತ್ತು ಅಷ್ಟೆ. ನಾನು ಇದೇ ತರಹದ ಇನ್ನೂ ಎರಡು ಪ್ರಯೋಗ ಹೇಳಿಕೊಡ್ತೀನಿ.''

ಅಮ್ಮ ಹೇಳಿದ ಹಾಗೆ ವಿಕ್ಕಿ ಒಂದು ಬಟ್ಟಲಿನಲ್ಲಿ ಸ್ವಲ್ಪ ನೀರು ತೆಗೆದುಕೊಂಡ. ನೀರಿಗೆ ಸ್ವಲ್ಪ ಅಡುಗೆ ಉಪ್ಪನ್ನು ಬೆರೆಸಿ ಕರಗಿಸಿದ. ಒಂದು ಚಮಚ ನೀರನ್ನು ಪಿಂಗಾಣಿ ತಟ್ಟೆಗೆ ಹಾಕಿ ಅದನ್ನು ಬಿಸಿಲು ಬರುವ ಜಾಗದಲ್ಲಿಟ್ಟ. ನಂತರ ಒಂದೇ ಅಳತೆಯ ಎರಡು ಟವೆಲ್‌ಗಳನ್ನು ಅಮ್ಮ ನೀರಿನಲ್ಲಿ ನೆನೆಸಿ ಒಂದೇ ಸಮ ಹಿಂಡಿ ವಿಕ್ಕಿಗೆ ಕೊಟ್ಟಳು. ಅಮ್ಮ ಹೇಳಿದಂತೆ ವಿಕ್ಕಿ ಒಂದು ಟವೆಲ್‌ನ್ನು ನೆರಳಿನಲ್ಲಿ, ಮತ್ತೊಂದನ್ನು ಬಿಸಿಲು ಬೀಳುವ ಜಾಗದಲ್ಲಿ ಒಣಗಿ ಹಾಕಿದ.

''ಸ್ವಲ್ಪ ಹೊತ್ತು ಆಟಕ್ಕೆ ಹೋಗಿ ಇದರ ಬಗ್ಗೆ ಮರೆತುಬಿಡು. ಆಮೇಲೆ ಬಂದು ನೋಡು.'' ಅಮ್ಮ ಹೇಳಿದಳು.

''ಹಾಗಾದ್ರೆ ನಾನು ಆನಂದನ ಮನೆಗೆ ಹೋಗಿ ಬರ್ತೀನಿ.'' ವಿಕ್ಕಿ ಹೇಳಿ ಗೆಳೆಯನನ್ನು ಹುಡುಕಿಕೊಂಡು ಹೊರಟ.

ಮತ್ತೆ ಬಂದು ನೋಡಿದಾಗ ಬಿಸಿಲಲ್ಲಿದ್ದ ಟವೆಲ್ಲು ಮುಕ್ಕಾಲು ಭಾಗ ಒಣಗಿತ್ತು. ನೆರಳಿನಲ್ಲಿ ಒಣಗಿಹಾಕ್ಕಿದ್ದ ಟವೆಲ್ಲು ಒದ್ದೆಯಾಗೇ ಇತ್ತು! ಪಿಂಗಾಣಿ ತಟ್ಟೆಯಲ್ಲಿದ್ದ ನೀರು ಸಹ ಬಿಸಿಲಿನ ಶಾಖಕ್ಕೆ ಆವಿಯಾಗಿ ಹೋಗಿತ್ತು. ಆದರೆ ಉಪ್ಪು ಮಾತ್ರ ತೆಳ್ಳನೆಯ ಬಿಳಿಯ ಪದರದಂತೆ ತಟ್ಟೆಗೆ ಅಂಟಿಕೊಂಡಿತ್ತು. ವಿಕ್ಕಿ ಅದನ್ನು ಕೈಯಲ್ಲಿ ಮುಟ್ಟಿದ. ಕೈಗೆ ಉಪ್ಪಿನ ಪುಡಿ ಅಂಟಿಕೊಂಡಿತು. ಉಪ್ಪೇ ಇರ್ಬೇಕು ಎಂದುಕೊಂಡು ವಿಕ್ಕಿ ಬೆರಳನ್ನು ನೆಕ್ಕಿದ. ''ಓ, ಉಪ್ಪು!'' ಎಂದು ಅಮ್ಮನ ಬಳಿಗೋಡಿ ಪಿಂಗಾಣಿ ತಟ್ಟೆಯನ್ನು ತೋರಿಸಿದ.

''ಹೌದು, ಉಪ್ಪು ತಯಾರಿಸೋದೇ ಹೀಗೆ. ಅದು ಗೊತ್ತಾಗಲಿ ಅಂತಾನೇ ನಾನು ಈ ಪ್ರಯೋಗ ಮಾಡು ಅಂತ ಹೇಳಿದ್ದು. ಸಮುದ್ರದ ನೀರಿನಲ್ಲಿ ಉಪ್ಪು ಜಾಸ್ತಿ ಇರತ್ತೆ. ಸಮುದ್ರ ತೀರದಲ್ಲಿ ದೊಡ್ಡದೊಡ್ಡ ಮಡಿಗಳಲ್ಲಿ ನೀರನ್ನು ಇಡ್ತಾರೆ. ಸೂರ್ಯನ ಶಾಖಕ್ಕೆ ನೀರು ಆವಿಯಾಗಿ ಹೋಗುತ್ತೆ. ಉಪ್ಪು ಉಳಿಯತ್ತೆ.''

''ಹಾಗಾದ್ರೆ ಬಾಷ್ಪೀಭವನ ಎಷ್ಟು ಉಪಯೋಗ ಆಗತ್ತೆ ಅಲ್ವಾ?'' ವಿಕ್ಕಿ ಕೇಳಿದ.

''ಹೌದು. ಎಂದಳು ಅಮ್ಮ.

**ಶಬ್ದಗಳ ಅರ್ಥ**

**ಎಕ್ಸಪೀರಿಮೆಂಟ** – ಪ್ರಾತ್ಯಕ್ಷಿಕೆ; **ಶಾಖ** – ಉಷ್ಣತೆ; **ನಿಧಾನ** – ಸಾವಕಾಶ; **ಪಿಂಗಾಣಿ** – ಬಿಳಿಯ ಜೇಡಿ ಮಣ್ಣು

**ಕೃತಿ: 1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ತಿಂಡಿ ತಿಂದ ನಂತರ ವಿಕ್ಕಿ ಅಮ್ಮನಿಗೆ ಏನು ಹೇಳಿದನು?

2) ಬಾಷ್ಪೀಭವನ ಎಂದರೇನು?

3) ಉಪ್ಪನ್ನು ಹೇಗೆ ತಯಾರಿಸುತ್ತಾರೆ?

4) ಯಾವ ಟವೆಲ್ಲು ಬೇಗನೆ ಒಣಗಿತು?

**ಕೃತಿ: 2) ಕೆಳಗಿನ ಜಾಲಾಕೃತಿಯನ್ನು ಬಿಡಿಸಿರಿ.**

ಕೆಳಗಿನ ಪ್ರಸಂಗದಲ್ಲಿ ಏನಾಗುತ್ತದೆ ?

ಮಂಜುಗಡ್ಡೆಯನ್ನು ಬಿಸಿ ಮಾಡಿದಾಗ
---------------

ನೀರನ್ನು ಕುದಿಸಿದಾಗ
---------------

ಉಗಿಯನ್ನು ಸ್ವಲ್ಪ ತಂಪು ಮಾಡಿದಾಗ
---------------

ನೀರನ್ನು ಹೆಚ್ಚು ತಂಪುಗೊಳಿಸಿದಾಗ
---------------

**ಕೃತಿ: 3) ಕೆಳಗಿನ ಸಂದರ್ಭಕ್ಕನುಗುಣವಾಗಿ ನಿಮ್ಮ ಸ್ವ ಅಭಿಪ್ರಾಯ ಬರೆಯಿರಿ.**

''ಚಹ ಕುಡಿಯಲು ಬಸಿ ಉಪಯೋಗಿಸುವುದು ಸೂಕ್ತ''

**ಕೃತಿ: 4) ಕೆಲ ಸಮಯದ ನಂತರ ಏನಾಗುತ್ತದೆ ?**

(1) ತೊಳೆದ, ಹಸಿಯಾದ ಬಟ್ಟೆ ಬಿಸಿಲಿಗೆ ಹಾಕಿದ ---------------

(2) ತಟ್ಟೆಯಲ್ಲಿ ಪೆಟ್ರೋಲ ಹಾಕಿ ಗಾಳಿಗಿಟಾ ---------------

(3) ನೆಲಗಡಲೆಯನ್ನು ಬಿಸಿಲಿಗೆ ಹಾಕಿದ ------------

(4) ನೀರನ್ನು ಬಾಟಲಿಯಲ್ಲಿ ತುಂಬಿ ಫ್ರಿಜ್‌ನಲ್ಲಿ ಇಟಾ -------------

**ಕೃತಿ: 5) ಕೆಳಗಿನ ಘಟನೆಯನ್ನು ಅರ್ಥ ಮಾಡಿಕೊಂಡು ನಾಲ್ಕು ಸಾಲು ಬರೆಯಿರಿ.**

ಪುಟ್ಟಿ ಅಂಗಳದಲ್ಲಿ ಆಟವಾಡುತ್ತಿದ್ದಳು. ಅಮ್ಮ ಒಂದು ಆಯಸ್ಕ್ರೀಮ್ ಕೊಟ್ಟಳು. ತನಗೆ ಇನ್ನೊಂದು ಬೇಕೆಂದು ಪುಟ್ಟಿ ಹಟ ಮಾಡಿದಳು. ಕೈಯಲ್ಲಿದ್ದ ಆಯಸ್ಕ್ರೀಮನ್ನು ಅಲ್ಲಿಯೇ ಇಟ್ಟು ಒಳಗೆ ಹೋದಳು. ಸ್ವಲ್ಪ ಸಮಯದ ನಂತರ ಪುಟ್ಟಿ ಅಲ್ಲಿಗೆ ಬಂದು ನೋಡಿದಳು. ಆಗ ಅಲ್ಲಿ ಆಯಸ್ಕ್ರೀಮ ಇರಲಿಲ್ಲ. ಬರಿ ಕಡ್ಡಿ ಮಾತ್ರ ಇತ್ತು.

- ಆಯಸ್ಕ್ರೀಮ ಎಲ್ಲಿ ಹೋಯಿತು ಎಂಬುದನ್ನು ನೀವು ಬರೆಯಿರಿ.

**ಉಪಕ್ರಮ :** ಅಳತೆ ಪಾತ್ರೆಯಲ್ಲಿ ನೀರನ್ನು ತುಂಬಿ ಬಿಸಿಲಿನಲ್ಲಿ ಇಡಿರಿ. ಎಂಟು ದಿನಗಳವರೆಗೆ ಪ್ರತಿದಿನ ನೀರು ಸಂಗ್ರಹಣೆಯಲ್ಲಿಯ ಸ್ಥಿತಿಗತಿ ಕುರಿತು ನಿರೀಕ್ಷಣೆ ಮಾಡುತ್ತ ಅಳತೆಗಳನ್ನು ಬರೆಯಿರಿ. ನೀರಿನ ಪ್ರಮಾಣದಲ್ಲಿ ಆಗುವ ವ್ಯತ್ಯಾಸ ಮತ್ತು ಕಾರಣಗಳನ್ನು ಬರೆಯಿರಿ.

# 7. ಹೂಮಾಲೆ

**ಜೆ. ಮಲ್ಲಾರಿ ಭಟ್ಟ**

''ನಮ್ಮ ಜೊತೆಗೆ ಈ ದಾರ ಏಕೆ ದೇವರ ಕೊರಳಲ್ಲಿ ಅಲಂಕಾರವಾಗಬೇಕು. ಇದರ ಉಪಕಾರವೇಕೆ ನಮಗೆ? ನಮ್ಮ ಚೆಂದ, ಬಣ್ಣ, ವಾಸನೆಗಾಗಿ ನನ್ನನ್ನು ಮುಡಿಯುವವರಲ್ಲದೆ ಮತ್ತೆ ಏಕೆ ಮುಡಿಯುತ್ತಾರೆ? ಈ ದಾರದಿಂದಾಗಿ ನಮಗೆ ತೊಂದರೆ. ನನ್ನ ಯೋಗ್ಯತೆಯೇನು? ಅದರ ಯೋಗ್ಯತೆಯೇನು? ಚಿನ್ನದೊಂದಿಗೆ ಹಿತ್ತಾಳೆ ಕರಗಿಸಿ ಬೆರಸಿದಂತೆ'' ಮಲ್ಲಿಗೆ ಹೂಗಳು ತಮ್ಮೊಳಗೇ ಯೋಚಿಸಿದವು.

ಮಾರನೆಯ ದಿನ ಪೂಜಾರಿಯ ಹೆಂಡತಿಯು ಮಲ್ಲಿಗೆ ಹೂಗಳನ್ನು ಒಟ್ಟಾಗಿ ಜೋಡಿಸಿ ದಾರದಿಂದ ಕಟ್ಟಿ ದೇವರಿಗೆ ಮಾಲೆಯಾಗಿ ಹಾಕಿದಳು. ಐದು ನಿಮಿಷದ ನಂತರ ಹೂಗಳು ಒಟ್ಟಾಗಿ ದಾರಕ್ಕೆ ಹೇಳಿದವು.

''ಏಯ್, ದಾರ, ನಿನ್ನ ಸಂಘ ನಮಗೆ ಬೇಡ ನಮ್ಮ ಯೋಗ್ಯತೆಯೇನು? ನಿನ್ನ ಯೋಗ್ಯತೆಯೇನು ? ನಮ್ಮ ಯೋಗ್ಯತೆಯಿಂದಲೇ ದೇವರಾಗಲೀ, ಮನುಷ್ಯರಾಗಲೀ ನಮಗೆ ಗೌರವವನ್ನು ಕೊಡುತ್ತಾರೆ. ನಿನ್ನಂಥ ಮೂಢನಿರ್ಗಂಧ, ನಿರ್ವಿಕಾರ, ನಿರ್ಗುಣನಿಗೆ ಯಾರು ಬೆಲೆ ಕೊಡುತ್ತಾರೆ ? ಯಾರು ತಲೆಯಮೇಲೆ ಕುಳ್ಳಿರಿಸಿಕೊಳ್ಳುತ್ತಾರೆ ?''

ದಾರ ಮೌನವಾಗಿ ತಲೆ ಬಗ್ಗಿಸಿತು. ಸಮಾಧಾನದಿಂದ 'ಹೂ'ಗಳಿಗೆ ಹೇಳಿತು. ''ನನ್ನ ಸಂಗ ಬೇಡವೆಂದು ನಿರಾಕರಿಸುತ್ತಿರುವಿರಿ. ಆದರೆ ಪರಸ್ಪರ ಜೊತೆಯಾಗಿದ್ದರೆ ನನಗೂ ಬೆಲೆ, ನಿಮಗೂ ಬೆಲೆ. ಆಗ 'ಹೂ'ಗಳೆಲ್ಲಾ ಅದೆಲ್ಲಾ ಸಾಧ್ಯವಿಲ್ಲ ನೀನು ನಮ್ಮಿಂದ ತೊಲಗಿದರೆ ಸಾಕು ಎಂದವು. ಆಗ ದಾರವು ಹೇಳಿತು, ನಾನು ಒಂದು ವಿಚಾರ ಹೇಳುತ್ತೇನೆ ಕೇಳಿರಿ. ನಾನಿಲ್ಲದೆ ನೀವು ಜಯಿಸುವಿರೆಂದು ಹೇಳುವಿರಿ, ಅದು ಪರೀಕ್ಷೆ ಆಗಿಯೇ ಬಿಡಲಿ ಎಂದು ದಾರವು ಮನೆಯ ಒಂದು ಮೂಲೆ ಸೇರಿಕೊಂಡಿತು.

ಯಥಾ ರೀತಿ ಸೂರ್ಯೋದಯವಾಯಿತು. ಬೆಳಗಿನ ಪೂಜೆಯ ಸಿದ್ಧತೆಗಳು ನಡೆದವು. ಪೂಜಾರಿಯ ಹೆಂಡತಿಯು ಹೂಮಾಲೆ ಮಾಡಲು ದಾರ ಹುಡುಕಲಾರಂಭಿಸಿದಳು. ಅದು ಸಿಗದೇ ಹೋಯಿತು. ನಿರಾಶೆಯಿಂದ ಪೂಜಾರಿಗೆ 'ಹೂ'ಗಳನ್ನೇ ನೀಡಿದಳು. ಆಗ ಪೂಜಾರಿಯು ಕೋಪದಿಂದ ಪೂಜೆಗೆ 'ಹೂ' ಮಾಲೆ ಸಿದ್ಧವಾಗಲಿಲ್ಲವೇ ಎಂದು ಕೇಳಿದನು. ಆಗ ಹೆಂಡತಿ ಇಲ್ಲ. ನಾನು ಬೆಳಿಗ್ಗೆಯಿಂದ ಅದನ್ನು ತಯಾರಿಸಲು ದಾರವನ್ನು ಹುಡುಕುತ್ತಿದ್ದೇನೆ, ಅದು ಸಿಗುತ್ತಾ ಇಲ್ಲ. ಇಂದು ಬಿಡಿ 'ಹೂ'ಗಳನ್ನೇ ಏರಿಸಿರಿ. ಆಗ ಪೂಜಾರಿಯು ದೇವನ ಮೂರ್ತಿಯು ಇಂದು ಶೋಭಿಸುವುದಿಲ್ಲ. ಕೊರಳಲ್ಲಿ ಮಾಲೆಯಿದ್ದರೆ ಶೋಭೆ ಎಂದು ಪದೇ ಪದೇ ಹೇಳುವಾಗ ದಾರ ಮೂಲೆಯಲ್ಲಿ ಕುಳಿತುಕೊಂಡು ಮುಸಿಮುಸಿ ನಗುತ್ತಿತ್ತು. ಹೂವುಗಳಿಗೆ ಅದರಿಂದ ಅಪಮಾನವೆನಿಸಿತು. ಅಷ್ಟರಲ್ಲಿ ಗುಡಿಗೆ ಬಂದ ಭಕ್ತರು ಪೂಜಾರಿಗಳೇ ಇಂದು ದೇವರಿಗೆ 'ಹೂ' ಮಾಲೆ ಹಾಕಲಿಲ್ಲವೇ? ಇಂದು ಪೂಜೆ ಸಮರ್ಪಕವಾದಂತೆ ಅನ್ನಿಸುತ್ತಿಲ್ಲ ಎಂದು ಹೇಳತೊಡಗಿದರು. ಬಿಡಿ 'ಹೂ'ಗಳೆಲ್ಲಾ ಈ ಮಾತನ್ನು ಕೇಳುತ್ತಿದ್ದವು. ಅಷ್ಟೊತ್ತಿಗೆ ಪೂಜಾರಿಯ ಮಗಳು ಅಮ್ಮಾ ತಲೆಯಲ್ಲಿ ಮುಡಿಯಲು ಮಾಲೆ ಮಾಡುತ್ತೇನೆ ದಾರ ಕಾಣಿಸುತ್ತಿಲ್ಲ, ನೀನೇನಾದರೂ ಹಾರ ತಯಾರಿಸಲು ತೆಗೆದುಕೊಂಡಿರುವೆಯಾ ಎಂದು ಕೇಳಿದಳು. ಅಯ್ಯೋ ಮಗಳೆ ಅದನ್ನೇ ನಾನು ಹುಡುಕುತ್ತಿರುವೆ. ಅದು ಸಿಗುತ್ತಿಲ್ಲ. ಈ ಬಿಡಿ 'ಹೂ'ಗಳಲ್ಲೇ ಒಂದೆರಡನ್ನು ಧರಿಸಿಕೊಂಡು ಹೋಗು ಎಂದಳು. ಆಗ ಮಗಳು, ಆ ಬರಿ 'ಹೂ'ಗಳನ್ನು ತೆಗೆದುಕೊಂಡು ನಾನೇನು ಮಾಡಲಿ. ತಲೆಯಲ್ಲಿ ಮುಡಿಯಲು ಮಾಲೆ ಇದ್ದರೆ ಚೆನ್ನ ಎಂದು, 'ಹೂ'ಗಳನ್ನೂ ಎಸೆದು ಶಾಲೆಗೆ ಹೋದಳು. 'ಹೂ'ಗಳು ಚೆಲ್ಲಾಪಿಲ್ಲಿಯಾಗಿ ಕೆಳಗೆ ಬಿದ್ದವು, ಬಾಡಿದವು, ಅವುಗಳ ಬಣ್ಣವೂ ಕೆಟ್ಟಿತು. ವಾಸನೆ ಮಣ್ಣು ಪಾಲಾಯಿತು. ಈಗ 'ಹೂ'ಗಳಲ್ಲಿ ತಮ್ಮ ತಪ್ಪಿನ ಅರಿವಾಯಿತು. ಅಂದಿನ ರಾತ್ರಿ 'ಹೂ'ಗಳೆಲ್ಲಾ ಚಿಂತೆಗೊಳಗಾದವು. ಅಷ್ಟರಲ್ಲಿ ಅಲ್ಲಿಗೆ ಸೂಜಿಯ ಆಗಮನವಾಯಿತು.

''ಮಲ್ಲಿಗೆಯ ಮಕ್ಕಳೇ ನೀವು ತಪ್ಪು ಭಾವಿಸಿರುವಿರಿ.'' ದಾರದಿಂದ ನಿಮಗೆ ಸಹಾಯವಿದೆ ಅದರ ಸಹಾಯ ಪಡೆಯದೆ ನೀವು ಯಾರ ತಲೆಯ ಮೇಲಾಗಲಿ, ಕೊರಳಲ್ಲಾಗಲಿ ನಿಲ್ಲಲು ಸಾಧ್ಯವಿಲ್ಲ. ದಾರದ ಸಹಾಯದಿಂದ ನಿಮಗೆ ಅನುಕೂಲವಿದೆ ನಿಮ್ಮನ್ನು ಉಪಯೋಗಿಸಲು ಎಲ್ಲರಿಗೂ ಇಚ್ಛೆ. ದಾರದಲ್ಲಿ ಗುಣವಿಲ್ಲ, ರೂಪವಿಲ್ಲ ವಾಸನೆಯಿಲ್ಲದಿದ್ದರೂ ನಿಮ್ಮನ್ನೆಲ್ಲ ಅದು ಸಂರಕ್ಷಿಸುತ್ತದೆ.

ನಿಮ್ಮ ಜೊತೆಗೆ ಅದು ದೇವರ ಹತ್ತಿರ ಬರುತ್ತದೆ. ಅದರ ಸಹಾಯವಿಲ್ಲದೆ ನೀವು ದೇವರ ಹತ್ತಿರ ಹೋಗಲಾರಿರಿ. ಜಗತ್ತಿನಲ್ಲಿ ಹೆಚ್ಚಾಗಿ ಉಪಯೋಗಕ್ಕೆ ಬರುವ ಚರಾಚರ ವಸ್ತುಗಳಲ್ಲಿ ಇಂತಹ ಒಳ್ಳೆಯ ಗುಣ ಇರುತ್ತದೆ. ಮರೆಯಲ್ಲಿಯೇ ನಿಂತು ಸಹಕರಿಸುವುದು ಇದು ನಿಮಗೆ ತಿಳಿದಿರಲಿ. ಕೇವಲ ಬಣ್ಣ, ಒನಪು ವೈಯ್ಯಾರ ಮಾಡುವವರಿಂದ ಯಾರಿಗೂ ಪ್ರಯೋಜನಕ್ಕೆ ಬರುವದು ಅಸಂಭವವೇ ಸರಿ ಎಂದು ಸೂಜಿಯು 'ಹೂ'ಗಳಿಗೆ ತಿಳಿಸಿ ಹೇಳಿತು. 'ಹೂ'ಗಳು ದಾರದೊಂದಿಗೆ ಕ್ಷಮೆ ಕೋರಿದವು. ಮರುದಿನ ದಾರ ಮತ್ತು 'ಹೂ'ಗಳು ಸೇರಿ, ಒಂದಾಗಿ ಮಾಲೆಯಾಗಿ ದೇವರ ಕೊರಳಲ್ಲಿ ಶೋಭಿಸಿದವು.

---

## ಶಬ್ದಗಳ ಅರ್ಥ

**ನಿರ್ವಿಕಾರ** - ಬದಲಾಗದ; **ನಿರ್ಗುಣ** - ಗುಣವಿಲ್ಲದ; **ಮಣ್ಣುಪಾಲು** - ನಾಶ; **ಯಥಾರೀತಿ** - ಎಂದಿನಂತೆ; **ಸಮರ್ಪಕ** - ಸೂಕ್ತವಾದದ್ದು, ಯೋಗ್ಯ; **ಚರಾಚರ** - ನಡೆದಾಡುವ ಹಾಗೂ ನಡೆದಾಡದೇ ಇರುವ ಜೀವರಾಶಿಗಳು.

### ಕೃತಿ: 1) ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

1) 'ಹೂ'ಗಳಿಗೆ ಯಾರ ಸಂಗ ಬೇಡವೆನಿಸಿತು ?
2) 'ಹೂ'ಗಳು ದಾರಕ್ಕೆ ಏನೆಂದು ಹೀಯಾಳಿಸಿದವು ?
3) ಭಕ್ತರು ಪೂಜಾರಿಗೆ ಏನೆಂದು ಪ್ರಶ್ನಿಸಿದರು ?
4) 'ಹೂ'ಗಳಲ್ಲಿಯ ತಪ್ಪು ಕಲ್ಪನೆ ಯಾರು ಹೋಗಲಾಡಿಸಿದರು ?

### ಕೃತಿ: 2) ಕೆಳಗಿನ ಮಾತುಗಳನ್ನು ಯಾರು ಹೇಳಿದರು ?

1) ''ಚಿನ್ನದೊಂದಿಗೆ ಹಿತ್ತಾಳೆ ಕರಗಿಸಿ ಬೆರಸಿದಂತೆ'' [ ]
2) ''ನನ್ನ ಸಂಗ ಬೇಡವೆಂದು ನಿರಾಕರಿಸುತ್ತಿರುವಿರಿ'' [ ]
3) ''ಪೂಜೆಗೆ 'ಹೂ'ಮಾಲೆ ಆಗಲಿಲ್ಲವೆ?'' [ ]
4) ''ಇಂದು ಬಿಡಿ 'ಹೂ'ಗಳನ್ನು ಏರಿಸಿರಿ'' [ ]
5) ''ಈ ಹೂಗಳನ್ನು ತೆಗೆದುಕೊಂಡು ನಾನೇನು ಮಾಡಲಿ'' [ ]
6) ''ಮಲ್ಲಿಗೆಯ ಮಕ್ಕಳೇ ನೀವು ತಪ್ಪು ಭಾವಿಸಿರುವಿರಿ'' [ ]

**ಕೃತಿ: 3) ನಿಮಗೆ ಗೊತ್ತಿರುವ ವಿವಿಧ 'ಹೂ'ಗಳ ಹೆಸರುಗಳನ್ನು ಬರೆಯಿರಿ.**

**ಕೃತಿ: 4) ನಿಮ್ಮ ಶಾಲೆಯ ಕೈತೋಟದಲ್ಲಿ ಬೆಳೆಸಿರುವ ವಿವಿಧ ಸಸ್ಯಗಳ ಕುರಿತು ನಾಲ್ಕೈದು ವಾಕ್ಯಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಕೃತಿ: 5) ಕೆಳಗಿನ ವಾಕ್ಯಗಳು ಸರಿ ತಪ್ಪು ಬರೆಯಿರಿ.**

1) ಗಿಡಮರಗಳನ್ನು ಬೆಳೆಸಬೇಕು
2) ಉದ್ಯಾನವನದಲ್ಲಿಯ 'ಹೂ'ಗಳನ್ನು ಕೀಳಬೇಕು
3) 'ಹೂ'ಗಳು ನಿಸರ್ಗಕ್ಕೆ ಶೋಭೆಯನ್ನು ತರುತ್ತವೆ
4) ಕೆಲವು ಹೂಗಳು ಔಷಧಕ್ಕೆ ಉಪಯೋಗವಾಗಿವೆ
5) ಎಲ್ಲ 'ಹೂ'ಗಳಿಂದ ಹಣ್ಣುಗಳು ತಯಾರಾಗುತ್ತವೆ
6) ಎಲ್ಲ 'ಹೂ'ಗಳು ಸುವಾಸನೆ ಬೀರುತ್ತವೆ

**ಕೃತಿ: 6) ಕೆಳಗಿನ ಶಬ್ದಗಳ ವಚನ ಬದಲಿಸಿ ಬರೆಯಿರಿ.**

ಉದಾ 1) ಹೂ –'ಹೂ'ಗಳು 2) ಹಣ್ಣುಗಳು – ಹಣ್ಣು

1) ಪೂಜಾರಿ
2) ಮನುಷ್ಯರು
3) ಮಾಲೆಗಳು
4) ಭಕ್ತ
5) ಶಾಲೆಗಳು

**ಕೃತಿ: 7) ಕೆಳಗಿನ ಶಬ್ದಗಳಿಗೆ ತತ್ಸಮ – ತದ್ಭವ ಬರೆಯಿರಿ.**

**ಉದಾ:** 1) ಶಾಲೆ – ಶಾಲಾ

1) ಬಣ್ಣ
2) ಮಾಲೆ
3) ಚಿಂತಾ
4) ರೂಹ
5) ಮಲ್ಲಿಗೆ

**ಕೃತಿ: 8) ಪರಿಸರದಲ್ಲಿಯ 'ಹೂ'ಗಳನ್ನು ಸಂಗ್ರಹಿಸಿ ಟಿಪ್ಪಣಿ ಪುಸ್ತಕದಲ್ಲಿ ಅಂಟಿಸಿ ಮಾಹಿತಿ ಬರೆಯಿರಿ.**

# 8. ಅಪ್ಪನ ಐಶ್ವರ್ಯ

ಹೊಯ್ಸಳ

ಹೊನ್ನೂರು ಒಂದು ಚಿಕ್ಕ ಹಳ್ಳಿ. ಅಲ್ಲಿ ಹೊನ್ನಪ್ಪ ಶೆಟ್ಟಿಯೆಂಬ ವ್ಯಾಪಾರಿ ಇದ್ದನು. ಅವನಿಗೆ ಸಂಗಪ್ಪ ಶೆಟ್ಟಿ ಮಗನಿದ್ದನು. ಸಂಗಪ್ಪ ಶೆಟ್ಟಿ ತುಂಬ ದುಂದು ವೆಚ್ಚಗಾರ. ಅವನು ದೊಡ್ಡವನಾಗುತ್ತಿರುವಂತೆ ಶರಟಿಗೂ ಶರಾಯಿಗೂ ಕೋಟಿಗೂ ರುಮಾಲಿಗೂ ತುಂಬ ರುಪರುಪಾಯಿ ಸುರಿಯಲಾರಂಭಿಸಿದ. ತಂದೆ ಹೊನ್ನಪ್ಪ ತುಂಬಾ ನೊಂದುಕೊಂಡ. ಹೆಂಡತಿಯಾದ ಹೊನ್ನಮ್ಮನಲ್ಲಿ ದೂರು ಹೇಳಿದ. ಇರುವವನೊಬ್ಬ ಮಗ ಹೇಗಾದರೂ ಬದುಕಿರಲಿ. ಅವನೇನು ನೀರಿನ ಹಾಗೆ ಹಣ ಸುರಿದರೂ ಕೂಡಿಟ್ಟ ಐಶ್ವರ್ಯ ಕುಂದುವುದಿಲ್ಲ ಎಂದುಕೊಂಡಿದ್ದಳು ಸಂಗಪ್ಪ ಶೆಟ್ಟಿಯ ತಾಯಿ.

ಆದರೆ ಸಾಹುಕಾರನಿಗೆ ತುಂಬಾ ವ್ಯಥೆ. ಕೈ ಮೈ ನೋಯಿಸಿಕೊಂಡು ಸಂಪಾದಿಸಿದ ಹಣವೆಲ್ಲ, ಕಷ್ಟವನ್ನೇ ಅರಿಯದ ಈ ಪೋರನಿಂದ ಪೋಲಾಗುವುದನ್ನು ಕಂಡು ಸಹಿಸಲಿಲ್ಲ.

ಆದ್ದರಿಂದ ಮಗನನ್ನು ಕರೆದು ಹೇಳಿದ ''ಮಗು, ಪಟ್ಟಣ ಶೆಟ್ಟಿಯ ಮಗ ಪೋಲಿಪೋಲಿಯಾಗಿ ಹಣವನ್ನೆಲ್ಲ ಪೋಲು ಮಾಡುವನೆಂದು ಜನ ಹೇಳುತ್ತಾರೆ.''

ಮಗ ''ಅದಕ್ಕೆ ನಾನೇನು ಮಾಡಲಿ? ಒಳ್ಳೆಯ ಬಟ್ಟೆ ಹಾಕದಿದ್ದರೆ ಜಿಪುಣ ಶೆಟ್ಟಿ ಎಂದು ಅವಮಾನ ಮಾಡುತ್ತಾರಪ್ಪ!. ತಂದೆ ''ಅದೆಲ್ಲ ನನಗೆ ಬೇಡ, ಇನ್ನು ಮೇಲೆ ದಿನಾ ಐವತ್ತು ರೂಪಾಯಿ ಸಂಪಾದಿಸಿ ತಂದ ಹೊರತು ನಿನಗೆ ಊಟವಿಲ್ಲ. ಸಂಪಾದನೆ ಸಿಗದ ದಿನ ಉಪವಾಸ ಮಾಡು. ಆಗಲಾದರೂ ನಿನಗೆ ಹಣದ ಬೆಲೆ ತಿಳಿಯುತ್ತದೆ.

ತಂದೆ ಹೊನ್ನಪ್ಪನ ಮಾತು ಕೇಳಿ ಆ ಪುಟ್ಟ ಸಾಹುಕಾರ ಊರೆಲ್ಲ ತಿರುಗಿದ. ಯಾರೂ ಕೆಲಸಕ್ಕೆ ಕರೆಯಲಿಲ್ಲ. ಏನಾದರೂ ಮಾಡುತ್ತೇನೆಂದು ಹೋದರೆ ಆಳು ಕಾಳುಗಳೂ, ಗುಮಾಸ್ತರುಗಳೂ ನಗುತ್ತಿದ್ದರು. ಹೊನ್ನೂರೆಲ್ಲ ತಿರುಗಿ ತಿರುಗಿ ಕಾಲು ಸವೆಸಿಕೊಂಡು ಊಟವಿಲ್ಲದೆ, ಬಸವಳಿದು, ಬಾಯಾರಿ, ಕಂಗೆಟ್ಟು ಮನೆಗೆ ಸಂಜೆಗೆ ಬಂದು ಜಗುಲಿಯ ಮೂಲೆಯಲ್ಲಿ ಮುದುರಿ ಕೂತಿದ್ದ.

ಮಗನಿಗಾಗಿ ಕಾದು ಕಾದು ಹಸಿದಿದ್ದ ಈ ತಾಯಿ, ಅವನನ್ನು ಒಳಗೆ ಕರೆದೊಯ್ದಳು. ಕಾಲಿಗೆ ಬಿಸಿನೀರು ಕೊಟ್ಟಳು. ಇಪ್ಪತು ರೂಪಾಯಿ ಕೈಲ್ಲಿಟ್ಟು ಊಟ ಮಾಡಿಸಿದಳು.

ಆ ರಾತ್ರಿ ಆ ಮಗ ತನ್ನ ತಂದೆಯ ಕಾಲಬಳಿ ಇಪ್ಪತ್ತು ರೂಪಾಯಿಗಳನ್ನು ಒಪ್ಪಿಸಿದ್ದೇ ತಡ, ಆ ತಂದೆ ಹೇಳಿದ ''ಈ ನಿನ್ನ ಪ್ರೇಮದ ಸಂಪಾದನೆಯನ್ನು ಬಾವಿಗೆ ಹಾಕಿ ಬಾ! ಹೋಗು!''

ಮಗನ ಕೈಯಿಂದ ಹೀಗೆ ಆ ಬಾವಿಗೆ ನಾಲ್ಕಾರು ದಿನ ಇಪ್ಪತು ರೂಪಾಯಿ ಬಿದ್ದ ಮೇಲೆ, ತಂದೆಗೆ ವಿಚಾರ ತಿಳಿಯಿತು. ಮಗನಿಗೂ ತಾಯಿಗೂ ಬೈಗುಳ ಬಿತ್ತು.

ಮಾರನೇದಿನ ಪೇಟೆಯಲ್ಲಿ

ಸಂಗಪ್ಪಶೆಟ್ಟಿ–''ಸ್ವಾಮಿ ಏನಾದರೂ ಕೆಲಸ ಕೊಡಿ.''

ಮಳಿಗೆಯವನು–''ಏನೋ ಸಂಗಪ್ಪ! ನಿನ್ನಪ್ಪ ಕಳಿಸಿದನೇನೋ! ಹೋಗಿ ಈ ಷೋಕೀಲಾಲನ ಬಟ್ಟೆಗಳನ್ನು ಬಿಚ್ಚಿಟ್ಟು ಬಾ. ಸಾಧಾರಣದ್ದು ಏನಾದರೂ ಬಟ್ಟೆ ಹಾಕಿ ಕೊಂಡು ಬಂದರೆ ಯಾರಾದರೂ ಕೆಲಸ ಕೊಟ್ಟಾರು. ಹೋಗು... ಮನೆಯಲ್ಲಿ ಯಾವುದಾದರೂ ಹಾಕಿಕೊಂಡು, ತಿಂಡಿಗಿಂಡಿ ತಿಂದುಕೊಂಡು, ಮೈ ಕೈ ಗಟ್ಟಿ ಮಾಡಿಕೊಂಡು ಬಾ ಹೋಗು.''

ಸಂಗಪ್ಪಶೆಟ್ಟಿ ಮನೆಗೆ ಹೋಗಿ ಅವರಪ್ಪನ ಹಳೇಬಟ್ಟೆ ಹಾಕಿಕೊಂಡು ಮಳಿಗೆಗಳಿಗೂ ಗಾಡಿಖಾನೆಗಳಿಗೂ, ರೈಲು ನಿಲ್ದಾಣಗಳಿಗೂ ಹೋಗಿ ನಿಂತು ಕಾದು ಕಾದು ಎಲ್ಲರನ್ನೂ ಕೇಳಿ ಕೇಳಿ ಬಂದ. ಕಟ್ಟಾನುಕಡೆಗೊಬ್ಬ ದಪ್ಪಹೊಟ್ಟೆ ಸಾಹುಕಾರ ಇವನನ್ನ ಕರೆದ.

''ಲೇ ದಗಲೇ ಶರಾಯವನೆ ಬಾ, ಈ ಟ್ರಂಕು ಹೊತ್ತು ತಂದು ಕೊಡು. ನಿನ್ನ ಮೋರೆ ನೋಡಿದರೆ ಹೊಟ್ಟೆಗೇನೂ ಇಲ್ಲದಂತೆ ಕಾಣುತ್ತಲ್ಲ. ಹೋಗು ಈ ದುಡ್ಡು ತೆಗೆದುಕೊಂಡು ಕಾಫಿ ತಗೊಂಡು ಬಾ.'' ಎಂದು ಐದುರೂಪಾಯಿ ಎಸೆದ. ಶೆಟ್ಟಿ ಸಾಹುಕಾರನ ಮಗ ಕಾಫಿ ಕುಡಿದು ಅರ್ಧಾಣೆ ಕಡಲೇಕಾಯಿ ಬಾಯಿಗೆಸೆದುಕೊಂಡು ಬಂದ.

ಶೆಟ್ಟಿ '' ಈ ಟ್ರಂಕೂ ಈ ಹಾಸಿಗೇನೂ ತೆಗೆದುಕೊ, ನಡೀ ಮುಂದೆ.''

ಸಂಗಪ್ಪ ಶೆಟ್ಟಿ ಸಾಹುಕರನಮನೆ ಜಗುಲಿಯ ಮೇಲೆ ಸಾಮಾನು ಇಳಿಸಿದ. ಅವನ ಕತ್ತು ಉಳುಕಿ ಹೋಗಿತ್ತು. ಆ ದಿನ ಅವನಿಗೆ ಹತ್ತು ರೂಪಾಯಿ ಕೂಲಿ ಸಿಕ್ಕಿತ್ತು. ಇನ್ನು ಹತ್ತು ರೂಪಾಯಿ ಸಂಪಾದಿಸಿದ ಇನ್ನು ಹತ್ತು ರೂಪಾಯಿ ಮಾಡೋಣವೆಂದು ಊರೆಲ್ಲ ತಿರುಗಿದ. ಇವನ ಒಣಗಿದ ಮುಖ ನೋಡಿದವರಾರೂ ಇವನನ್ನು ಹತ್ತಿರ ಕರೆಯಲಿಲ್ಲ. ಕೆಲಸ ಹೇಳಲಿಲ್ಲ.

ರಾತ್ರಿ ಮನೆಗೆ ಬಂದ ಸಂಗಪ್ಪ ಶೆಟ್ಟಿ. ಅವನ ತಾಯಿ ಉಪವಾಸವಿದ್ದು ಕಾದಿದ್ದಳು. ಈ ಸಂಪಾದನೆಯನ್ನು ತಂದ ಅವನು ತನ್ನ ತಂದೆ ಹೊನ್ನಪ್ಪಶೆಟ್ಟಿಯ ಕಾಲಿನ ಬುಡದಲ್ಲಿ ಇಟ್ಟು ಕಣ್ಣೀರು ಹಾಕಿದ.

ಆಗ ಹೊನ್ನಪ್ಪ ಶೆಟ್ಟಿ ಹೇಳಿದ–''ತಗೊಂಡು ಹೋಗಿ ಬಾವಿಗೆ ಹಾಕು ಈ ನಿನ್ನ ಸಂಪಾದನೆಯನ್ನ.''

ಮಗ ಸಂಗಪ್ಪ ಶೆಟ್ಟಿ –''ಇಲ್ಲಿ ಹತ್ತು ರೂಪಾಯಿ ಮಾತ್ರ ಇದೆ.

ಹೊನ್ನಪ್ಪಶೆಟ್ಟಿ ''ನಿತ್ಯಾ ಇಪ್ಪತ್ತು ರೂಪಾಯಿಗಳನ್ನು ತರುತ್ತಿದ್ದೆಯಲ್ಲೋ!''

ಮಗ ಸಂಗಪ್ಪ ಶೆಟ್ಟಿ ''ಇದೇ ನನ್ನ ಸಂಪಾದನೆ. ಅದೆಲ್ಲ ಅಲ್ಲ. ಈ ದಿನ ಕತ್ತು ಉಳುಕಿ ಹೋಗಿದೆ, ಅಪ್ಪಾ! ಹತ್ತು ರೂಪಾಯಿಗೆ ಹೆಚ್ಚಾಗಿ ಸಿಗುವುದಿಲ್ಲ ಕೂಲಿಮಾಡಿದರೆ.''

ತಂದೆ ಹೊನ್ನಪ್ಪಶೆಟ್ಟಿ ''ಹಾಗೇನು! ದಿನಾಲು ನಿನ್ನ ಖರ್ಚಿಗೆ ಸಾಲದಲ್ಲೋ ಹಾಗಾದರೆ.''

ಮಗ ''ನನ್ನ ಖರ್ಚು ಕಡಿಮೆಮಾಡಿಕೊಳ್ಳುತ್ತೇನೆ ಅಪ್ಪಾ. ಇನ್ನು ಮೇಲೆ ವಿವೇಕದಿಂದ ಇರುತ್ತೇನೆ.''

''ತಂದೆ ಹಾಗೆ ಬಾರಪ್ಪಾ. ಈಗ ನೋಡು, ನೀನು ಹಣದ ಬೆಲೆ ಕೊಂಚವಾಗಿ ಅರ್ಥಮಾಡಿಕೊಂಡ ಹಾಗಾಯಿತು.''

ಅಂದಿನಿಂದ ಆ ಸಾಹುಕಾರನ ಮಗ ವಿವೇಕದಿಂದ ಇರಡೊಡಗಿದನು. ಆ ತಂದೆ ತನ್ನ ಕಷ್ಟಾರ್ಜಿತವಾದ ಐಶ್ವರ್ಯವನ್ನೆಲ್ಲ ಅವನ ಪಾಲಿಗೆ ಬಿಟ್ಟು ಕೊಟ್ಟನು.

## ಶಬ್ದಗಳ ಅರ್ಥ

**ಐಶ್ವರ್ಯ** – ಸಂಪತ್ತು; **ಪೋಲಾಗು** – ಹಾಳಾಗು; **ಕಷ್ಟಾರ್ಜಿತ** – ದುಡಿಮೆ, ಸಂಪಾದಿಸಿದ

**ಕೃತಿ:1) ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ಹೊನ್ನೂರಿನಲ್ಲಿ ಯಾವ ವ್ಯಾಪಾರಿ ಇದ್ದನು ?

2) ಸಂಗಪ್ಪಶೆಟ್ಟಿಯ ತಾಯಿಯ ಹೆಸರು ಏನು ?

3) ತಾಯಿಯು ಮಗನಿಗೆ ಎಷ್ಟು ರೂಪಾಯಿ ಕೊಟ್ಟಳು

4) ಕೊನೆಗೆ ಸಾಹುಕಾರನ ಮಗ ಹೇಗೆ ಇರತೊಡಗಿದನ ?

**ಕೃತಿ:2) ಕೆಳಗಿನ ಗ್ರಾಮ್ಯ ಭಾಷೆಯ ವಾಕ್ಯಗಳನ್ನು ಗ್ರಾಂಥಿಕ ಭಾಷೆಗೆ ಪರಿವರ್ತಿಸಿ ಬರೆಯಿರಿ.**

**ಉದಾ** - ಮಗನಿಗೂ ತಾಯಿಗೂ ಬೈಗುಳ ಬಿತ್ತು.

ಮಗ ಹಾಗೂ ತಾಯಿ ಬೈಯಿಸಿಕೊಂಡರು.

1) ''ಹೋಗು ಈ ದುಡ್ಡು ತೆಗೆದುಕೊಂಡು ಕಾಫಿ ತಗೊಂಡು ಬಾ.

2) ಈ ಟ್ರಂಕೂ ಈ ಹಾಸಿಗೇನೂ ತೆಗೆದುಕೊ, ನಡೀ ಮುಂದೆ.

**ಕೃತಿ: 3) ಕೆಳಗಿನ ಏಕವಚನದ ವಾಕ್ಯಗಳನ್ನು ಬಹುವಚನದಲ್ಲಿ ಬದಲಾಯಿಸಿ ಬರೆಯಿರಿ.**

1) ಬಾಲಕ ಶಾಲೆಗೆ ಹೋಗುತ್ತಾನೆ.

2) ಗಿಡ ನಮಗೆ ನೆರಳು ಕೊಡುತ್ತದೆ.

3) ಮಹಿಳೆ ನಮ್ಮ ಬದುಕಿಗೆ ಬೆಳಕು ನೀಡುತ್ತಾಳೆ.

**ಕೃತಿ: 4) ಕೆಳಗಿನ ಒಂದೊಂದು ವಾಕ್ಯದ ಕೆಳಗೆ ಕೊಟ್ಟ ಮೂರು ಪರ್ಯಾಯಗಳಲ್ಲಿ ಯೋಗ್ಯವಾದುದನ್ನು ಆಯ್ದು ವಾಕ್ಯಗಳನ್ನು ಮತ್ತೊಮ್ಮೆ ಬರೆಯಿರಿ.**

**1) ಸಂಗಪ್ಪ ಶೆಟ್ಟಿಯು ಬೆಲೆಬಾಳುವ ಬಟ್ಟೆಗಳನ್ನು ಧರಿಸುತ್ತಿದ್ದನು.**

**ಏಕೆಂದರೆ ------------------**

1) ಚೆಂದಕಾಣಲೆಂದು

2) ಬೆಲೆಬಾಳುವ ಬಟ್ಟೆಹಾಕದಿದ್ದರೆ ಜಿಪುಣಶೆಟ್ಟಿ ಎಂದು ಜನ ಅಪಮಾನ ಮಾಡುತ್ತಾರೆಂದು.

3) ತಂದೆಯ ಆಜ್ಞೆಯನ್ನು ಪಾಲಿಸಲು

**2) ಹೊನ್ನಪ್ಪ ಶೆಟ್ಟಿಯು ತನ್ನ ಐಶ್ವರ್ಯವನ್ನೆಲ್ಲ ಮಗನ ಪಾಲಿಗೆ ಬಿಟ್ಟುಕೊಟ್ಟನು.**

**ಏಕೆಂದರೆ ------------------**

1) ಮಗನು ದೊಡ್ಡವನಾದನೆಂದು

2) ತನಗೆ ವಯಸ್ಸಾಯಿತೆಂದು

3) ಮಗನು ವಿವೇಕದಿಂದ ಇರತೊಡಗಿದನೆಂದು

**ಕೃತಿ: 5) ''ಹಣವನ್ನು ಹಿತವಾಗಿ ಗಳಿಸು ಮಿತವಾಗಿ ಬಳಸು'' ಎಂಬ ವಿಚಾರ ಕುರಿತು ನಿಮ್ಮ ಅಭಿಪ್ರಾಯ ಬರೆಯಿರಿ.**

**ಕೃತಿ: 6) ಕೆಳಗಿನ ವಾಕ್ಯಗಳಲ್ಲಿಯ ಶಬ್ದಗಳನ್ನು ಸರಿಪಡಿಸಿ ಅರ್ಥಪೂರ್ಣ ವಾಕ್ಯ ರಚಿಸಿ.**

1) ಸಿಗದ ಉಪವಾಸ ದಿನ ಮಾಡು ಸಂಪಾದನೆ

2) ಕೆಲಸ ಸ್ವಾಮಿ ಕೊಡಿ ಏನಾದರೂ

CQENIG

# 9. ಮೂಢನಂಬಿಕೆ

**ಹ. ಮ. ಪೂಜಾರ**

ಅನೇಕ ವರ್ಷಗಳ ಹಿಂದೆ ಕೋರಹಳ್ಳಿ ಎಂಬ ಗ್ರಾಮದಲ್ಲಿ ತಿಪ್ಪಣ್ಣ ಮತ್ತು ಲಕ್ಕಮ್ಮ ಎಂಬ ದಂಪತಿಗಳಿದ್ದರು. ಸಾತ್ವಿಕ ಸ್ವಭಾವದ ಈ ದಂಪತಿಗಳು ಎಲ್ಲರ ಜೊತೆಗೂ ಹೊಂದಿಕೊಂಡಿದ್ದರು. ಇವರಿಗೆ ಯಾವುದೇ ಆಸ್ತಿ ಇರಲಿಲ್ಲ. ಹೀಗಾಗಿ ಈ ದಂಪತಿಗಳು ಇಂಬು ಕೊಟ್ಟವರಲ್ಲಿ ನಂಬುಗೆಯಿಂದ ದುಡಿದು ಉಂಡುಟ್ಟು ಸುಖವಾಗಿದ್ದರು.

ತಿಪ್ಪಣ್ಣನಿಗೆ ಮಕ್ಕಳು ಆಗಿರಲಿಲ್ಲ. ಮಕ್ಕಳಿಲ್ಲದ ಚಿಂತೆ ತಿಪ್ಪಣ್ಣನಿಗಿಂತ ಲಕ್ಕಮ್ಮಳಿಗೆ ಹೆಚ್ಚಾಗಿತ್ತು. ಸಂತಾನ ಪ್ರಾಪ್ತಿಗಾಗಿ ಎಲ್ಲಾ ದೇವರಿಗೂ ಹರಕೆ ಸಲ್ಲಿಸಿದರು. ಆದರೂ ಲಕ್ಕಮ್ಮನ ಆಶೆ ಈಡೇರಲಿಲ್ಲ. ''ಊರದೇವಿಗೆ ಮರಿ ಮಾಡಿದರೆ ಮಕ್ಕಳಾಗುತ್ತವೆ'' ಎಂದು ಒಬ್ಬ ಅಜ್ಜಿ ಹೇಳಿದ್ದರಿಂದ, ಒಂದು ದಿನ ದಂಪತಿಗಳು ಒಂದು ಕುರಿಯನ್ನು ಹಿಡಿದುಕೊಂಡು ಹೊರಟಿದ್ದರು. ಅಷ್ಟರಲ್ಲಿ ಎದುರಿಗೆ ಕೃಷ್ಣಾಜಿ ಮಾಸ್ತರರು ಬಂದರು. ''ಏನಪ್ಪಾ ತಿಪ್ಪಣ್ಣ ಹಾಲು ಹೈನಿಗಾಗಿ ಕುರಿ ಖರೀದಿ ಮಾಡಿದಿ ಏನು'' ಎಂದು ಕೇಳಿದರು. ಲಕ್ಕಮ್ಮ ಸಂತಾನಪ್ರಾಪ್ತಿಗಾಗಿ ಊರದೇವಿಗೆ ಬಲಿಕೊಡುವ ವಿಚಾರ ಹೇಳಿದಳು.

''ನೋಡು ಲಕ್ಕಮ್ಮ ದೇವರಿಗೆ ಪ್ರಾಣಿ ಬಲಿಕೊಡಬಾರದು. ಅದು ಮೂಢನಂಬಿಕೆ. ಅದರಿಂದ ಏನೂ ಸಾಧಿಸಿದಂತಾಗುವುದಿಲ್ಲ. ಎಲ್ಲ ಪ್ರಾಣಿಗಳನ್ನು ದೇವರೇ ಹುಟ್ಟಿಸಿದ್ದಾನೆ ಅಂದಬಳಿಕ ದೇವರೇ ಬಲಿ ಕೇಳುವದೆಂತು? ಇದರಿಂದ ನಮಗೆ ಒಳ್ಳೆಯದಂತೂ ಆಗುವದೇ ಇಲ್ಲ, ಕೇಡಾಗುತ್ತದೆ. ಆದ್ದರಿಂದ ಈ ಪ್ರಾಣಿ ಬಲಿ ಕೊಡುವ ವಿಚಾರ ಬಿಟ್ಟುಬಿಡು'' ಎಂದು ತಿಳಿಸಿ ಹೇಳಿದರು ಕೃಷ್ಣಾಜಿ ಮಾಸ್ತರರು. ಇದಕ್ಕೆ ದಂಪತಿಗಳು ಒಪ್ಪಿದರು. ಹೀಗೆಯೇ ಕೆಲವು ವರ್ಷಗಳು ಗತಿಸಿದ ಬಳಿಕ ಲಕ್ಕಮ್ಮ ಒಂದು ಗಂಡು ಮಗುವಿಗೆ ಜನ್ಮಕೊಟ್ಟಳು. ದಂಪತಿಗಳಿಬ್ಬರೂ ಸಂತೋಷಪಟ್ಟರು. ವಾಡಿಕೆಯಂತೆ ಮಗು ಹುಟ್ಟಿದ ಕೂಡಲೆ ತಿಪ್ಪಣ್ಣ ಹೊತ್ತಿಗೆ ತೆಗೆಯಿಸಿ ಕೇಳಿದ. ''ಮಗು ಕೆಟ್ಟ ನಕ್ಷತ್ರದಲ್ಲಿ ಹುಟ್ಟಿದೆಯೆಂದೂ ಇದರಿಂದ ತಂದೆ-ತಾಯಿಗಲ್ಲದೇ ಇಡೀ ಊರಿಗೂ ಕೇಡಾಗುವದೆಂದು'' ಹೊತ್ತಿಗೆ ಹೇಳುವವರು ಹೇಳಿದರಂತೆ. ಈ ವಿಷಯ ಕಿವಿಯಿಂದ ಕಿವಿಗೆ ಊರು ತುಂಬಾ ಹರಡಿತು. ''ದೇವಿಗೆ ಬಲಿ ಕೊಡಲು ಒಯ್ದ ಕುರಿಯನ್ನು ತಿರುಗಿ ತಂದದ್ದರಿಂದ ದೇವಿ ಸಿಟ್ಟಾಗಿ ಹೀಗಾಯಿತೆಂದು'' ಕೆಲವು ಜನ ಮಾತಾಡಿಕೊಂಡರು. ಮಗನಿಗೆ ದಂಪತಿಗಳು ಪ್ರೀತಿಯಿಂದ ವೆಂಕಪ್ಪನೆಂದು ಹೆಸರಿಟ್ಟರು. ಮಗನ ಭವಿಷ್ಯದ ಬಗ್ಗೆ ಊರಲ್ಲಿ ಜನರಾಡುವ ಮಾತಿಗೆ ತಿಪ್ಪಣ್ಣ ಕೊರಗತೊಡಗಿದ. ಮನಸ್ಸಿನಲ್ಲಿ ಮನೆ ಮಾಡಿದ ಚಿಂತೆ ಚಿತೆಯಾಗಿ ಅವನ ಪ್ರಾಣವನ್ನೇ ತೆಗೆದುಕೊಂಡಿತು.

ಲಕ್ಕಮ್ಮಳಿಗೆ ಆಕಾಶವೇ ಕಳಚಿಬಿದ್ದಂತಾಯಿತು. ಆಕೆಗೂ ಮುಂದೆ ಏನು ಮಾಡಬೇಕೆಂಬುದೇ ತೋಚಲಿಲ್ಲ. ಮಗುವಿನ ಭವಿಷ್ಯದ ಚಿಂತೆಯ ಜೊತೆಗೆ ಪತಿ ತೀರಿದ ಚಿಂತೆ. ಹೀಗೆ ಲಕ್ಕಮ್ಮಳ ಜೀವನದಲ್ಲಿಯೂ ನೆಮ್ಮದಿ ಉಳಿಯಲಿಲ್ಲ. ಮಗು ವೆಂಕಪ್ಪ ನಾಲ್ಕು ವರುಷದವನಾಗುವಷ್ಟರಲ್ಲಿ ಅವಳೂ ಇಹಲೋಕಯಾತ್ರೆ ಮುಗಿಸಿದಳು.

ವೆಂಕನ ತಂದೆ ತಾಯಿ ಇಬ್ಬರೂ ತೀರಿಕೊಂಡದ್ದರಿಂದ ಹೊತ್ತಿಗೆಯ ಭವಿಷ್ಯ ನಿಜವೆಂದೂ, ಇವನಿಂದ ಇನ್ನು ಊರಿಗೂ ಕೇಡಾಗುವದೆಂದು ಜನ ನಿರ್ಧರಿಸಿಬಿಟ್ಟರು. ವೆಂಕನನ್ನು ಯಾರೂ ಮುಟ್ಟಲು ಸಿದ್ಧರಿರಲಿಲ್ಲ. ಹೇಗಾದರೂ ಮಾಡಿ ಅವನನ್ನು ಊರಿಂದ ಹೊರಗೆ ಅಟ್ಟಬೇಕೆಂದರು. ಆದರೆ ತಬ್ಬಲಿ ವೆಂಕನಿಗೆ ಕೃಷ್ಣಾಜಿ ಮಾಸ್ತರರು ಆಶ್ರಯ ಕೊಟ್ಟರು. ''ವೆಂಕನು ಹುಟ್ಟಿದ ನಕ್ಷತ್ರದ ಕಾರಣಕ್ಕಾಗಿಯೇ ಅವನ ತಂದೆ ತಾಯಿ ತೀರಿದರೆಂದು'' ಹೇಳುವ ಜನಕ್ಕೆ ''ಯಾವ ನಕ್ಷತ್ರಗಳೂ ಕೆಟ್ಟವಿಲ್ಲ. ಅವರ ಸಾವಿಗೂ ವೆಂಕನ ಜನ್ಮಕ್ಕೂ ಏನೂ ನಂಟು ಇಲ್ಲ. ಅದೆಲ್ಲ ಮೂಢನಂಬಿಕೆ. ವೆಂಕನ ಭವಿಷ್ಯದ ಬಗ್ಗೆ ಜನರಾಡುವ ಚುಚ್ಚು ಮಾತಿಗೆ ನೊಂದು, ಬೆಂದು ಹೋದರಲ್ಲದೆ ಇನ್ನಾವ ಕಾರಣವಿಲ್ಲ'' ಎಂದು ತಿಳಿಸಿ ಹೇಳಿದರು.

ಕಾಕತಾಳಿ ನ್ಯಾಯವೆಂಬಂತೆ ಒಂದು ವರ್ಷ ಊರಲ್ಲಿ ಜನ ರೋಗ ರುಜಿನಗಳಿಂದ ಬಳಲತೊಡಗಿದರು. ಮತ್ತು ಮಳೆ ಆಗದೆ ಬರಗಾಲವೂ ಬಿದ್ದಿತು. ಇದಕ್ಕೆಲ್ಲ ವೆಂಕನ ಜನ್ಮ ನಕ್ಷತ್ರವೇ ಕಾರಣವೆಂದೂ, ವೆಂಕನೊಬ್ಬ ಈ ಊರ ಪೀಡೆಯೆಂದು ಜನರು ಆಡತೊಡಗಿದರು. ಮತ್ತು ವೆಂಕನನ್ನು ಊರು ಬಿಡಿಸಬೇಕೆಂದು ಕೃಷ್ಣಾಜಿ ಮಾಸ್ತರರಿಗೆ ಊರ ಜನ ಕೇಳಿಕೊಂಡರು.

''ಬಂಧುಗಳೇ ಊರಲ್ಲಿ ರೋಗ ಹರಡುವದಕ್ಕಾಗಲಿ ಮಳೆ ಬಾರದೇ ಇರುವದಕ್ಕಾಗಲಿ ಈ ತಬ್ಬಲಿ ವೆಂಕ ಕಾರಣನಲ್ಲ. ಊರಲ್ಲಿ ಅಲ್ಲಲ್ಲಿ ಕೊಳಚೆ ನೀರು ನಿಂತು ಊರು ಹೊಲಸಾಗಿ ರೋಗಾಣುಗಳು ಬೆಳೆದು ರೋಗ ಹರಡಿದೆ. ಮನೆ ಕಟ್ಟಲಿಕ್ಕೆಂದು, ಉರುವಲಿಕ್ಕೆಂದು ಊರ ಮುಂದಿನ ಅರಣ್ಯವನ್ನೇ ನಾಶ ಮಾಡಿದಿರಿ. ಇದರಿಂದ ಮಳೆ ಹೋಗಿದೆ. ಇದೆಲ್ಲವನ್ನು ತಿಳಿದುಕೊಳ್ಳದೆ ಮೂಢನಂಬಿಕೆಯೆಂಬ ಕತ್ತಲೆಯಲ್ಲಿ ಕುರುಡರಾಗಿರುವಿರಿ'' ಎಂದು ಕೃಷ್ಣಾಜಿ ಮಾಸ್ತರರು ತಿಳಿಸಿ ಹೇಳಿದರು.

ಕೃಷ್ಣಾಜಿ ಮಾಸ್ತರರ ಸಲಹೆಯಂತೆ ಊರ ಜನರೆಲ್ಲ ಸೇರಿ ಊರನ್ನೆಲ್ಲ ಕಸಗುಡಿಸಿ ಸ್ವಚ್ಛಗೊಳಿಸಿದರು. ಚರಂಡಿಯ ನೀರು ಊರ ಹೊರಗೆ ಹರಿದು ಹೋಗುವಂತೆ ಮಾಡಿ ಕೊಳಚೆ ಪ್ರದೇಶಗಳ ನಿರ್ಮೂಲನೆ ಮಾಡಿದರು. ಪ್ರತಿಯೊಬ್ಬರೂ ಒಂದೊಂದು ಸಸಿ ನೆಟ್ಟು ಪೋಷಿಸಿ ಬೆಳೆಸಿದರು. ಅಂದಿನಿಂದ ಊರ ಜನರೆಲ್ಲರೂ ನೆಮ್ಮದಿಯಿಂದ ಬಾಳತೊಡಗಿದರು. ಜನರ ಮನದಲ್ಲಿ ಬೇರೂರಿದ್ದ ಮೂಢನಂಬಿಕೆಗಳು ದೂರಾದವು. ಮತ್ತು ಊರ ಜನರೆಲ್ಲ ತಬ್ಬಲಿ ಬಾಲಕ ವೆಂಕಪ್ಪನನ್ನು ಪ್ರೀತಿಯಿಂದ ಕಾಣತೊಡಗಿದರು. ಇದನ್ನೆಲ್ಲ ಕಂಡು ಕೃಷ್ಣಾಜಿ ಮಾಸ್ತರರು ಸಂತೋಷಪಟ್ಟರು.

---

## ಶಬ್ದಗಳ ಅರ್ಥ

**ಸಾತ್ವಿಕ** – ಒಳ್ಳೆಯ; **ಇಂಬು** – ಆಶ್ರಯ; **ಮರಿಮಾಡು** – ಕುರಿಯನ್ನು ಬಲಿಕೊಡು; **ಹೈನು** – ಹಾಲು, ಮೊಸರು **ಮೂಢನಂಬಿಕೆ** – ತಿಳುವಳಿಕೆಯಿಲ್ಲದ ನಂಬಿಕೆ; **ಹೊತ್ತಿಗೆ** – ಗ್ರಂಥ (ಪಂಚಾಂಗ); **ನೆಮ್ಮದಿ** –ಸಂತೋಷ; **ತಬ್ಬಲಿ** – ಅನಾಥ

**ಕೃತಿ-1) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1) ಕೋರಹಳ್ಳಿ ಎಂಬ ಗ್ರಾಮದಲ್ಲಿ ವಾಸವಿದ್ದ ದಂಪತಿಗಳ ಹೆಸರೇನು ?

2) ಈ ದಂಪತಿಗಳಿಗೆ ಅಜ್ಜಿ ಏನು ಹೇಳಿದಳು ?

3) ಕುರಿಯನ್ನು ಹಿಡಿದುಕೊಂಡು ಹೊರಟ ದಂಪತಿಗಳಿಗೆ ಕೃಷ್ಣಾಜಿ ಮಾಸ್ತರ ಏನು ಕೇಳಿದರು ?

4) ಕೃಷ್ಣಾಜಿ ಮಾಸ್ತರರು ಏಕೆ ಸಂತೋಷ ಪಟ್ಟರು ?

**ಕೃತಿ-2) ಕಂಸಿನಲ್ಲಿ ಕೊಟ್ಟ ಪದಗಳನ್ನು ಬಳಸಿ ಬಿಟ್ಟಸ್ಥಳಗಳನ್ನು ಪೂರ್ಣಮಾಡಿರಿ.**

(ಕೃಷ್ಣಾಜಿ ಮಾಸ್ತರ, ಮಕ್ಕಳಿಲ್ಲದ, ಸಾತ್ವಿಕ, ನೆಮ್ಮದಿಯಿಂದ, ಮೂಢನಂಬಿಕೆ)

1) ಕೋರಹಳ್ಳಿ ಗ್ರಾಮದಲ್ಲಿ ವಾಸವಿದ್ದ ದಂಪತಿಗಳು ------------ ಸ್ವಭಾವದವರಾಗಿದ್ದರು.


2) ದೇವರಿಗೆ ಪ್ರಾಣಿ ಬಲಿಕೊಡುವುದು ------------ ಆಗಿದೆ.

3) ತಬ್ಬಲಿಯಾದ ವೆಂಕನಿಗೆ ------------------- ಆಶ್ರಯ ನೀಡಿದರು.

4) ಅಂದಿನಿಂದ ಊರ ಜನರೆಲ್ಲರ ---------------------- ಬಾಳತೊಡಗಿದರು.

5) ತಿಪ್ಪಣ್ಣ ಹಾಗೂ ಲಕ್ಕಮ್ಮ ದಂಪತಿಗಳಿ ------------------ ಚಿಂತೆ ಇತ್ತು.

**ಕೃತಿ -3) ಕೆಳಗಿನ ಜಾಲಾಕೃತಿಯನ್ನು ಪೂರ್ಣಮಾಡಿರಿ.**




**ಕೃತಿ -4) ಕೆಳಗಿನ ವಾಕ್ಯಗಳಲ್ಲಿಯ ಗೆರೆ ಹೊಡೆದ ಶಬ್ದಗಳಲ್ಲಿಯ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ**

‘‘ಮಾಧುರಿಯು ಕಾರವಾರದಿಂದ ಬರೆದ ಪತ್ರವನ್ನು ಮನೆಯಲ್ಲಿ ಎಲ್ಲರೂ ಅಕ್ಕರೆಯಿಂದ ಓದಿದರು. ಅವರಿಗೆ ಸಂತೋಷವಾಯಿತು. ಆ ಪತ್ರಕ್ಕೆ ಅವರು ತಕ್ಷಣವೇ, ಉತ್ತರ ಬರೆಯಲು ನಿರ್ಧರಿಸಿದರು.

**ಕೃತಿ -5) ಮೂಢನಂಬಿಕೆಯ ನಿರ್ಮೂಲನೆಗಾಗಿ ನೀವು ಏನು ಮಾಡುತ್ತೀರಿ ಎಂಬುದನ್ನು ಏಳೆಂಟು ಸಾಲುಗಳಲ್ಲಿ ಬರೆಯಿರಿ.**

CQNJK4

10.

# ನಂಟರು

ತೀ. ನಂ. ಶ್ರೀಕಂಠಯ್ಯ

**ಯಾ**ರು ನಂಟರು ?

''ಇದು ಎಂಥ ಪ್ರಶ್ನೆ! ಎಳೆಯ ಮಕ್ಕಳಿಗೆ ಕೂಡ ಯಾರು ನಂಟರು ಎಂದು ಗೊತ್ತಿದೆಯಲ್ಲಾ!'' ಎಂದು ಹಾಸ್ಯ ಮಾಡಬೇಡಿ. ಇದು ಎಷ್ಟು ತೊಡಕಾದ ಸಮಸ್ಯೆ ಎನ್ನುವುದು ಒಂದು ಕ್ಷಣದಲ್ಲಿ ಮನದಟ್ಟಾಗುತ್ತದೆ.

ಮಾವ, ಭಾವ, ಅತ್ತೆ, ಮೈದುನ-ಇವರೆಲ್ಲರೂ ನಂಟರೆಂದು ನೀವು ಬೇಗ ಹೇಳಿಬಿಡಬಹುದು. ರಕ್ತ ಸಂಬಂಧಿಗಳೆಲ್ಲರೂ ನಂಟರೆಂದು ಶಾಸ್ತ್ರಪರಿಷ್ಕೃತವಾದ ಬುದ್ಧಿಯುಳ್ಳವರು ಲಕ್ಷಣವನ್ನೂ ಕಲ್ಪಿಸಬಹುದು. ಆದರೆ ಬಾಂಧವ್ಯದ ರಹಸ್ಯಗಳನ್ನೆಲ್ಲಾ ಒಂದು ಸೂತ್ರದಿಂದ ಕಟ್ಟಿ ಹಾಕುವುದು ಸಾಧ್ಯವಿಲ್ಲ. ತಂದೆ ತಾಯಿಗಳ ರಕ್ತವೇ ನಮ್ಮ ದೇಹದಲ್ಲೆಲ್ಲಾ ಹರಿಯುತ್ತಿದೆಯಷ್ಟೆ. ಇವರು ನಂಟರೆ ? ಈಗಿನ ವಿದ್ಯಾವಂತರಾದ ನೀವು ನಿಮ್ಮ ಮುಪ್ಪಿನ ತಂದೆಯೊಡನೆ ಬೆಂಗಳೂರಿನಲ್ಲಿ ಪೇಟೆಯ ಕಡೆಗೆ ಹೊರಟಿರಿ ಎನ್ನಿ. ಆಗ ನಿಮ್ಮ ಮಿತ್ರರೊಬ್ಬರು ಎದುರಿಗೆ ಬಂದು ಕಂಡು ''ಇವರು ಯಾರು'' ಎಂದು ನಿಮ್ಮ ತಂದೆಯ ಕಡೆಗೆ ತೋರಿಸಿ ಕೇಳಿದಾಗ, ನೀವು ''ನಮ್ಮ ನಂಟರು'' ಎಂದು ಹೇಳಿಬಿಟ್ಟರೆ ಆಗುವ ಅನರ್ಥವನ್ನು ಊಹಿಸುವುದಾದರೂ ಸಾಧ್ಯವೇ ? ಕೆಲವು ಮಂದಿ ಸತ್ಪುತ್ರರು ಇಂಥ ಉತ್ತರಗಳನ್ನು ಕೊಟ್ಟ ಮಾತ್ರದಿಂದಲೇ ಎಷ್ಟೋ ಸಂಸಾರಗಳು ಒಡೆದು ಹೋಗಿಲ್ಲವೇ ?

''ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ'' ಎಂದು ಹೇಳುವುದು ಗಾದೆಯಲ್ಲಿ ಮಾತ್ರ. ಉಪ್ಪು ರುಚಿಯೆಂದು ಬರಿಯ ಉಪ್ಪನ್ನೇ ಒಂದು ಹಿಡಿಯಷ್ಟು ಮುಕ್ಕಿ; ತಾಯಿ ಬಂಧುವೆಂದು ಆಕೆಯನ್ನು ಬಂಧುವಿನಂತೆಯೇ ಕಂಡು ಕರೆಯಿರಿ. ಆಗ ಗೊತ್ತಾಗುತ್ತದೆ! ಉಪ್ಪು ರುಚಿಗೆ ಮೀರಿದ್ದು; ತಾಯಿ ಬಂಧುಗಳಿಗೆ ಮೀರಿದವಳು.

ತಂದೆ ತಾಯಿಗಳ ಮಾತಾಯಿತು. ಮಕ್ಕಳೊ ? ತಂದೆಯನ್ನು ''ನಂಟರು'' ಎಂದಲ್ಲ, ''ನಮ್ಮವರು'' ನಮ್ಮ ಮನೆಯ ದೇವರ ಪೂಜೆಯ ಬ್ರಾಹ್ಮಣರು''ಎಂದು ಕೂಡ ಕರೆದ ಪುಣ್ಯಾತ್ಮರಿರಬಹುದು. ಆದರೆ ಎಂಥ ಕಟುಕನೇ ಆಗಲಿ, ತನ್ನ ಮಗನನ್ನು ''ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಲಿಲ್ಲ'' ಎಂದು ಬೈದಿರಬಹುದೇ ಹೊರತು, ''ನೀನು ನನ್ನ ನಂಟ ಎಂದು ಹೇಳಿದ ಪಾಪವನ್ನು ಕಟ್ಟಿಕೊಂಡಿರಲಾರನು.

ಇನ್ನು ಹೆಂಡತಿಯನ್ನು ''ನಂಟಳು'' ಎನ್ನಬಹುದೆ? ಕೇಳಿದ ಕೂಡಲೆ ನೀವೇ ನಕ್ಕುಬಿಡುತ್ತೀರಿ. ವಿಚಾರಮಾಡುವ ಪ್ರಸಂಗವೇ ಇಲ್ಲ. ಬುದ್ಧಿಗಿಂತ ಮೊದಲು ನಿಮ್ಮ ಹೃದಯವೇ ಇಲ್ಲಿ ತೀರ್ಪನ್ನು ಹೇಳಿಬಿಡುತ್ತದೆ.

ಹೋಗಲಿ. ಅಣ್ಣ ತಮ್ಮಂದಿರನ್ನು ನಂಟರೆನ್ನಬಹುದೆ ? ''ಹುಟ್ಟ ಹುಟ್ಟುತ ಅಣ್ಣತಮ್ಮಂದಿರು, ಬೆಳೆಯಬೆಳೆಯುತ ದಾಯಾದಿಗಳು''. ಅಣ್ಣತಮ್ಮಂದಿರು ಗ್ರಹಚಾರ ತಪ್ಪಿದರೆ ದಾಯಾದಿಗಳಾಗುವರೇ ಹೊರತು ನಂಟರು ಮಾತ್ರ ಎಂದಿಗೂ ಆಗುವುದಿಲ್ಲ. ದಾಯಾದಿಗಳಿಗೂ ನಂಟರಿಗೂ ಇರುವ ವ್ಯತ್ಯಾಸವನ್ನು ನೋಡಿ: ದಾಯಾದಿಗಳಲ್ಲಿ ನಿಮಗೆ ದ್ವೇಷಭಾವ, ನಂಟರಲ್ಲಿ ಉದಾಸೀನಭಾವ. (ಪ್ರೀತಿಯೂ ಕೆಲವು ಕಡೆ ಇದ್ದೀತು; ಆದರೆ ಅದು ಬಹು ವಿರಳ) ನೀವು ಅಪ್ಪಿ ತಪ್ಪಿ ಕ್ರೂರಿಗಳಾದರೆ ದಾಯಾದಿಗಳಿಗೆ ಕೇಡು ಬಯಸುವಿರಿ, ಅವರಿಗೆ ಸಿರಿ ಬಂದರೆ ಕರುಬುವಿರಿ. ಅವರೂ ಹಾಗೆಯೇ ಅಸಲಿಗೆ ಬಡ್ಡಿಯನ್ನು ಸೇರಿಸಿ ನಿಮ್ಮ ಮೇಲೆ ಅವರು ವಿಷ ಕಾರುವರು. ನಂಟರ ವಿಚಾರ ಹಾಗಲ್ಲ. ಅವರ ಮೇಲೆ ನಿಮಗೆ ದ್ವೇಷವಿಲ್ಲ.

ಅವರು ಮನೆಗೆ ಬಂದರೆ ಉಪಚಾರ ಮಾಡುವಿರಿ. ಯೋಗಕ್ಷೇಮವನ್ನು ಕೇಳುವಿರಿ. ಯಾವ ದಾಯಾದಿಗಳೇ ಆಗಲಿ, ಪ್ರಾಣ ಹೋಗುವಂತಿದ್ದರೂ ನಿಮ್ಮ ಮನೆಯ ಹೊಸಿಲನ್ನಾದರೂ ಮೆಟ್ಟುವರೇ!

ಹಾಗಾದರೆ ಯಾರು ನಂಟರು ?

ತಂದೆ ತಾಯಿಗಳಲ್ಲ, ಹೆಂಡತಿ ಮಕ್ಕಳಲ್ಲ, ಅಣ್ಣ ತಮ್ಮಂದಿರಲ್ಲ, ಅಕ್ಕ ತಂಗಿಯರಲ್ಲ, ಇತರ ರಕ್ತ ಸಂಬಂಧಿಗಳು ನಮಗೆ ನಂಟರು. ತಂದೆಯ ತಂಗಿ ನಿಮ್ಮ ಸೋದರತ್ತೆಯಾಗಬೇಕು. ಹೆಂಡತಿಯ ತಂದೆ ನಿಮ್ಮ ಮಾವನಾಗಬೇಕು. ಇವರು ನಿಮ್ಮ ನಂಟರು. ಹೀಗೆಯೇ ಪ್ರತ್ಯಕ್ಷ ರಕ್ತ ಸಂಬಂಧವುಳ್ಳವರನ್ನು ನಂಟರ ಪಟ್ಟಿಯಿಂದ ತೆಗೆದು ಹಾಕಬೇಕು. ಒಂದು ತಲೆಯಾದರೂ ದೂರದ ಸಂಬಂಧದವರೇ ಬಾಂಧವ್ಯದ ಪೂಜ್ಯತೆಗೆ ಅಧಿಕಾರಿಗಳು.

---

### ಶಬ್ದಗಳ ಅರ್ಥ

**ನಂಟರು** = ಬೀಗರು; **ಪರಿಷ್ಕೃತ** = ತಿದ್ದಿದ, ಸರಿಪಡಿಸಿದ; **ಅನರ್ಥ** = ಕೇಡು, ಅರ್ಥವಲ್ಲದ;
**ದಾಯಾದಿ** = ರಕ್ತಸಂಬಂಧಿ; **ಕ್ರೂರಿ** = ಕರುಣೆಯಿಲ್ಲದ; **ಕರಬು** = ಹಲಬು

**ಕೃತಿ 1) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರಿಸಿರಿ.**

1) ನಂಟರು ಎಂದರೆ ಯಾರು

2) ತಂದೆಯು ಯಾವ ಪಾಪವನ್ನು ಕಟ್ಟಿಕೊಳ್ಳಲಾರನ

3) ದಾಯಾದಿ ಮತ್ತು ನಂಟರಿಗಿರುವ ವ್ಯತ್ಯಾಸ ಬರೆಯಿ

4) ನಂಟರ ಮೇಲೆ ನಿಮಗೆ ಏನಿರುವದಿಲ

**ಕೃತಿ 2) ನಿಮ್ಮ ಮನೆಗೆ ನಂಟರು ಬಂದಾಗ ಅವರನ್ನು ಮನೆಯಲ್ಲಿ ಹೇಗೆ ಉಪಚರಿಸುತ್ತಾರೆ ಎಂಬುದರ ಬಗ್ಗೆ ಐದಾರು ವಾಕ್ಯಗಳಲ್ಲಿ ಬರೆಯಿರಿ.**

**ಕೃತಿ 3) I) ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.**

1) ರುಚಿಯಿಲ್ಲ ತಾಯಿಗಿಂತ ಉಪ್ಪಿಗಿಂತ ಬಂಧುವಿಲ್ಲ.

2) ಮನೆಯ ದೇವರ ನಮ್ಮ ಬ್ರಾಹ್ಮಣರು ಪೂಜೆಯ

3) ಹೆಂಡತಿಯ ಮಾವನಾಗಬೇಕು, ನಿಮ್ಮ ತಂದೆ

4) ನಕ್ಕು ಬಿಡುತ್ತೀರಿ ಕೇಳಿದ ನೀವೇ ಕೂಡಲೆ

**II) ಕೆಳಗಿನ ವಾಕ್ಯಗಳನ್ನು ಅನುಕ್ರಮವಾಗಿ ಬರೆಯಿರಿ.**

1) ತಂದೆಯ ತಂಗಿ ನಿಮ್ಮ ಸೋದರತ್ತೆಯಾಗಬೇಕ

2) ''ನೀನು ನನ್ನ ನಂಟ

3) ಅವರು ಮನೆಗೆ ಬಂದರೆ ಉಪಚಾರ ಮಾಡು

4) ''ಇದು ಎಂಥ ಪ್ರಶ್ನೆ

**ಕೃತಿ 4) i) ಕೆಳಗಿನ ಶಬ್ದಗಳಿಗೆ ಚೌಕಟ್ಟಿನಲ್ಲಿ ಕೊಟ್ಟಿರುವ ಶಬ್ದಗಳನ್ನು ಆಯ್ದು ಜೋಡಿಸಿರಿ.**

| |
|---|
| ತಾಯಿ, ತಮ್ಮ<br>ಅತ್ತೆ ಅಕ್ಕ |

ಮಾವ ☐ ಅಣ್ಣ ☐

ತಂದೆ ☐ ತಂಗಿ ☐

**II) ಕೆಳಗಿನ ಶಬ್ದಗಳಿಗೆ ಸರಿ ಹೊಂದುವ ಪದ ಜೋಡಿಸಿ ಬರೆಯಿರಿ.**

| | 'ಅ' | 'ಬ' | | ಸರಿ ಹೊಂದಿದ ಪದ |
|---|---|---|---|---|
| 1) | ತಂದೆಯ ತಂಗಿ | ಭಾವ | = | |
| 2) | ಹೆಂಡತಿಯ ತಂದೆ | ಮೈದುನ | = | |
| 3) | ಅಕ್ಕನ ಗಂಡ | ಮಾವ | = | |
| 4) | ಗಂಡನ ತಮ್ಮ | ಸೋದರತ್ತೆ | = | |

**III) ನಿಮಗೆ ಗೊತ್ತಿರುವ ಎರಡು ಗಾದೆಮಾತುಗಳನ್ನು ಬರೆಯಿರಿ.**

1) ☐

2) ☐

**ಕೃತಿ 5) ಅ) ಕೆಳಗಿನ ಉದಾಹರಣೆಯಂತೆ ಐದು ತದ್ಧಿತಾಂತ ಶಬ್ದಗಳನ್ನು ಬರೆಯಿರಿ**

**ಉದಾ** - ವಿದ್ಯಾ + ವಂತ = ವಿದ್ಯಾವಂತ

1)

2)

3)

4)

5)

**ಬ) ಕೆಳಗಿನ ಶಬ್ದಗಳಿಗೆ ಲಿಂಗ ವಚನ ವಿಭಕ್ತಿಗಳನ್ನು ಬರೆಯಿರಿ**

| | ಲಿಂಗ | ವಚನ | ವಿಭಕ್ತಿ |
|---|---|---|---|
| i) ಮಾವ | | | |
| ii) ತಮ್ಮಂದಿರು | | | |

**ಕ) ಕೆಳಗಿನ ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯಾಪದ ಗುರುತಿಸಿ**

ರಮೇಶನು ಮಾವಿನ ಹಣ್ಣನ್ನು ತಿಂದನು.

**ಡ) ಕೆಳಗಿನ ವಾಕ್ಯಗಳಲ್ಲಿ ಕಾಲಗಳನ್ನು ಗುರುತಿಸಿ**

I) ನಿಮ್ಮ ಗೆಳೆಯನ ಮನೆಗೆ ನೆಂಟರು ಬಂದು ಹೋದರು.

II) ಅಕ್ಕನು ನೆಂಟರ ಊರಿಗೆ ಹೋಗುತ್ತಿದ್ದಾಳೆ.

III) ಭಾವನನ್ನು ದೀಪಾವಳಿ ಹಬ್ಬಕ್ಕೆ ಕರೆಸುವರು.

**ಉಪಕ್ರಮ** - ನೀವು ನೆಂಟರ ಮನೆಗೆ ಹೋದಾಗ ಆದ ಅನುಭವಗಳನ್ನು ಐದಾರು ವಾಕ್ಯಗಳಲ್ಲಿ ಬರೆಯಿರಿ

CQXFLR

# 11. ಜನಸೇವೆ

ಚಿ. ಶ್ರೀ. ಕುಲಕ

ವಸಂತಪುರ ಎಂಬ ಪಟ್ಟಣವಿತ್ತು. ಅಲ್ಲಿ ಧನರಾಜ ಎಂಬ ಖ್ಯಾತ ವಕೀಲರಿದ್ದರು. ಅವರು ತಮ್ಮ ವಾಕ್ ಚಾತುರ್ಯ ಮತ್ತು ಪಾಂಡಿತ್ಯದ ಬಲದಿಂದ ಬಹಳ ಚಿರಪರಿಚಿತರಾಗಿದ್ದರು. ಒಂದು ಸಲ ಅವರ ಆರು ವರ್ಷದ ಮಗ ಪ್ರದೀಪನಿಗೆ ಕಾಯಿಲೆಯಾಯಿತು. ವಕೀಲರು ಮಗುವನ್ನು ಕರೆದುಕೊಂಡು ಡಾ|| ಸುರೇಶ ಎಂಬ ವೈದ್ಯರ ಬಳಿಗೆ ಬಂದರು. ವೈದ್ಯರು ಮಗುವನ್ನು ಪರೀಕ್ಷೆ ಮಾಡಿ ಚಿಕಿತ್ಸೆ ನೀಡಿದರು. ಮಗುವಿಗೆ ನಿದ್ರೆಹತ್ತಿತು. ಆಗ ವೈದ್ಯರು ಮತ್ತು ವಕೀಲರು ಲೋಕಾಭಿರಾಮವಾಗಿ ಮಾತನಾಡುತ್ತ ಕುಳಿತರು.

ವೈದ್ಯ – ಏನ್ರೀ ವಕೀಲರೆ, ಇತ್ತಿತ್ತಲಾಗಿ ಮನೆಮನೆಗೆ ಎಲ್.ಎಲ್.ಬಿ ವಕೀಲ ಎಂದು ಬೋರ್ಡು ಹಾಕುತ್ತಾರೆ. ಜನಗಳಿಗೆ ರೊಕ್ಕ ಹೆಚ್ಚಾದಂತೆ ಕಾಣುತ್ತದೆ.

ವಕೀಲ – ರೊಕ್ಕ ಯಾರಿಗೆ ಹೆಚ್ಚಾಗುತ್ತದೆ ? ಈಗಿನ ಕಾಲದಲ್ಲಿ ರೊಕ್ಕವೇ ಮುಖ್ಯ. ಈ ಬೋರ್ಡುಗಳು ಭಾರತೀಯರ ಶಿಕ್ಷಣದ ಮಟ್ಟವನ್ನು ಸೂಚಿಸುತ್ತವೆ.

ವೈದ್ಯ – ವಕೀಲವಾಗಿ ಮಾಡುವುದೇನು? ಡಾಕ್ಟರರಾಗಿದ್ದರೆ ಆರೋಗ್ಯವನ್ನಾದರೂ ಕಾಪಾಡಬಹುದು.

ವಕೀಲ – ವೈದ್ಯರು ಹೆಚ್ಚಾದಂತೆ ರೋಗಗಳೂ ಹೆಚ್ಚಾಗುತ್ತಲೇ ಇವೆ. ಹಿಂದಿನ ಕಾಲದಲ್ಲಿ ರೋಗಗಳೂ ಇರಲಿಲ್ಲ. ವೈದ್ಯರೂ ಇರಲಿಲ್ಲ.

ವೈದ್ಯ – ಹೌದೌದು. ಇಂದು ವಕೀಲರ ಸಂಖ್ಯೆ ಹೆಚ್ಚಾದಂತೆಲ್ಲ ಸಮಾಜದಲ್ಲಿ ಕಲಹ ಕೇಸುಗಳೂ ಹೆಚ್ಚುತ್ತಲೇ ಇವೆ. ಹಿಂದಿನ ಕಾಲದಲ್ಲಿ ಜನರು ಪರಸ್ಪರ ಸ್ನೇಹಭಾವದಿಂದ ಬಾಳುತ್ತಿದ್ದರು. ಆ ಭಾವದಿಂದ ನಡೆದುಕೊಂಡರೆ ನಮ್ಮ ದೇಶವು ಉನ್ನತಮಟ್ಟವನ್ನು ಹೊಂದುವದು.

ವಕೀಲ – ಹೌದು ವೈದ್ಯರೇ. ಆದರೆ ಆ ಸ್ನೇಹಭಾವ ಎಲ್ಲಿಯೂ ಕಂಡುಬರುವುದಿಲ್ಲ.

ವೈದ್ಯ – ನೀವು ಹೇಳುವುದು ನಿಜ ವಕೀಲರೆ, ನಾವು ನಮ್ಮ ರಾಷ್ಟ್ರವನ್ನು ಬಲಪಡಿಸಲು ಹೆಣಗಾಡಬೇಕು. ಧನಪಿಶಾಚಿಯ ಬೆನ್ನು ಹತ್ತಿ ನಾವು ಹಾಳಾಗಿ ಹೋಗಿರುವೆವು.

ವಕೀಲ – ಹೌದು ವೈದ್ಯರೆ, ನಾವಾದರು ಇನ್ನು ಮುಂದೆ ಪವಿತ್ರ ಭಾವನೆಯನ್ನು ಇಟ್ಟುಕೊಂಡು ನಿರಹಂಕಾರ ವೃತ್ತಿಯುಳ್ಳವರಾಗಿ ಜೀವಿಸೋಣ.

ವೈದ್ಯ – ಪುಂಡ–ಪೋಕರಿಗಳ ಕೈಗೆ ಸಿಕ್ಕು ಅದೆಷ್ಟು ಜನ ನಿರಪರಾಧಿಗಳು ಇಂದು ಕಾರಾಗ್ರಹದಲ್ಲಿ ಕೊಳೆಯುತ್ತಿಲ್ಲ. ಅಂಥವರಿಗೆ ನ್ಯಾಯ ದೊರಕಿಸಿಕೊಡಲು ನೀವು ಶತ ಪ್ರಯತ್ನ ಮಾಡಿರಿ.

ವಕೀಲ – ಹೌದು ಡಾಕ್ಟರರೇ, ಇನ್ನು ಮುಂದೆ ಯುವಕರನ್ನು ಜಾಗೃತಗೊಳಿಸಿ ಸಮಾಜದಲ್ಲಿ ಶಾಂತಿಯ ವಾತಾವರಣವನ್ನು ನಿರ್ಮಾಣ ಮಾಡಲು ನಾನು ಸದಾ ಯತ್ನಿಸುತ್ತೇನೆ.

ವೈದ್ಯ – ಇದು ನಿತ್ಯ ಸತ್ಯವಾದ ಮಾರ್ಗ. ಸುಶಿಕ್ಷಿತರ ಕರ್ತವ್ಯ.

ವಕೀಲ – ಹೌದು ಡಾಕ್ಟರರೇ, ನಾವು ಹಣಕ್ಕೆ ಆಶೆ ಪಡದೆ, ದುಷ್ಟ ಶಕ್ತಿಗಳಿಗೆ ಹೆದರದೆ, ನ್ಯಾಯ ದೇವತೆಯ ಸೇವೆ ಮಾಡಬೇಕು. ನಾನು ಅದನ್ನು ಮಾಡಿ ತೋರಿಸುತ್ತೇನೆ.

ವೈದ್ಯ – ಆನಂದ! ವಕೀಲರೇ. ಅತೀ ಆನಂದ ನಿಮ್ಮ ನಿರ್ಧಾರವನ್ನು ಕೇಳಿ ನನ್ನ ಮನಸ್ಸಿನಲ್ಲಿಯೂ ವಿದ್ಯುತ್ ಸಂಚಾರವಾದಂತಾಯಿತು.

ವಕೀಲ – ಏನು ಡಾಕ್ಟರರೇ ?

ವೈದ್ಯ – ರೋಗಿಗಳ ಹಿನ್ನೆಲೆಯನ್ನು ಅರ್ಥಮಾಡಿಕೊಂಡು ಅವರಿಗೆ ಉಚಿತವಾದ ಚಿಕಿತ್ಸೆಯನ್ನು ಕೊಡುತ್ತೇನೆ. ಅತೀ ಕಡಿಮೆ ಖರ್ಚಿನಲ್ಲಾಗಲಿ ಅಥವಾ ಸಂಘ ಸಂಸ್ಥೆಗಳ ನೆರವಿನಿಂದಾಗಲಿ, ರೋಗಿಗಳ ರೋಗಗಳನ್ನು ಗುಣಪಡಿಸಲು ಕಾರ್ಯೋನ್ಮುಖನಾಗುತ್ತೇನೆ.

ವಕೀಲ – ಸಂತೋಷ. ಅತೀ ಸಂತೋಷ ಡಾಕ್ಟರರೇ.

ವೈದ್ಯ – ನೀವು ಯುವ ಜನತೆಯಲ್ಲಿ ದೇಶದ ಸ್ಥಿತಿಗತಿ, ಭದ್ರತೆ, ದೇಶಾಭಿಮಾನ, ರಕ್ತದಾನ, ಅಂಗದಾನ ಮುಂತಾದ ವಿಷಯಗಳ ಬಗ್ಗೆ ತಿಳುವಳಿಕೆ ಮೂಡಿಸಿರಿ. ನಾನು ಆ ಶಕ್ತಿಯನ್ನು ದೇಶವಾಸಿಗಳ ಹಿತಕ್ಕಾಗಿ ಬಳಕೆಯಾಗುವಂತೆ ಮಾಡುತ್ತೇನೆ.

ವಕೀಲ – ಆಗಲಿ ಸರ್.

ವೈದ್ಯ – ದೇಶದ ಸುಶಿಕ್ಷಿತರೆಲ್ಲ ಸತ್ಯ ಮಾರ್ಗದಲ್ಲಿ ನಡೆದರೆ ನಮ್ಮ ದೇಶ ಸದೃಢವಾಗಿ ಜಗತ್ತಿನಲ್ಲಿಯೇ ಖ್ಯಾತಿ ಪಡೆಯುತ್ತದೆ.

ವಕೀಲ – ಆಗಲಿ ಡಾಕ್ಟರೆ, ಸುಶಿಕ್ಷಿತರಾದ ನಾವೆಲ್ಲ ಒಗ್ಗಟ್ಟಾಗಿ ದೇಶದ ಪ್ರಗತಿಗಾಗಿ ದುಡಿಯೋಣ.

---

## ಶಬ್ದಗಳ ಅರ್ಥ :

**ವಾಸಿಯಾಗು** – ಗುಣವಾಗು; **ಕುಬೇರ** – ಶ್ರೀಮಂತ; **ಧನಪಿಶಾಚಿ** – ಜಿಪುಣ; **ಜನಾರ್ಧನ** – ದೇವರು

**ಕೃತಿ 1) ಅ) ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ವಕೀಲರು ವೈದ್ಯರ ಬಳಿಗೆ ಏಕೆ ಬಂದಿದ್ದರು

2) ಮನೆ ಮನೆಗೆ ಯಾವ ಬೋರ್ಡು ನೇತು ಹಾಕುತ್ತಾರೆ

3) ವಕೀಲರು ಜಗತ್ತು ಹೇಗೆ ಇರುವುದೆಂದು ಹೇಳುವರು

4) ವೈದ್ಯರ ಕರ್ತವ್ಯ ಯಾವುದು

5) ವೈದ್ಯರು ನಾವು ಹೇಗೆ ಜೀವಿಸೋಣವೆಂದು ಹೇಳುತ್ತಾರೆ

**ಬ) ಕೆಳಗೆ ಕಂಸಿನಲ್ಲಿ ಕೊಟ್ಟ ಯೋಗ್ಯ ಪದಗಳನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ.**

(ಧನ ಪಿಶಾಚಿ, ಕುಬೇರರೇ, ಮನುಷ್ಯರು, ಸ್ವಜನದ್ರೋಹ, ಜನಾರ್ಧನ, ರೋಗಗಳು)


1) ವೈದ್ಯರೂ ----------------

2) ------------- ಯ ಬೆನ್ನು ಹತ್ತಿ ನಾವು ಹಾಳಾಗಿರುವೆವು.

3) ಮೊದಲಿನ ಕಾಲದಲ್ಲಿ ವೈದ್ಯರಿರಲಿಲ್ಲ ------------ ಇರಲಿಲ್ಲ.

4) ಈಗಿನ ಡಾಕ್ಟರರು ------------ ಸರಿ.

**ಕೃತಿ 2) ಕೆಳಗಿನ ಶಬ್ದಜಾಲವನ್ನು ಪೂರ್ಣಗೊಳಿಸಿರಿ.**





**ಕೃತಿ 3) ಕೆಳಗಿನ ವಿಷಯದ ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.**

ನಾನು ವೈದ್ಯನಾದರೆ -------------

ಅಥವಾ

ನಾನು ವಕೀಲನಾದರೆ ------------

**ಕೃತಿ 4) ವೈದ್ಯ , ವಕೀಲ ಇಂತಹ ಇತರ ವೃತ್ತಿಗಳನ್ನು ಕೆಳಗಿನ ಶಬ್ದ ಜಾಲದಲ್ಲಿ ತುಂಬಿರಿ.**



12.

# ಜೇನ್ನೊಣ

**ಕೆ. ವಿಠ್ಠಲ ಶೆಣೈ**

ಪ್ರಾಚೀನ ಈಜಿಪ್ಟಿನ ಜನರಿಂದ ಹಿಡಿದು ಅರ್ವಾಚೀನ ಇಂಜಿನಿಯರುಗಳವರೆಗೂ, ಜೇನ್ನೊಣದ ಕಾರ್ಯ ಕುಶಲತೆಗೆ ಮನಸೋಲದವರೇ ಇಲ್ಲ. ಜೇನ್ನೊಣದ ವಸತಿಯ ವ್ಯವಸ್ಥೆ, ಅವುಗಳ ಅದ್ಭುತ ಕ್ರಿಯಾಶಕ್ತಿಗಳು ಶತಮಾನಗಳಿಂದಲೂ ಮಾನವನಿಗೆ ಆಶ್ಚರ್ಯ, ದಿಗ್ಭ್ರಮೆ ಉಂಟುಮಾಡುತ್ತ ಬಂದಿವೆ.

ಅದರ ಗೂಡಿನ ಒಳಗಡೆ ನಸುಗತ್ತಲು. ಅಲ್ಲಿ ನಡೆಯುವ ಚಟುವಟಿಕೆಗಳೋ ನೂರಾರು. ವಸತಿಯಲ್ಲಿ 50,000 ಜೇನ್ನೊಣಗಳಿದ್ದರೇನಾಯಿತು? ಒಂದಿಷ್ಟು ಗೊಂದಲ, ಗಲಿಬಿಲಿ ಅಲ್ಲಿ ಕಾಣಿಸದು. ಇಡೀ ಸಮಾಜದ ಉನ್ನತಿಗೆ ಏನೆಲ್ಲ ಬೇಕೋ ಅಷ್ಟೆಲ್ಲ ಅದರ ಕೆಲಸ. ಅದರ ವಸತಿಯಲ್ಲಿ ಬಹುಪಾಲು ಜೇನುಗಳು ಕೆಲಸಗಾರರೇ. ಹೆಸರೇ ಸೂಚಿಸುವಂತೆ–ಮಕರಂದ, ಪರಾಗ ಸಂಗ್ರಹ ಮಾಡುವ ಕೆಲಸ ಅವುಗಳದ್ದು. ಮೇಣದಿಂದ ಜೇನು ಹುಟ್ಟನ್ನು ನಿರ್ಮಿಸುವುದು, ಮರಿಜೇನುಗಳ ಲಾಲನೆ ಪಾಲನೆ, ಇವೆಲ್ಲ ಅವುಗಳದ್ದೇ ಕೆಲಸ. ಇಂಥ ಅನೇಕ ಕಾರ್ಯಗಳಲ್ಲಿ ಕೆಲಸಗಾರ ಹುಳುಗಳು ಸದಾ ಮಗ್ನ. ಆದರೇನು? ಅವುಗಳಿಂದಲೇ ಅವುಗಳ ಕುಲ ವೃದ್ಧಿಯಾಗುವುದೆಂದು ತಿಳಿದರೆ ತಪ್ಪಾದೀತು. ಕಾರಣ, ಈ ಕೆಲಸಗಾರ ಹುಳುಗಳು ಮೊಟ್ಟೆಯಿಡಲಾರವು. ಅವುಗಳಿಂದ ಕೆಲಸಗಾರ ಮರಿಗಳೂ ಹುಟ್ಟುವಂತಿಲ್ಲ. ಜೇನು ಕೊಡುವ ಪ್ರತಿಯೊಂದು ಹುಟ್ಟಿನಲ್ಲೂ ಒಂದು ರಾಣಿ ಹುಳು ಇದ್ದೇ ತೀರಬೇಕು. ಮೊಟ್ಟೆಯಿಡುವ ಕೆಲಸವೆಲ್ಲ ಆಕೆಗೇ ಮೀಸಲು.

ರಾಣಿ ಹುಳು ದಿನವೊಂದಕ್ಕೆ ಮೂರುಸಾವಿರಕ್ಕೂ ಮಿಕ್ಕಿ ಮೊಟ್ಟೆಯಿಡುತ್ತದೆ. ಫಲವಂತ ಮೊಟ್ಟೆಗಳಿಂದ ಗಂಡು, ಫಲವಂತವಲ್ಲದವುಗಳಿಂದ ಹೆಣ್ಣು (ಮುಂದಿನ ರಾಣಿ ಮತ್ತು ಕೆಲಸಗಾರ್ತಿಯರು) ಹುಳುಗಳು ಹುಟ್ಟುತ್ತವೆ. ರಾಣಿಯ ಹಿತಾಸಕ್ತಿಗಳನ್ನು ನಿರಂತರ ಕಾಪಾಡುವವರೂ ಕೆಲಸಗಾರರೇ. ಅವು ರಾಣಿಗೆ 'ರಾಜಲೇಹ್ಯ'ವನ್ನು ಉಣಿಸುತ್ತವೆ. ಚಳಿಗಾಲದಲ್ಲಿ ಇಡೀ ವಸಾಹತಿನ ಉಪಯೋಗಕ್ಕೆಂದು ಜೇನನ್ನು ಕೂಡಿಡುತ್ತವೆ–ಅದಕ್ಕೆಂದೇ ಮೀಸಲಾದ ಕೋಣೆಗಳಲ್ಲಿ. ಚಳಿಗಾಲ ಬಂತೆಂದರೆ ಗಂಡು ಜೇನ್ನೊಣಗಳಿಗೆ ಹುಟ್ಟದಲ್ಲಿ ಸ್ಥಾನವಿಲ್ಲ. ಅವನ್ನು ಕೆಲಸಗಾರ ಹುಳುಗಳು ಹೊರಕ್ಕೆ ನೂಕುತ್ತವೆ.

ಕೃತಕ ಗೂಡನ್ನು ರಚಿಸಿ, ಜೇನ್ನೊಣಗಳನ್ನು ಸಾಕಿ, ಜೇನುತುಪ್ಪ ಮತ್ತು ಮೇಣ ಪಡೆಯಲು ಮನುಷ್ಯ ಕಲಿತು ಬಹುದಿನಗಳಾದುವು. ಗ್ರಾಮ್‌ಫೋನ್ ರಿಕಾರ್ಡಿನಿಂದ ಹಿಡಿದು ಮುಂಬತ್ತಿಯವರೆಗೆ ಎಷ್ಟೋ ವಸ್ತುಗಳನ್ನು ಜೇನುಮೇಣದಿಂದ ತಯಾರಿಸಬಹುದು. ಜೇನುತುಪ್ಪ ಹೊಂಬಣ್ಣದ ದಟ್ಟ ದ್ರವ. ಸಕ್ಕರೆಯ ಬಳಕೆ ಪ್ರಾರಂಭವಾದುದು ಅದರಿಂದಲೇ ಎನ್ನುತ್ತಾರೆ. ಒಂದು ರಾತ್ತಲ್ಲ ಅಪ್ಪಟ ಜೇನುತುಪ್ಪವನ್ನು ಅಂಗಡಿಯಿಂದ ಕೊಂಡುಕೊಳ್ಳುವಾಗ, ಅದರ ಉತ್ಪಾದನೆಯಲ್ಲಿ ಎಷ್ಟು ಶ್ರಮ ವ್ಯಯವಾಗಿದೆಯೆಂದು ನೀವು ಊಹಿಸಲು ಕಷ್ಟವಾದೀತು. ಕೆಲಸಗಾರ ಜೇನ್ನೊಣಗಳ ದುಡಿಮೆಯನ್ನು ಬಿಡದೆ ಕೆಲಗಂಟೆ ಕಾಲ ವೀಕ್ಷಿಸಿದಲ್ಲಿ ಜೇನು ತಯಾರಿಕೆಯ ಕೆಲವು ಅಂಶಗಳು ಮನವರಿಕೆಯಾದೀತು.

ಜೇನು ತಯಾರಾಗುವುದು ಹೂಗಳ ಮಕರಂದದಿಂದ. ಮಕರಂದವನ್ನು ಹುಡುಕಿ ಸಂಪಾದಿಸಿ ತರುವವರು ಕೆಲಸಗಾರರು. ಆ ಬಗ್ಗೆ ಕೆಲಸಗಾರ ಹುಳುಗಳು ಹುಟ್ಟದಿಂದ ಮೈಲುಗಟ್ಟಲೆ ದೂರ ಪ್ರಯಾಣ ಮಾಡಬೇಕಾಗುವುದು. ಹೂವಿನಲ್ಲಿ ಮಕರಂದವಿದೆಯೆಂದು ಗೊತ್ತಾದರೆ ಸರಿ, ತಕ್ಷಣ ಅದರ ಮೇಲೆ ಜೇನ್ನೊಣ ಎರಗುವುದು. ಮಕರಂದದ ತಾಣವನ್ನು ಗುರುತಿಸುವ ತನಕ ದಳದ ಮೇಲೆ ಅತ್ತಿತ್ತ ಚಲಿಸುವುದು. ಅದರ ನಾಲಗೆ ಹೀರುವ ನಳಿಕೆಯಂತಿದೆ. ಹಾಗೆ ಹೀರಿದ ಮಕರಂದ ಹೋಗಿ ಸೇರುವುದು–ಜೇನುಕೋಶ ಅಥವಾ ಎರೆ ಚೀಲವನ್ನು ಒಂದು ಹೂವಿನ ಮಕರಂದವನ್ನು ಪೂರ್ತಿ ಹೀರಿದ ಮೇಲೆ ಇನ್ನೊಂದಕ್ಕೆ, ಹೀಗೆ ಜೇನುಕೋಶ ತುಂಬುವವರೆಗೂ, ಜೇನ್ನೋಣ ಹೂವಿಂದ ಹೂವಿಗೆ ಹಾರಾಡುತ್ತಲೇ ಇರುತ್ತದೆ.

ಜೇನ್ನೊಣ ಗೂಡಿಗೆ ವಾಪಸಾಗುವಷ್ಟರಲ್ಲೇ, ಅದರ ಶರೀರದಲ್ಲಿರುವ ವಿವಿಧ ದ್ರವ್ಯಗಳು ಆ ಮಕರಂದವನ್ನು ಜೇನುತುಪ್ಪವನ್ನಾಗಿ ಪರಿವರ್ತಿಸುವ ಕಾರ್ಯದಲ್ಲಿ ನಿರತವಾಗಿರುತ್ತವೆ.

ಕೆಲಸಗಾರ ಹುಳು ಹುಟ್ಟಿಗೆ ಮರಳುತ್ತಲೇ, ಇತರ ಕೆಲಸಗಾರ ಮರಿಗಳು ಅದನ್ನು ಸಂಧಿಸುವುವು. ಜೇನು ನೀರಾದ ಮಕರಂದವನ್ನು ಮರಿಗಳ ದೇಹಕ್ಕೆ ವರ್ಗಾವಣೆ ಮಾಡುತ್ತವೆ. ಅವು ಆ ಜೇನನ್ನು ಅನೇಕ ಬಾರಿ ತಮ್ಮ ದೇಹದ ಒಳಗೂ ಹೊರಗೂ ಬಲವಂತವಾಗಿ ಸಾಗಿಸಿ, ಮಿಶ್ರಮಾಡುವುವು. ಆಗ ಜೇನು ಹುಟ್ಟಿನ ಮೇಣದ ಅರೆಗಳಲ್ಲಿ ಕೂಡಿಡಲು ಯೋಗ್ಯವಾಗುತ್ತದೆ. ಜೇನಿನಲ್ಲಿದ್ದ ನೀರಿನ ಅಂಶವೆಲ್ಲ ಆವಿಯಾಗಿ ಹೋಗುತ್ತದೆ. ಅದು ದಪ್ಪವಾಗಿ, ಹೊಂಬಣ್ಣ ತಾಳಿದಾಗ, ಅರೆಗಳಿಗೆ ಮೇಣ ಹಾಕಿ ಅದನ್ನು ಭದ್ರವಾಗಿ ಮುಚ್ಚಿಡುತ್ತವೆ. ಆ ಮೇಲೆ, ಅರೆಗಳನ್ನು ತೆರೆಯುವುದು ಚಳಿಗಾಲದಲ್ಲಿ, ಜೇನು ಬೇಕಾದಾಗ.

ಜೇನ್ನೊಣ ಝೇಂಕರಿಸುವುದು ಹೇಗೆ? ಅದು ಕಡಿಯುವುದು ಏಕೆ ?

ರೆಕ್ಕೆಗಳ ಬಡಿತವೇ ಝೇಂಕಾರದ ಮೂಲ. ಅವು ಬಹು ರಭಸದಿಂದ ಅತ್ತಿತ್ತ ಚಲಿಸಿ ಕಂಪಿಸುತ್ತವೆ. ಕಂಪನದಿಂದ ಗಾಳಿಯಲ್ಲಿ ಶಬ್ದದ ಅಲೆಗಳು ಹೊರಡುತ್ತವೆ. ಅಲೆಗಳೇ ಝೇಂಕಾರವನ್ನು ನಮ್ಮ ಕಿವಿಗಳಿಗೆ ಮುಟ್ಟಿಸುವುದು.

ತನ್ನ ಜೀವಕ್ಕೋ ಗೂಡಿಗೋ ಅಪಾಯ ಬಂದಾಗ ರಕ್ಷಿಸಿಕೊಳ್ಳಲಿಕ್ಕಾಗಿಯೇ, ಜೇನು ಹುಳು ಕಡಿಯುವುದು. ಅದರ ಸಮಾಜದ ರಕ್ಷಣೆಯ ಹೊಣೆ-ಕೆಲಸಗಾರರದು. ಜೇನ್ನೊಣದ ಕೊಂಡಿ ತುದಿ ಮೊನಚಾದ, ಉದ್ದವಾದ ಒಂದು ಟೊಳ್ಳು ನಳಿಗೆ. ಅದು ಹುಳುವಿನ ದೇಹದ ಹಿಂಬದಿಯಿಂದ ಹೊರಡುತ್ತದೆ. ರಕ್ಷಣೆಯ ಪ್ರಸಂಗ ಬಂದಾಗ, ಒಂದು ತೊಟ್ಟು ವಿಷ, ಈ ನಳಿಗೆಗೆ ಬಲವಂತವಾಗಿ ಇಳಿಯುತ್ತದೆ. ಕೊಂಡಿಯ ಮೊನೆಯಿಂದ ನೊಣ ವೈರಿಯನ್ನು ಇರಿದಾಗ, ಆ ವಿಷ ಹೊರಸೂಸುತ್ತದೆ.

ಹಾಗೆ ಇರಿದ ಬಳಿಕ ಆ ಕೊಂಡಿಯನ್ನು ಹಿಂದಕ್ಕೆಳೆಯುವಾಗ, ಅದರ ಮೊನೆ ಮುರಿಯುವುದು ಸಾಮಾನ್ಯ. ಆದುದರಿಂದಲೇ ಒಂದು ಜೇನ್ನೊಣ ತನ್ನ ಜೀವಮಾನದಲ್ಲಿ ಒಮ್ಮೆ ಮಾತ್ರ ಇರಿಯಬಲ್ಲುದು. ಕೆಲವು ಸಾರಿ ಈ ಕೊಂಡಿಯೇ ದೇಹದಿಂದ ಕಿತ್ತು ಹೋಗಿ ಅದಕ್ಕೆ ಸಾವು ಸಂಭವಿಸುವುದೂ ಉಂಟು. ಆದರೆ ರಾಣಿ ಜೇನ್ನೊಣದ ಕೊಂಡಿಗೆ ಮುಳ್ಳಿಲ್ಲ. ಅದು ತನ್ನ ಎದುರಾಳಿ ರಾಣಿಯ ಮೇಲೆ ಕೊಂಡಿಯನ್ನು ಮೇಲಿಂದ ಮೇಲೆ ಪ್ರಯೋಗಿಸಬಲ್ಲುದು. ಗಂಡು ಜೇನ್ನೊಣಗಳಿಗೆ ಕೊಂಡಿಯೇ ಇಲ್ಲ. ಕೊಂಡಿಯಿಲ್ಲದೆ ಹೋದರೂ, ಹರಿತವಾಗಿ ಕಚ್ಚಬಲ್ಲ ಕೆಲವು ಜಾತಿ ಜೇನ್ನೊಣಗಳೂ ಇವೆ.

## ಶಬ್ದಗಳ ಅರ್ಥ :

**ದಿಗ್ಭ್ರಮೆ** – ಗಾಬರಿ, ದಿಕ್ಕು ತೋರದಿರುವುದು; **ರಾತ್ತು** – ಒಂದು ಅಳತೆಯಮಾನ; **ಮೊನಚಾದ** – ಚೂಪಾದ; **ತೊಟ್ಟು** – ಹನಿ; **ಝೇಂಕಾರ** – ದುಂಬಿಯ ಧ್ವನಿ.

### ಕೃತಿ -1) ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1) ಜೇನು ಹುಟ್ಟಿನಲ್ಲಿ ಮೊಟ್ಟೆಯಿಡುವ ಕೆಲಸ ಯಾರದು ?

2) ಜೇನು ಯಾವುದರಿಂದ ತಯಾರಾಗುವುದು ?

### ಕೃತಿ - 2) ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

1) ಜೇನ್ನೊಣ-ಕೆಲಸಗಾರರ ಹುಳುಗಳ ಕಾರ್ಯವೇನು?

2) ಜೇನ್ನೊಣ ಝೇಂಕರಿಸುವುದು ಹೇಗೆ ?

### ಕೃತಿ-3) ಹೊಂದಿಸಿ ಬರೆಯಿರಿ

| | 'ಅ' ಗುಂಪು | 'ಬ'ಗುಂಪು |
|---|---|---|
| 1) | ದುಂಬಿಯ | (ಅ) ಹೂಂಕಾರ |
| 2) | ಕುದುರೆಯ | (ಆ) ಝೇಂಕಾರ |
| 3) | ಸಿಂಹದ | (ಇ) ಘೀಳು |
| 4) | ಆನೆಯ | (ಈ) ಗರ್ಜನೆ |
| 5) | ನಾಯಿಯ | (ಉ) ಕೂಗು |
| 6) | ಕೋಳಿಯ | (ಊ) ಚಿಲಿಪಿಲಿ |
| 7) | ಹಕ್ಕಿಯ | (ಎ) ಬೊಗಳು |

### ಕೃತಿ-4) ರೇಶ್ಮೆ ಹುಳದ ಮಾಹಿತಿ ಪಡೆದು, ರೇಶ್ಮೆ ತಯಾರಾಗುವ ಕ್ರಮವನ್ನು ತಿಳಿದುಕೊಳ್ಳಿರಿ.

### ಕೃತಿ-5) ಉದಾಹರಣೆಯಂತೆ ಶಬ್ದಗಳನ್ನು ಬರೆಯಿರಿ

**ಉದಾ** – ಜೇನಿನ – ಗೂಡು

ಜೇಡರ –		ಮನುಷ್ಯರ –

ಸಿಂಹದ –		ಹಾವಿನ –

ಇಲಿಗಳ –

### ಕೃತಿ-6) ಕೆಳಗಿನ ವಾಕ್ಯಗಳಲ್ಲಿ 'ಬಗೆ' ಈ ಶಬ್ದದ ಸಾಂದರ್ಭಿಕ ಅರ್ಥವನ್ನು ಬರೆಯಿರಿ.

1) ಸಮಾಜದಲ್ಲಿ ಅನೇಕ ಬಗೆಯ ವ್ಯಕ್ತಿಗಳು ಕಂಡು ಬರುತ್ತಾರೆ.

2) ಉಪ್ಪು ತಿಂದ ಮನೆಗೆ ಎಂದೂ ಎರಡು ಬಗೆಯ ಬೇಡ.

3) ಬಲ್ಲವರು ಗುರು ಹಿರಿಯರನ್ನು ದೇವರೆಂದು ಬಗೆಯುತ್ತಾರೆ.

CRG702

# ವ್ಯಾಕರಣ ವಿಭಾಗ

## ನಾಮಪದಗಳು

**ನಾಮಪದ –** 'ನಾಮ' ಎಂದರೆ ವಸ್ತುಗಳನ್ನು, ವ್ಯಕ್ತಿ, ಪ್ರಾಣಿ, ಪಕ್ಷಿ, ಇತ್ಯಾದಿಗಳನ್ನು ಸೂಚಿಸುವ ಹೆಸರುಗಳು. ಪದ – ಎಂದರೆ ಪ್ರಕೃತಿಗಳಿಗೆ ಪ್ರತ್ಯಯಗಳು ಸೇರಿದಾಗ ಪದಗಳಾಗುವವು.

ನಾವು ಮಾತನಾಡುವ ಮಾತುಗಳಲ್ಲಿ ಅನೇಕ ರೀತಿಯ ಶಬ್ದಗಳಿರುತ್ತವೆ. ಆ ಶಬ್ದಗಳಿಗೆ ನಾವು ಬೇರೆ ಬೇರೆ ಹೆಸರುಗಳನ್ನು ಕೊಟ್ಟಿರುತ್ತೇವೆ. ಅಂದರೆ ಒಂದೊಂದು ಜಾತಿಯ ಶಬ್ದಗಳನ್ನು ಒಂದೊಂದು ಗುಂಪು ಮಾಡಿ ವ್ಯಾಕರಣದಲ್ಲಿ ಹೇಳುತ್ತೇವೆ.

**ಉದಾ–**

1) ರಾಮನು ಮನೆಯನ್ನು ಚೆನ್ನಾಗಿ ಕಟ್ಟಿದನು.

2) ಒಕ್ಕಲಿಗರು ಕಷ್ಟದಿಂದ ಬೆಳೆಯನ್ನು ಬೆಳೆಯುವರು.

**ಈ ಮೇಲಿನ ವಾಕ್ಯಗಳಲ್ಲಿ –**

1) ರಾಮನು, ಮನೆಯನ್ನು, ಒಕ್ಕಲಿಗರು, ಬೆಳೆಯನ್ನು ಇವೆಲ್ಲ ಪದಗಳು ನಾಮ ಪದಗಳಾಗಿವೆ.

2) ಚೆನ್ನಾಗಿ – ಇದು ಅವ್ಯಯ

ಹೀಗೆ ನಾವು ಆಡುವ ಮಾತುಗಳಲ್ಲಿ ಮುಖ್ಯವಾಗಿ ಮೂರು ಗುಂಪನ್ನು ಮಾಡುತ್ತೇವೆ.

**1) ನಾಮಪದ 2) ಕ್ರಿಯಾಪದ 3) ಅವ್ಯಯ**

ನದಿ, ಗಿಡ, ಮರ ಮನೆ, ರಮೇಶ, ರಾಧೆ, ಸಂಗೀತಾ, ನಾಯಿ, ಹಳ್ಳಿ, ಗಿಳಿ, ಬೆಕ್ಕು–ಇತ್ಯಾದಿಗಳು ನಾಮಪದಗಳು

## ಸರ್ವನಾಮಗಳು

ನಾಮಪದದ ಬದಲಾಗಿ ಬಳಸುವ ಪದಗಳಿಗೆ ಸರ್ವನಾಮಗಳೆಂದು ಕರೆಯುವರು.

**ಉದಾ –** ನಾನು, ನೀನು, ಅವನು, ಅವಳು, ಅದು, ಇದು, ತಾನು, ತಾವು ಇತ್ಯಾದಿಗಳು.

ಸರ್ವನಾಮಗಳಲ್ಲಿ **ಮೂರು** ವಿಧಗಳು.

1) ಪುರುಷಾರ್ಥಕ ಸರ್ವನಾಮಗಳು.

2) ಪ್ರಶ್ನಾರ್ಥಕ ಸರ್ವನಾಮಗಳು.

3) ಆತ್ಮಾರ್ಥಕ ಸರ್ವನಾಮಗಳು.

1) **ಪುರುಷಾರ್ಥಕ ಸರ್ವನಾಮಗಳು –** ನಾನು, ನಾವು, ನೀನು, ನೀವು, ಇವನು, ಇವಳು, ಇದು, ಇವು, ಅವನು, ಅವಳು, ಅದು ಇತ್ಯಾದಿಗಳು.

2) **ಪ್ರಶ್ನಾರ್ಥಕ ಸರ್ವನಾಮಗಳು –** ಯಾರು, ಯಾವುದು, ಏನು, ಏತರದು, ಯಾವನು, ಯಾವಳು ಇತ್ಯಾದಿ.

3) **ಆತ್ಮಾರ್ಥಕ ಸರ್ವನಾಮಗಳು –** ತಾವು, ತಾನು, ತನ್ನ ಮೊದಲಾದವುಗಳು.

# ವಿಶೇಷಣಗಳು

ಯಾವುದಾದರೊಂದು ವಸ್ತು, ವ್ಯಕ್ತಿ ಮೊದಲಾದವುಗಳ ಗುಣ, ಬಣ್ಣ, ಗಾತ್ರ, ಇತ್ಯಾದಿಗಳನ್ನು ಹೇಳುವ ಪದಗಳಿಗೆ ವಿಶೇಷಣಗಳು ಎಂದು ಕರೆಯುತ್ತಾರೆ.

ಇದರಲ್ಲಿ ಗುಣವಾಚಕ, ಪರಿಮಾಣವಾಚಕ ಹಾಗೂ ಸಂಖ್ಯಾವಾಚಕ ವಿಶೇಷಣಗಳೆಂದು 3 ಪ್ರಕಾರಗಳುಂಟು.

1) **ಗುಣವಾಚಕ:-** ಯಾವುದೇ ಒಂದು ವಸ್ತು ಅಥವಾ ವ್ಯಕ್ತಿಯ ಗುಣವನ್ನು ಸೂಚಿಸುವುದಕ್ಕೆ ಗುಣವಾಚಕ ಎನ್ನುವರು.

**ಉದಾ:-** ಒಳ್ಳೆಯ ಹುಡುಗ

ಮಧುರವಾದ ಧ್ವನಿ

ಬಿಳಿಯ ಕೊಡೆ

ಕೆಂಪು ಟೊಪ್ಪಿಗೆ

2) **ಪರಿಮಾಣ ವಾಚಕ -** ಯಾವುದೇ ಒಂದು ವಸ್ತುವಿನ ಅಥವಾ ವ್ಯಕ್ತಿಯ ಪ್ರಮಾಣವನ್ನು ಸೂಚಿಸುವುದಕ್ಕೆ ಪರಿಮಾಣವಾಚಕ ಎನ್ನುವರು.

**ಉದಾ:-** ದೊಡ್ಡ ಮನೆ

ಹಿರಿಯ ಮಗ

ಚಿಕ್ಕ ಊರು

3) **ಸಂಖ್ಯಾವಾಚಕ -** ವ್ಯಕ್ತಿ ಅಥವಾ ವಸ್ತುವಿನ ಸಂಖ್ಯೆಯನ್ನು ಸೂಚಿಸುವುದೇ ಸಂಖ್ಯಾವಾಚಕ ವಿಶೇಷಣವಾಗಿದೆ.

**ಉದಾ:-** ಹತ್ತು ತಲೆಗಳು

ಇಪ್ಪತ್ತು ಭುಜಗಳು

ಐದು ಮುಖಗಳು

ಮೂವತ್ತು ಕುದುರೆಗಳು

# ಲಿಂಗಗಳು

ನಾಮ ಪದಗಳು ಲಿಂಗ, ವಚನ, ವಿಭಕ್ತಿಗಳೆಂಬ ಮೂರು ಅಂಶಗಳನ್ನು ಒಳಗೊಂಡಿರುತ್ತವೆ.

**ಉದಾ-** ರಾಜು ತನ್ನ ತಮ್ಮನಿಗೆ ಬುದ್ಧಿ ಹೇಳಿದನು.

ಶಾಕುಂತಲ ಉಳಿದ ಸ್ತ್ರೀಯರಿಗೆ ಕರೆ ನೀಡಿದಳು.

ಗಿಡವು ಹಣ್ಣು ಬಿಟ್ಟಿತು.

ಈ ಮೇಲಿನ ವಾಕ್ಯಗಳಲ್ಲಿ ವಿಜಯನು, ತಮ್ಮನಿಗೆ, ಶಾಕುಂತಲ, ಸ್ತ್ರೀಯರಿಗೆ, ಗಿಡ, ಹಣ್ಣು, ಎಂಬ ನಾಮಪದಗಳು ಬಳಕೆಯಾಗಿವೆ. ಇದರಲ್ಲಿ ವಿಜಯ, ತಮ್ಮ, ಶಬ್ದಗಳ 'ಗಂಡಸು' ಎಂಬ ಅರ್ಥವನ್ನು ಕೊಟ್ಟರೆ ಶಾಂತಲ, ಸ್ತ್ರೀ ಎಂಬ ಶಬ್ದಗಳು 'ಹೆಂಗಸು' ಎಂಬ ಅರ್ಥವನ್ನು ಕೊಟ್ಟರೆ, ಗಿಡ-ಹಣ್ಣು ಎಂಬ ಶಬ್ದಗಳು 'ಗಂಡಸು-ಹೆಂಗಸು ಎರಡೂ ಅಲ್ಲ ಎಂಬರ್ಥವನ್ನು ನೀಡುತ್ತವೆ. ಹಾಗಾದರೆ ಈಗ ಲಿಂಗಗಳ ಬಗ್ಗೆ ಅಭ್ಯಸಿಸೋಣ.

ಕೇಶಿರಾಜನು – ಲಿಂಗಗಳಲ್ಲಿ **ಒಂಭತ್ತು** ವಿಧಗಳೆಂದು ಹೇಳಿದ್ದರೂ, ಪ್ರಚಲಿತವಾಗಿ ಬಳಕೆಯಲ್ಲಿರುವ ಲಿಂಗಗಳು ಮಾತ್ರ **ಮೂರೇ** ಮೂರು.

1) **ಪುಲ್ಲಿಂಗ –** ಯಾವ ಶಬ್ದವನ್ನು ಕೇಳಿದಾಗ 'ಗಂಡಸು' ಎಂಬ ಅರ್ಥ ಮನಸ್ಸಿಗೆ ಹೊಳೆಯುವುದೋ ಅದು 'ಪುಲ್ಲಿಂಗ'

ಉದಾ – ರಾಮ, ವಿಜಯ, ಕಳ್ಳ, ರಾಜ, ತಂದೆ, ಅಣ್ಣ, ಚಿಕ್ಕಪ್ಪ, ಇತ್ಯಾದಿ.

2) **ಸ್ತ್ರೀಲಿಂಗ :** ಯಾವ ಶಬ್ದವನ್ನು ಕೇಳಿದಾಗ 'ಹೆಂಗಸು' ಎಂಬ ಅರ್ಥ ಮನಸ್ಸಿಗೆ ಹೊಳೆಯುವುದೋ ಅದು 'ಸ್ತ್ರೀಲಿಂಗ'

ಉದಾ – ಅಕ್ಕ, ಅಜ್ಜಿ, ಅತ್ತೆ, ತಾಯಿ ಚಲುವೆ, ಗಾಯತ್ರಿ, ರಾಣಿ, ಬಾಲಕಿ, ಮಗಳು ಇತ್ಯಾದಿ.

3) **ನಪುಂಸಕ ಲಿಂಗ –** ಯಾವ ಶಬ್ದವನ್ನು ಕೇಳಿದಾಗ 'ಗಂಡಸೂ–ಹೆಂಗಸೂ' ಎರಡೂ ಅಲ್ಲ ಎಂಬ ಅರ್ಥ ಮನಸ್ಸಿಗೆ ಹೊಳೆಯುವುದೋ ಅದು ನಪುಂಸಕಲಿಂಗ.

ಉದಾ – ಮನೆ, ನೆಲ, ಕಲ್ಲು, ಆನೆ, ಸಿಂಹ, ಮಗು, ಆಕಾಶ, ಹಾವು ಇತ್ಯಾದಿ.

# ವಚನಗಳು

ಕನ್ನಡ ಭಾಷೆಯಲ್ಲಿ 'ಏಕವಚನ' ಹಾಗೂ 'ಬಹುವಚನ' ಎಂದು ವಚನಗಳಲ್ಲಿ ಎರಡು ಪ್ರಕಾರಗಳಿವೆ.

1) **ಏಕವಚನ:–** ಒಂದು ವಸ್ತು, ಒಬ್ಬ ವ್ಯಕ್ತಿ ಅಥವಾ ಒಂದು ಪ್ರಾಣಿಯನ್ನು ಸೂಚಿಸುವ ಶಬ್ದಗಳೇ ಏಕವಚನ ಶಬ್ದಗಳು.

ಉದಾ ಮನೆ, ಗಿರಿಜೆ, ವಿದ್ಯಾರ್ಥಿ, ಮರ, ನಾಯಿ, ಬೆಕ್ಕು, ಗಿಳಿ ಇತ್ಯಾದಿಗಳು.

2) **ಬಹುವಚನ :–** ಒಂದಕ್ಕಿಂತ ಹೆಚ್ಚು ವಸ್ತು, ವ್ಯಕ್ತಿ, ಅಥವಾ ಪ್ರಾಣಿಗಳನ್ನು ಸೂಚಿಸುವ ಶಬ್ದಗಳೇ ಬಹುವಚನ ಶಬ್ದಗಳು.

**ಉದಾ :–** ಪಕ್ಷಿಗಳು, ನಾಯಿಗಳು, ಗಿಳಿಗಳು, ಹಣ್ಣುಗಳು ಮುಂತಾದವು.

ಏಕವಚನ ಪದಗಳನ್ನು ಬಹುವಚನ ರೂಪದಲ್ಲಿ ಬಳಸುವಾಗ 'ಗಳು' 'ಅರು' 'ಅಂದಿರು' ಮೊದಲಾದ ಪ್ರತ್ಯಯಗಳನ್ನು ಸೇರಿಸುತ್ತೇವೆ. ಅಂತಹ ಪ್ರತ್ಯಯಗಳನ್ನು 'ಬಹುವಚನ ಪ್ರತ್ಯಯ'ಗಳು ಎನ್ನುತ್ತೇವೆ.

**'ಗಳು' ಬಹುವಚನ ಪ್ರತ್ಯಯ**

**ಉದಾ:–** ಮರ+ಗಳು = ಮರಗಳು          ನದಿ+ಗಳು = ನದಿಗಳು

ಹಸು+ಗಳು = ಹಸುಗಳು          ಊರು+ಗಳು = ಊರುಗಳು

**'ಅರು' ಬಹುವಚನ ಪ್ರತ್ಯಯ**

**ಉದಾ:–** ಹುಡುಗ+ಅರು = ಹುಡುಗರು          ಗಂಡಸು+ಅರು = ಗಂಡಸರು

ಹುಡುಗಿ+ಅರು = ಹುಡುಗಿಯರು          ಅತ್ತೆ+ಅರು = ಅತ್ತೆಯರು

**'ಅಂದಿರು' ಬಹುವಚನ ಪ್ರತ್ಯಯ**

**ಉದಾ:-** ಅಕ್ಕ+ಅಂದಿರು = ಅಕ್ಕಂದಿರು    ಮಾವ+ಅಂದಿರು = ಮಾವಂದಿರು

ಅಣ್ಣ+ಅಂದಿರು = ಅಣ್ಣಂದಿರು    ಅಜ್ಜ+ಅಂದಿರು = ಅಜ್ಜಂದಿರು

ಬಹುವಚನ ಸೂಚಕ ಪ್ರತ್ಯಯಗಳಾದ 'ಗಳು' 'ಅರು' 'ಅಂದಿರು' ಇವುಗಳನ್ನು ಏಕವಚನದ ಸಂದರ್ಭದಲ್ಲಿಯೂ ಬಳಸುವುದು ವಾಡಿಕೆಯಲ್ಲಿದೆ. ಅದಕ್ಕೆ **ಗೌರವಾರ್ಥಕ ಬಹುವಚನ**ವೆನ್ನುವರು.

**ಉದಾ:-** ಗುರುಗಳು, ರಾಜರುಗಳು, ಬಸವಣ್ಣನವರು, ಗಾಂಧೀಜಿಯವರು ಮುಂತಾದವುಗಳು.

# ವಿಭಕ್ತಿಗಳು

ನಮ್ಮ ಮನಸ್ಸಿನ ಭಾವನೆ ಇನ್ನೊಬ್ಬರಿಗೆ ತಿಳಿಯಬೇಕಾದರೆ ವಾಕ್ಯದಲ್ಲಿ ಪದಗಳಿರಬೇಕು ಮತ್ತು ಅರ್ಥವಿರಬೇಕು. ಪದಗಳಿಗೆ ಸ್ವತಂತ್ರವಾಗಿ ಅರ್ಥವಿರುತ್ತದೆ ಎಂಬುದು ನಿಜ. ಆದರೆ ವಾಕ್ಯದ ಒಟ್ಟು ಅಭಿಪ್ರಾಯ ತಿಳಿಯಬೇಕಾದರೆ ಅರ್ಥ ಸಹಿತವಾದ ಪದಗಳಿದ್ದರೆ ಮಾತ್ರ ಸಾಲದು ಒಂದೊಂದು ಪದಕ್ಕೂ ಸಂಬಂಧವಿರಬೇಕು.

**ಉದಾ:-** ಸೌದೆ ಒಡೆ ರವಿ ಹಣ ಕೊಡು

ಮೈಸೂರು ಕಲಾಮಂದಿರ ಶಾಲಾ ದಿನಾಚರಣೆ ಆಚರಿಸಿದರು.

ಇವುಗಳ ಅರ್ಥ ಪೂರ್ಣ ವಾಕ್ಯ ಮಾಡಲು ಈ ವಾಕ್ಯಗಳಲ್ಲಿರುವ ನಾಮವಾಚಕ ಶಬ್ದಗಳಿಗೆ ಕೆಲವು ಪ್ರತ್ಯಯಗಳನ್ನು ಸೇರಿಸಿ ಹೀಗೆ ಹೇಳಬೇಕಾಗುತ್ತದೆ.

ಸೌದೆಯನ್ನು ಒಡೆದ ರವಿಗೆ ಹಣವನ್ನು ಕೊಡು.

ಮೈಸೂರಿನ ಕಲಾಮಂದಿರದಲ್ಲಿ ಶಾಲಾ ದಿನಾಚರಣೆಯನ್ನು ಆಚರಿಸಿದರು.

ಹೀಗೆ ಅನ್ನು, ಇಗೆ, ರಿ, ರಿಲ್ಲಿ, ಎಂಬ ಪ್ರತ್ಯಯಗಳು ಸೇರಿದಾಗ ಅರ್ಥ ಸ್ಪಷ್ಟವಾಗುತ್ತದೆ. ಯಾವುದೇ ವಾಕ್ಯದಲ್ಲಿ ಅರ್ಥಸ್ಪಷ್ಟತೆಗಾಗಿ ನಾಮವಾಚಕಗಳಿಗೆ ಇಂಥ ಪ್ರತ್ಯಯಗಳನ್ನು ಹಚ್ಚಬೇಕಾಗುತ್ತದೆ. ಇವುಗಳೇ ವಿಭಕ್ತಿ ಪ್ರತ್ಯಯಗಳು. ವಿಭಕ್ತಿ ಪ್ರತ್ಯಯಗಳು ವಾಕ್ಯದಲ್ಲಿರುವ ಪದ ಪದಗಳಿಗೆ ಸಂಬಂಧವನ್ನು ಸೂಚಿಸುತ್ತವೆ.

ವಿಭಕ್ತಿ ಪ್ರತ್ಯಯಗಳಲ್ಲಿ ಒಟ್ಟು ಎಂಟು ಪ್ರಕಾರಗಳಿದ್ದು ಅವು ಈ ಕೆಳಗಿನಂತಿವೆ.

| ವಿಭಕ್ತಿ | | ಪ್ರತ್ಯಯ | ಉದಾ. | |
|---|---|---|---|---|
| | | | ಏಕವಚನ | ಬಹುವಚನ |
| ಪ್ರಥಮಾ | – | ಉ | ಮರವು | ಮರಗಳು |
| ದ್ವಿತೀಯಾ | – | ಅನ್ನು | ಮರವನ್ನು | ಮರಗಳನ್ನು |
| ತೃತೀಯಾ | – | ಇಂದ | ಮರದಿಂದ | ಮರಗಳಿಂದ |
| ಚತುರ್ಥೀ | – | ಗೆ, ಇಗೆ, ಅಕ್ಕೆ | ಮರಕ್ಕೆ | ಮರಗಳಿಗೆ |

| | | | | |
|---|---|---|---|---|
| ಪಂಚಮಿ | – | ದೆಸೆಯಿಂದ | ಮರದ ದೆಸೆಯಿಂದ | ಮರಗಳ ದೆಸೆಯಿಂದ |
| ಷಷ್ಠೀ | – | ಅ | ಮರದ | ಮರಗಳ |
| ಸಪ್ತಮೀ | – | ಅಲ್ಲಿ | ಮರದಲ್ಲಿ | ಮರಗಳಲ್ಲಿ |
| ಸಂಬೋಧನಾ | – | ಏ, ಇರಾ | ಮರವೇ | ಮರಗಳೇ |

# ಉಪಸರ್ಗಗಳು

ವಿಭಕ್ತಿ ಪ್ರತ್ಯಯಗಳು ಹಾಗೂ ಬಹುವಚನ ಪ್ರತ್ಯಯಗಳು ಶಬ್ದಗಳ ಕೊನೆಗೆ ಹತ್ತುತ್ತವೆ. ಆದರೆ ಉಪಸರ್ಗಗಳು ಶಬ್ದದ ಮೊದಲು ಹತ್ತಿ ಆ ಶಬ್ದದ ಅರ್ಥವನ್ನು ಪೂರ್ತಿಯಾಗಿ, ಅಥವಾ ಅಲ್ಪ ಪ್ರಮಾಣದಲ್ಲಿ ಬದಲಾವಣೆಯನ್ನು ಮಾಡುತ್ತವೆ. ಇವುಗಳಿಗೆ ಉಪಸರ್ಗಗಳೆನ್ನುವರು.

**ಉದಾ –** ಉಪಸರ್ಗ + ಪದ = ಉಪಸರ್ಗಯುಕ್ತ ಪದ

| | | | | |
|---|---|---|---|---|
| ವಿ | + | ಚಿತ್ರ | = | ವಿಚಿತ್ರ |
| ಸು | + | ಜಲ | = | ಸುಜಲ |
| ಅ | + | ಚಲ | = | ಅಚಲ |
| ಅವ | + | ಮಾನ | = | ಅವಮಾನ |
| ಸು | + | ಪುತ್ರ | = | ಸುಪುತ್ರ |

# ಕಾಲಗಳು

ನಡೆಯುತ್ತಿರುವ, ನಡೆದ, ಹಾಗೂ ನಡೆಯಲಿರುವ ಘಟನೆಗಳನ್ನು ಸೂಚಿಸುವ ಕ್ರಿಯೆಗಳೇ ಕಾಲಗಳು. ಇವುಗಳಲ್ಲಿ ಮೂರು ಪ್ರಕಾರಗಳಿವೆ.

**1) ವರ್ತಮಾನ ಕಾಲ** **2) ಭೂತಕಾಲ** **3) ಭವಿಷ್ಯತ್ ಕಾಲ**

**1) ವರ್ತಮಾನ ಕಾಲ:–** ವರ್ತಮಾನ ಕಾಲದಲ್ಲಿ ಕ್ರಿಯೆಯು ನಡೆಯುತ್ತಿರುವುದನ್ನು ಸೂಚಿಸುತ್ತದೆ. ಅಂದರೆ ಕ್ಷಣ ಸದ್ಯದ ಸಮಯ, ದಿನವನ್ನು ವರ್ತಮಾನ ಕಾಲವೆನ್ನುತ್ತೇವೆ. ಈಗಿನ ಸಮಯದಲ್ಲಿ ನಡೆದರೆ ಅದು ವರ್ತಮಾನ ಕಾಲದ್ದಾಗಿದೆ ಎಂದು ಹೇಳಬಹುದು.

**ಉದಾ –** ಗಿರಿಜೆಯು ಶಾಲೆಗೆ ಹೋಗುತ್ತಾಳೆ.

ಶಂಕರನು ಊಟ ಮಾಡುತ್ತಾನೆ.

**2) ಭೂತಕಾಲ:–** ಭೂತ ಕಾಲದಲ್ಲಿ ಈ ಹಿಂದೆ ನಡೆದು ಹೋದ ಕ್ರಿಯೆಯನ್ನು ವಿವರಿಸುವ ಕಾಲವಾಗಿದೆ. ಅಂದರೆ ಈ ಸಮಯದಲ್ಲಿ ಆ ಕ್ರಿಯೆಯು ಮುಗಿದು ಹೋಗಿರುತ್ತದೆ. ಈ ಸಮಯಕ್ಕಿಂತ ಮೊದಲು (ಹಿಂದೆ) ಕ್ರಿಯೆಯು ನಡೆದು ಹೋಗಿದ್ದರೆ ಅದಕ್ಕೆ ಭೂತಕಾಲ ಎನ್ನುವರು.

**ಉದಾ -** ರಾಮನು ಶಾಲೆಗೆ ಹೋದನು.

ಕಮಲೆಯು ಹಾಡನ್ನು ಹಾಡಿದಳು.

3) **ಭವಿಷ್ಯತ್‌ಕಾಲ :-** ಇನ್ನು ಮುಂದೆ ನಡೆಯುವ ಕ್ರಿಯೆಯನ್ನು ವಿವರಿಸುವ ಕಾಲವಾಗಿದೆ. ಅಂದರೆ ಕ್ರಿಯೆಯು ಈ ಸಮಯದ ಮುಂದೆ ಜರುಗಲಿದೆ ಎಂದು ಅರ್ಥ. ಸದ್ಯದ ಕಾಲಕ್ಕಿಂತ ಮುಂದೆ ಕ್ರಿಯೆಯು ನಡೆಯುವದಿದ್ದರೆ ಅದು ಭವಿಷ್ಯತ್ ಕಾಲವೆನಿಸುವುದು.

**ಉದಾ:-** ಗಂಗೆಯು ಊಟವನ್ನು ಮಾಡುವಳು.

ರಾಮನು ನಾಟಕವನ್ನು ಮಾಡುವನು.

# ಕರ್ತೃ, ಕರ್ಮ, ಕ್ರಿಯಾಪದಗಳು

ವಾಕ್ಯ:- ಪೂರ್ಣ ಅರ್ಥವನ್ನು ಕೊಡುವ ಶಬ್ದಗಳ ಗುಂಪಿಗೆ 'ವಾಕ್ಯ' ಎನ್ನುವರು.

**ಉದಾ:-** ಮೋಹನ ಶಾಲೆಗೆ ಹೋಗುತ್ತಾನೆ.

ಶಂಕರಿ ಊಟವನ್ನು ಮಾಡಿದಳು.

ಮೇಲಿನ ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯಾಪದ ಎಂಬ ಮೂರು ಮುಖ್ಯವಾದ ಅಂಗಗಳಿವೆ.

1) **ಕರ್ತೃ** ವಾಕ್ಯದಲ್ಲಿಯ ಕ್ರಿಯೆಗೆ ಯಾವುದು ಕಾರಣವಾಗಿರುವುದೋ ಅದು ಕರ್ತೃ.

2) **ಕರ್ಮ** ವಾಕ್ಯದಲ್ಲಿ ಕಾರ್ಯವು ಯಾವುದನ್ನು ಅವಲಂಬಿಸಿರುತ್ತದೆಯೋ ಅದು ಕರ್ಮ.

3) **ಕ್ರಿಯಾಪದ** ಕಾರ್ಯವನ್ನು ಸೂಚಿಸುವ ಪದಕ್ಕೆ ಕ್ರಿಯಾಪದ ಎನ್ನುವರು.

**ಉದಾ:-** ಶಂಕರಿ ಊಟವನ್ನು ಮಾಡಿದಳು.

ಮೇಲಿನ ವಾಕ್ಯದಲ್ಲಿ - ಶಂಕರಿ - ಕರ್ತೃ


ಊಟವನ್ನು - ಕರ್ಮ

ಮಾಡಿದಳು - ಕ್ರಿಯಾಪದ



































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

कन्नड सुगमभारती इयत्ता ९ वी

₹ 38.00